ಹವಿಗನ್ನಡ ಸಾಹಿತ್ಯ ಮಾಲೆ

ಹವಿಗನ್ನಡ ಚಿಂತನ

ನಾರಾಯಣ ಶಾನಭಾಗ

ಹವ್ಯಕ ಅಧ್ಯಯನ ಕೇಂದ್ರ
ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ.), ಬೆಂಗಳೂರು.

ಹವಿಗನ್ನಡ ಸಾಹಿತ್ಯ ಮಾಲೆ – 1

ಹವಿಗನ್ನಡ ಚಿಂತನ

ನಾರಾಯಣ ಶಾನಭಾಗ ಇಂದ
ಡಾ॥ ಶ್ರೀನಿವಾಸ ಹಾವನೂರು ಇವರಿಗೆ
ಆದರದಿಂದ
ನಾಶಾ
28/6/01

ಹವ್ಯಕ ಅಧ್ಯಯನ ಕೇಂದ್ರ
ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು

ಹವಿಗನ್ನಡ ಚಿಂತನ : ಲೇ: ನಾರಾಯಣ ಶಾನಭಾಗ, ಪ್ರಧಾನ ನಿರ್ದೇಶಕ,
ಹವ್ಯಕ ಅಧ್ಯಯನ ಕೇಂದ್ರ, ಶ್ರೀ ಅಖಿಲ ಹವ್ಯಕ ಮಹಾಸಭಾ, ಬೆಂಗಳೂರು
ದೂರವಾಣಿ : 26592097 (ಮನೆ)

ಪ್ರ.ಮು.: ಡಿಸೆಂಬರ 2006

ಪುಟ : 104 + xvi

ಕೃತಿ ಸಹಾಯ ಧನ : ರೂ. 50/-

ಪ್ರಕಾಶನ : ಹವ್ಯಕ ಅಧ್ಯಯನ ಕೇಂದ್ರ
ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು
101/1, 11ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ
ಮಲ್ಲೇಶ್ವರಂ, ಬೆಂಗಳೂರು-560 003

ಹಕ್ಕು : ಲೇಖಕರದು

ಪ್ರಾಯೋಜಕರು : ಶ್ರೀಕೃಷ್ಣ ಶಾನಭಾಗ, ಬೆಂಗಳೂರು.
ವಿನೋದ ಶಾನಭಾಗ, ಬೆಂಗಳೂರು.

ಮುದ್ರಕರು : ಪ್ರಿಂಟ್ ಮೀಡಿಯಾ
ಬೆಂಗಳೂರು.
ದೂರವಾಣಿ : 23305298

ಡಿ.ಟಿ.ಪಿ. : ವೆಕ್ಟರ್ ಗ್ರಾಫಿಕ್ಸ್
ನಂ. 10, ನಾಗಪ್ಪ ಬ್ಲಾಕ್, ಬೆಂಗಳೂರು-560 021

ಪ್ರಕಾಶಕರ ನುಡಿ

ಇತ್ತೀಚಿನ ದಶಕಗಳಲ್ಲಿ ಹಲವಾರು ಉಪಭಾಷೆಗಳು ಮರೆಯಾಗುತ್ತಿವೆ. ಅವುಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿ ಆಯಾ ಉಪಭಾಷೆ ತಾಯ್ನುಡಿಯಾಗಿರುವ ಸಮಾಜದ ಮೇಲೆ ಇದೆ.

ಕರ್ನಾಟಕದಲ್ಲಿ ಒಂದು ಚಿಕ್ಕ ಸಮಾಜ ಅಂದರೆ ಹವ್ಯಕ ಸಮಾಜ. ಈ ಸಮಾಜದ ತಾಯ್ನುಡಿ ಹವಿಗನ್ನಡ. ಕನ್ನಡದ ಉಪಭಾಷೆಗಳಲ್ಲಿ ಪ್ರಧಾನವಾದ ಈ ಉಪಭಾಷೆ ಉಳಿಸಿ ಬೆಳೆಸುವುದು ಹವ್ಯಕ ಸಮಾಜದ ಮುಂದಿರುವ ಗಂಭೀರ ಸವಾಲಾಗಿದೆ. ಈ ಬಗ್ಗೆ ಅಭಿಪ್ರಾಯ ಸಂಗ್ರಹಮಾಡಿ ಒಂದು ಕೃತಿರೂಪಕ್ಕೆ ತರುವಲ್ಲಿ ಲೇಖಕರು ತುಂಬ ಕಾಳಜಿಯಿಂದ ಪ್ರಯತ್ನಿಸಿದ್ದಾರೆ. ಇದರ ರಚನೆಯಲ್ಲಿ ಹವಿಗನ್ನಡ ಪ್ರತಿಷ್ಠಾನದ ಸಹಕಾರವೂ ಇದೆ.

ಹವ್ಯಕ ಅಧ್ಯಯನ ಕೇಂದ್ರದ ಹವಿಗನ್ನಡ ಸಾಹಿತ್ಯಮಾಲೆ ಅಡಿಯಲ್ಲಿ ಪ್ರಕಟಿಸಲು ಅನುಮತಿ ನೀಡಿದ ಲೇಖಕರಿಗೂ, ಕೃತಿಗೆ ಮುನ್ನುಡಿಯ ಕಲಶವಿಟ್ಟ ಡಾ॥ ಶಾಲಿನಿ ರಘುನಾಥ ಭಟ್ಟರಿಗೂ, ಕೃತಿ ಪ್ರಾಯೋಜಕರಾಗಿ ಪ್ರೋತ್ಸಾಹಿಸಿದ ಶಾನಭಾಗ ಸೋದರರರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಅಚ್ಚುಕಟ್ಟಾಗಿ ಬೆರಳಚ್ಚು ಮಾಡಿಕೊಟ್ಟ ವೆಕ್ಟರ್ ಗ್ರಾಫಿಕ್ಸ್‌ನವರಿಗೂ, ನಿಗದಿತ ಸಮಯದಲ್ಲಿ ಮುದ್ರಣ ಮಾಡಿಕೊಟ್ಟ ಪ್ರಿಂಟ್ ಮೀಡಿಯಾದವರಿಗೂ, ಅಧ್ಯಯನ ಕೇಂದ್ರದ ರಚನಾತ್ಮಕ ಚಟುವಟಿಕೆಗಳನ್ನು ಸದಾ ಪ್ರೋತ್ಸಾಹಿಸುತ್ತಿರುವ ಶ್ರೀ ಅಖಿಲ ಹವ್ಯಕ ಮಹಾಸಭೆಯ ಅಧ್ಯಕ್ಷರಿಗೂ, ಎಲ್ಲ ಪದಾಧಿಕಾರಿಗಳಿಗೂ ಕೃತಜ್ಞತೆಗಳು.

ಬೆಂಗಳೂರು — ಪ್ರಧಾನ ನಿರ್ದೇಶಕ

ಡಿಸೆಂಬರ 2006 — ಹವ್ಯಕ ಅಧ್ಯಯನ ಕೇಂದ್ರ

ಪರಿವಿಡಿ

★ ಪ್ರಕಾಶಕರ ನುಡಿ i

★ ಪರಿವಿಡಿ ii

★ ಲೇಖಕನ ಮಾತು iii

★ ಮುನ್ನುಡಿ v

★ ಹವಿಗನ್ನಡ - ಒಂದು ಚಿಂತನೆ 1

★ ಹವಿಗನ್ನಡ ಸಾಹಿತಿಗಳು ಎಂತಾ ಹೇಳ್ತೊ 19

★ ಹವ್ಯಕ ಮಾಸಪತ್ರಿಕೆ ಜಾಗೃತ ಓದುಗರ ಅಭಿಪ್ರಾಯ 83

★ ಅನುಬಂಧಗಳು 99

1) ಕೀರ್ತಿಶೇಷ ಹವಿಗನ್ನಡ ಗ್ರಂಥಕರ್ತರು

2) ಹವಿಗನ್ನಡ ಕುರಿತು ನಡೆದ ಅಧ್ಯಯನ ಸಂಶೋಧನೆಗಳು

3) ಹವಿಗನ್ನಡ ಪೋಷಕರು

ಲೇಖಕನ ಮಾತು

ಹವ್ಯಕ ತಾಯಿಯ ಓ ಮುದ್ದಿನ ಕರು
ಹವ್ಯಕತನವೊಂದಿದ್ದರೆ ನೀನಬ್ಬೆಗೆ ಕಲ್ಪತರು

(ಕುವೆಂಪು ಕ್ಷಮೆ ಕೋರಿ)

ಹವ್ಯಕತನ ಅಂದರೆ ಎಲ್ಲಿದ್ದು? ಯಾವದ್ರಲ್ಲಿದ್ದು? ಈ ಪ್ರಶ್ನೆ ತುಂಬಾ ಜನರನ್ನ ಕಾಡ್ತಿದ್ದು. ನನ್ನನ್ನೂ ಕಾಡಿದ್ದು. ಕಡೇಗೆ ನನಗೆ ಅನ್ಸಿದ್ದು ಇದು ಹವಿಗನ್ನಡದಲ್ಲಿ ಮಾತ್ರ ಇದ್ದು. ಮತ್ತೆ ಇನ್ನ್ಯಾವದ್ರಲ್ಲೂ ಹವ್ಯಕರದ್ದೇ ಆದ ಗುರುತಿಲ್ಲೆ ಹೇಳಿ. ಅದನ್ನ ನಾವು ಕಳ್ಕಂಡ್ರೆ ಹವ್ಯಕತನ ಹೇಳೂದೇ ಅರ್ಥ ಕಳ್ಕತ್ತು. ಹವ್ಯಕತನ ಉಳಿಸ್ಕಳಕಾದ್ರೆ ತಾಯ್ನುಡಿ – ಹವಿಗನ್ನಡ ಉಳಿಸಿ – ಬೆಳೆಸ್ಕಳೋ. ಅಬ್ಬೆಗೆ ಕಲ್ಪತರುವಾಗಿರೊ.

ಈ ಚಿಂತನೆಗೆ ಪ್ರೇರಣೆ ಕೊಟ್ಟು ಅದನ್ನ ಸಂಗ್ರಹರೂಪ್ದಲ್ಲಿ ತಪ್ಲೆ ಅವಕಾಶ ಕೊಟ್ಟ ಎಲ್ಲಾ ಹವಿಗನ್ನಡ ಲೇಖಕರಿಗೂ, ಹವ್ಯಕ ಪತ್ರಿಕೆ ಜಾಗೃತ ಓದುಗರಿಗೂ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸ್ತೆ.

ಈ ಚಿಕ್ಕ ಕೃತಿಗೆ ತಾಯ್ನುಡಿ ಮೇಲಿನ ಪ್ರೀತಿ, ಅಭಿಮಾನದಿಂದ ಹಿರಿದಾದ ಮುನ್ನುಡಿ ಇಟ್ಟೆ ಶುಭ ಹಾರೈಸಿದ ಡಾ|| ಶಾಲಿನಿ ಅಕ್ಕಂಗೆ ನಾನು ಸದಾ ಋಣಿ. ''ಹವಿಗನ್ನಡ ಉಳಿಸಿ ಬೆಳ್ಸದು ಅಂದ್ರೆ ಹವ್ಯಕ ಸಂಸ್ಕೃತಿ ಮತ್ತು ಅನನ್ಯತೆ ಉಳ್ಸಿಕೊಂಬುದೇ ಆಗಿರ್ತು'' ಹೇಳೋ ಅವರ ಮಾತು ಅಬ್ಬೆ ಹಾಲಿನಾಂಗೆ ಇದ್ದು.

ಹವಿಗನ್ನಡ ಸಾಹಿತ್ಯ ಮಾಲೆಯ ಮೊದಲ್ನೆ ಪುಷ್ಪದ ರೂಪದಲ್ಲಿ ಈ ಕೃತಿ ಪ್ರಕಟ ಮಾಡೂಲೆ ಅವಕಾಶ ನೀಡಿದ ಹವ್ಯಕ ಅಧ್ಯಯನ ಕೇಂದ್ರ, ಕೇಂದ್ರದ ಎಲ್ಲಾ ರಚನಾತ್ಮಕ ಚಟುವಟಿಕೆಗಳಿಗೂ ಸದಾ ಪ್ರೋತ್ಸಾಹ ನೀಡ್ತಾ ಇಪ್ಪ ಹವ್ಯಕ ಮಹಾಸಭೆ ಅಧ್ಯಕ್ಷರ ಸಹಿತ ಎಲ್ಲಾ ಪದಾಧಿಕಾರಿಗಳಿಗೂ ಕೇಂದ್ರದ ಪ್ರಧಾನ ನಿರ್ದೇಶಕನಾಗಿ ನಾನು ಸದಾ ಋಣಿಯಾಗಿದ್ದೆ.

“....ನೆನೆವುದೆನ್ನ ಮನಂ ಬನವಾಸಿ ದೇಶಮಂ” ಹೇಳಿ ಪಂಪ ಹೇಳಿದ್ದ. ಈಗ ನಾವು “....ನೆನೆವುದೆನ್ನ ಮನಂ ಹವಿಗನ್ನಡಮಂ” ಹೇಳ್ವೊ.

“ಉಳಿಸೋಣ, ಬೆಳೆಸೋಣ
ಹವಿಗನ್ನಡವ ಬೆಳೆಸೋಣ
ಹವ್ಯಕ ಸಂಸ್ಕೃತಿ ಉಳಿಸೋಣ”

ಇದು 21ನೇ ಶತಮಾನದಲ್ಲಿ ನಮ್ಮ ಮಂತ್ರ, ತಂತ್ರ, ಯಂತ್ರ ಎಲ್ಲಾ ಆಗ್ಲಿ. ಪ್ರಪ್ರಥಮ ಹವಿಗನ್ನಡ ಸಾಹಿತ್ಯ ಸಮ್ಮೇಲನ (ಹೊನ್ನಾವರ 25–12–06)ದಂದು ಈ ಕೃತಿ ಲೋಕಾರ್ಪಣೆಯಾಗ್ತಾ ಇಪ್ಪದು ನನ್ನ ಸೌಭಾಗ್ಯ.

ನಾರಾಯಣ ಶಾನಭಾಗ

ಅರ್ಪಣೆ

ಮೆರೆವ ದೂರ್ವಾಪುರದಿ ಜನಿಸಿ ತಾ
ಬರೆದ ಹವಿಗನ್ನಡದ ಆದ್ಯಕೃತಿ
ಕಾರ ಸೂರಿ ವೆಂಕಟರಮಣಶಾಸ್ತ್ರಿಗಳಿಗಿದ ನರ್ಪಿಪೆಂ ॥

ಸಜ್ಜನ ವಿಧೇಯ
ನಾರಾಯಣ ಶಾನಭಾಗ

ಮುನ್ನುಡಿ

ಹಂಪೆ ಲಕ್ಷ್ಮೀಧರಾಮಾತ್ಯನ ಅಬ್ಬೆ, ಅಂವ ಸಣ್ಣಕ್ಕಿಪ್ಪಾಗ ಹಾಲು ಕುಡಿಸಕಾರೆ 'ಕೆರೆಯಂಕಟ್ಟಿಸು ಕಂದ ಬಾವಿಯಂ ಸವೆಸು.....'' ಅಂತೆಲ್ಲ ಹೇಳಿ ಕಿವಿಯೊಳ್ಗೊ ತೊಟ್ಟು ತೊಟ್ಟು ಉದಾತ್ತ ಸಂಸ್ಕೃತಿಯ ನುಡಿನೂ ಇಕ್ತ ಬಂದಿದ್ಲಡ. ಹಂಗಾಗಿ ಅಂವ ಮುಂದೆ ಜೀವನದಲ್ಲಿ ದೊಡ್ಡ ಹೆಸರ ತಗಂಬ್ಲೆ ಸಾಧ್ಯ ಆತು. 'ತಾಯ್ನುಡಿ' ಅಥವಾ 'ಮಾತೃಭಾಷೆ' ಹೇಳಿ ಸುಮ್ನೇ ಕರೀತ್ವಿಲ್ಲೆ. ಕೂಸಿಗೆ, ಅಬ್ಬೆ ಹಾಲು ಕುಡಿಸಕಾರೆ ಹಾಲಿನ ಜೊತೀಗೆ ನುಡಿ ಸಂಸ್ಕಾರನೂ ಕೊಡ್ತು, ವ್ಯಕ್ತಿಪ್ರತಿಭೆ ಹೊರ ಹೊಮ್ಮಲ್ಲೆ ಬೀಜರೂಪ್ದಲ್ಲಿ ಅದು ಆ ನುಡೀಲೆ ಮೊಳತ್ಗಂಡು ಅವಕಾಶಕ್ಕಾಗಿ ಕಾಯ್ತಾ ಇರ್ತು.

ಹವ್ಯಕ ಮಹಾಸಭೆ ಶುರುವಾಗಿ ಅರವತ್ಮೂರು ವರ್ಷಾತಪ. ಹವಿಗನ್ನಡದ ಬಗ್ಗೆ, ಅದರಲ್ಲಿ ಬರೀತಾ ಇರೋ ಸಾಹಿತ್ಯದ ಬಗ್ಗೆ ಇದುವರೆಗೆ ಯಾರೂ ಅಲ್ಲಿ ಹೆಚ್ಚು ತಲೆಕೆಡಿಶಿಕೊಂಡಿದ್ದಿದ್ವಿಲ್ಲೆ. ನಾರಾಯಣ ಶಾನಭಾಗರು ಅಲ್ಲಿಗೆ ಬಂದವ್ರು ಹವ್ಯಕ ಅಧ್ಯಯನ ಕೇಂದ್ರ ಶುರುಮಾಡಿದ್ದು. ಹವ್ಯಕ ಹೆಣ್ಮಕ್ಳೊ, ಹಳ್ಳಿ ತಮ್ಮಂದಿಕ್ಳೊ ಎದ್ರಿಸ್ತಿರೋ ಸಮಸ್ಯೆನೆಲ್ಲ ಅಧ್ಯಯನ ಮಾಡವ್ವು ಹೇಳಿ ಕಳಕಳಿಯಿಂದ ಹವ್ಯಕ ಚಿಂತನ ಕಾರ್ಯಕ್ರಮ ಮಾಡಲ್ಲೆ ಹಣಕಿದ್ರು. ಇಂಥ ಅಧ್ಯಯನದಲ್ಲಿ ತಮ್ಮನ್ನ ತೊಡಗಿಸ್ಗ್ಯಂಡಾಗ ಅವ್ರೀಗೆ ಬೇರೆ ಬೇರೆ ಪ್ರದೇಶದಲ್ಲಿರೋ ಹವ್ಯಕರನ್ನು ಒಂದುಗೂಡ್ಸೋ ಒಂದು ತಂತು ಯಾವ್ದೂ ಇಲ್ಲೆ ಅಂತ ಅನ್ನಿಸಿರವ್ವು. ಶಾನಭಾಗರು ಬುದ್ಧಿವಂತ್ರು, ಅನುಭವಿಗಳು, ಕೂಡ್ಲೆ ಅವ್ರಿಗೆ ಹೊಳತ್ತು ಹವಿಗನ್ನಡವೊಂದೇ ಎಲ್ಲರನ್ನೂ ಬೆಸೀಲಕ್ಕು. ಅದ್ರ ಮೂಲಕವೇ ಹವ್ಯಕ ಸಮಾಜದ ಏಳ್ಗೆಗಾಗಿ ಶ್ರಮಿಸಲ್ಲೆ ಸಾಧ್ಯ ಇದ್ದು ಅಂತ. ಹೀಂಗೆ ಎಂತಾರೂ ತಲೇಲಿ ಹೊಕ್ರೆ ಶಾನಭಾಗರು ತಾವೂ ಸುಮ್ನಿರ್ತ್ರಿಲ್ಲೆ. ವುಳಿದವ್ಕೂ ಸುಮ್ನಿರಲ್ಲೆ ಕೊಡ್ತ್ರಿಲ್ಲೆ. ಹವಿಗನ್ನಡ ಬರಹಗಾರರನ್ನೆಲ್ಲ ಪತ್ತೆ ಮಾಡಿ, ಅವ್ರ ತಲೆಬಿಸಿ ಮಾಡಿದ್ರು. ಅಷ್ಟೇ ಅಲ್ಲ; ಸಾಮಾನ್ಯ ಹವ್ಯಕ ಓದುಗರನ್ನೂ ಪ್ರಶ್ನೆ ಮಾಡಿ

ಚಿಂತನೆಗೆ ಹಚ್ಚಿದ್ರು. ಜೊತೀಗೆ ತಾವೂ ಆಲೋಚ್ನೆ ಮಾಡಿದ್ರು – ಇದ್ಯಾವ್ದೂ ಬರೀ ಬಾಯಿ ಮಾತ್ನಲ್ಲಿ ನಡೆದದ್ದಲ್ಲ. ಎಲ್ಲವೂ ದಾಖಲೆ ರೂಪ್ದಲ್ಲಿ; ವ್ಯವಸ್ಥಿತ ಕ್ರಮದಲ್ಲಿ ನೆಡತ್ತು. ಎಂತಾ ಕೆಲ್ಸ ಮಾಡಿದ್ರೂ ಅದ್ರಲ್ಲಿ ಅಚ್ಚುಕಟ್ಟುತನ ಇರವ್ವು – ಈ ತರದಲ್ಲಿ ನಡೆಸ್ದ ಎಲ್ಲ ಆಲೋಚನೆ – ಕ್ರಿಯೆಗಳ ಫಲವೇ ಹವಿಗನ್ನಡ ಚಿಂತನ ಕೃತಿ. ಇದ್ರಲ್ಲಿ ಶಾನಭಾಗರು ಮೂರು ಭಾಗ ಪ್ರತ್ಯೇಕವಾಗೇ ಇಟ್ಟಿದ್ರು. ಮೊದಲ್ನೇ ಭಾಗ–ಅವ್ರ ಆಲೋಚ್ನೇದು. ಇಲ್ಲಿ ಅವ್ರು ಹವಿಗನ್ನಡ ಚಿಂತನೆಗೆ ಹಿನ್ನೆಲೆಯಾಗಿ ಹವ್ಯಕರ ಬಗ್ಗ್ಯೂ ಚಿಂತನೆ ನಡೆಸಿದ್ರು.

ನಮ್ಮನ್ನ ನಾವು ಮೊದ್ಲು ಅರಿತ್ಗಳವ್ವು. ಕರ್ನಾಟಕದಲ್ಲಿ ಹೈಗುಂದ ಹವ್ಯಕರ ಮೂಲ ನೆಲೆ. ಅಲ್ಲಿಂದ ಹೈಗರು ನೀರು, ನೆಲ–ನೆರಳು ಹುಡುಕ್ಕೋತ ಘಟ್ಟದ ಮ್ಯಾಲೆ ಬಂದು, ಮತ್ತೆ ಘಟ್ಟ ಇಳ್ದು, ಕುಂಬ್ಳೆ ಸೀಮೆ–ಕಾಸರಗೋಡುವರೆಗೂ ಹ್ವೋಯ್ದ. ಈಗ ಉದ್ಯೋಗ ಅರಸ್ಗಂಡು ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾ... ಹೇಳಿ ಹೊರದೇಶಗಳಿಗೂ ಹ್ವೋಯ್ದ. ಇದ್ಕೂ ಹಿಂದಿನ ಈ ಸಮುದಾಯದ ಬಗ್ಗೆ ಸ್ಪಷ್ಟ ಚಿತ್ರಣ ನಮ್ಗೆ ಸಿಕ್ತಿಲ್ಲೆ. ಹವ್ಯಕರು ಕರ್ನಾಟಕಕ್ಕೆ ಹೊರಗಿನಿಂದ ಬಂದವ್ರೋ ಅಥ್ವಾ ಮೊದ್ಲಿಂದನೂ ಇಲ್ಲೇ ಇದ್ದವ್ರೋ ಎಂಬುದರ ಬಗ್ಗೆ ಇದಮಿತ್ಥಂ ಅಂತ ಹೇಳಲ್ಲಾಗ್ತಿಲ್ಲೆ. ಈ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಆಗವ್ವು. ದಿ|| ಎಲ್.ಟಿ. ಶರ್ಮರು ಆಂಧ್ರ ಪ್ರದೇಶದ ಎಮರಾಂದ್ರಿಗಳ್ಗೂ ಹವ್ಯಕರಿಗೂ ಸಾಂಸ್ಕೃತಿಕವಾಗಿ ಹೆಚ್ಚು ಸಾಮ್ಯ ಇದ್ದು, ಯಾರಾದ್ರೂ ಈ ದಿಶೇಲಿ ಸಾಂಸ್ಕೃತಿಕ ಮಾನವ ಶಾಸ್ತ್ರೀಯ ಅಧ್ಯಯನ ಮಾಡೀರೆ ಪ್ರಯೋಜನ ಇದ್ದು ಅಂತ ಆಗಾಗ ಹೇಳ್ತಿದ್ದೊ. ಅಂಥ ತೌಲನಿಕ ಅಧ್ಯಯನ ನಡದ್ರೆ ಹವ್ಯಕ ಮೂಲವನ್ನು ಹೈಗುಂದದ ಆಚೆ ದಾಟಿಸ್ಲಕ್ಕು. ಸದ್ಯಕ್ಕಂತೂ ಹೈಗುಂದದ ಹೈಗರೇ ಹವ್ಯಕರ್ರ್ಯಾದ ಅಂತ ಹೇಳ್ಲಕ್ಕು.

ಹವಿಗನ್ನಡ ಸುಮಾರು ಸಾವ್ರ ವರ್ಷದಿಂದ ಬಳಕೇಲಿ ಇದ್ದು. ಕನ್ನಡ ಭಾಷೆ ಸಾಕಷ್ಟು ಬದಲಾದ್ರೂ ಇದು ಹೆಚ್ಚು ಬದಲ್ಯಾದಿಲ್ಲೆ. ಹವ್ಯಕರು ಮೊದ್ಲು ಎರ್ಡುಗುಡ್ಡದ ಕಣಿವೇಲಿ ಅಡ್ಕೆಗಿಡ ನೆಟ್ಗಂಡು, ಒಂದು ದಿಂಬದಲ್ಲಿ ಬಿಡಾರ

ಕಟ್ಗ್ಯಂಡು ಇರ್ತಿದ್ವ. ಒಂದೊಂದೇ ಮನೆ, ವರ್ಷದಲ್ಲಿ ಆರು ತಿಂಗ್ಳು ಧೋಧೋಧೋ ಮಳೆ; ಬ್ಯಾರೇರ ಸಂಪರ್ಕ ಕಡ್ಮೆ. ಹೆಚ್ಚಾಗಿ ಒಂಟಿ ಮನೆಯವರಾಗಿ, ನಿಸರ್ಗಪ್ರಿಯರಾಗಿ ಕಾಲಕಳೀತಾ ಬಯಿಂದೊ. ಇವರಾಡ್ತಿರೋ ನುಡಿ ವ್ಯಾಲೆ ಇನ್ನಾವುದೇ ಪ್ರಭಾವ ಆಪ್ಲೆ ಅವಕಾಶವೇ ಇತ್ತಿಲ್ಲೆ. ಹೀಂಗಾಗಿ ಹಳಗನ್ನಡದ ಸುಮಾರು ಶಬ್ದ ಈ ಹವಿಗನ್ನಡ ನುಡೀಲಿ ಈಗ್ಲೂ ಬಳಕೇಲಿ ಇದ್ದು.

ಹವಿಗನ್ನಡವನ್ನ ಎಲ್ಲ ಕಡೆಗೂ ಒಂದೇ ರೀತಿ ಮಾತಾಡ್ತ್ವಿಲ್ಲೆ. ಪರಸ್ಪರ ಸಂಪರ್ಕದ ಅಭಾವ, ಸ್ಥಳೀಯ ಸಂಸ್ಕೃತಿ ಪ್ರಭಾವ, ಆಧುನಿಕ ವಿದ್ಯಾಭ್ಯಾಸ.. ಹೀಂಗೆ ಬಹಳಷ್ಟು ಕಾರಣದಿಂದ ನುಡಿಯಲ್ಲಿ ಸ್ವಲ್ಪ ಫರಕ್ಕು ಕಾಣ್ತು. ಹವ್ಯಕ ಸೀಮೆ ಎಷ್ಟಿದ್ದೋ ಅಷ್ಟು ಪ್ರಭೇದಗಳನ್ನ ನಾವು ಹವಿಗನ್ನಡದಲ್ಲಿ ಗುರ್ತಿಸಿ ಅಧ್ಯಯನ ಮಾಡಲ್ಲೆ ಸಾಧ್ಯ ಇದ್ದು. ಕೆಲವು ಪ್ರಭೇದ ಕುರಿತು ಈಗಾಗಲೇ ಅಧ್ಯಯನ ಆಗಿದ್ದು, ಅನುಬಂಧದಲ್ಲಿ ಅವುಗಳ ವಿವರ ಕೊಟ್ಟಿದ್ದೊ. ಈ ಗ್ರಂಥದ ಮೊದಲ ಭಾಗದಲ್ಲಿ ನಾರಾಯಣ ಶಾನಭಾಗರು ಮುಖ್ಯವಾಗಿ ಆರು ಪ್ರಾದೇಶಿಕ ಭೇದ ಗುರ್ತು ಮಾಡಿದ್ರು. ಸದ್ಯಕ್ಕೆ ಇವುಗಳನ್ನೇ ಮಾನದಂಡವನ್ನಾಗಿ ಇಟ್ಗಂಡು ಅಧ್ಯಯನ ಶುರು ಮಾಡ್ಲಕ್ಕು. ಆದರೆ ಇಲ್ಲೊಂದು ಎಚ್ಚರ ಅತಿ ಮುಖ್ಯ. ಯಾವ ಪ್ರಭೇದದ ಮಾತಿನ ರೂಪವೂ ಮೇಲಲ್ಲ; ಕೀಳಲ್ಲ. ಅದ್ಹ್ಯಾಂಗೆ ಆ ರೂಪ ಬಂತು ಅಂತ ಭಾಷಿಕವಾಗಿ ಅಥ್ವಾ ಸಾಮಾಜಿಕವಾಗಿ ಕಾರಣಗಳನ್ನ ಕಂಡುಹಿಡಿಯವ್ವೇ ಹೊರ್ತು ಒಂದು ಕಡೆಯ ಮಾತಿನ ರೂಪಗಳನ್ನ ಮತ್ತೊಂದ್ಕಡೆ ಚಾಳ್ಸಲ್ಲೆ, ಗೇಲಿ ಮಾಡಲ್ಲೆ ಬಳಸ್ಗ್ಯಳ್ಬಾಗ. ನುಡಿಗಳನ್ನ ಪರಸ್ಪರ ಗೌರವಿಸಿ ಅದ್ರ ಹಿಂದೆ ಅಡಗಿರೋ ಸಂಸ್ಕೃತಿ–ಜೀವಪರ ಧೋರಣೆಗಳನ್ನ ಅರ್ಥಮಾಡ್ಕ್ಯಂಬ್ಲೆ ಪ್ರಯತ್ನ ಮಾಡವ್ವು.

'ಹವಿಗನ್ನಡ ಸಾಹಿತಿಗಳು ಎಂತ ಹೇಳ್ತ' ಅನ್ನೋ ಎರಡ್ನೇ ಭಾಗದಲ್ಲಿ ಶಾನುಭಾಗರು ಹವಿಗನ್ನಡದಲ್ಲಿ ಬರೆಯೋ ಸಾಹಿತಿಗಳಿಗೆ ಪ್ರಶ್ನೆ ಹಾಕಿ ತರಿಸ್ಗಂಡ ಉತ್ತರಗಳನ್ನ ಹಾಗೇ ದಾಖಲಿಸಿದ್ರು. ಮೂರ್ನೇ ಭಾಗ, ಹವ್ಯಕ ಮಾಸಪತ್ರಿಕೇಲಿ

ಜಾಗ್ರತರ ಅಭಿಪ್ರಾಯ ಹೇಳಿ ಇದ್ದು. ಇಲ್ಲಿ ಪತ್ರಿಕೆ ಮೂಲಕ ಕೇಳಿದ ಪ್ರಶ್ನೆಗೆ ಕೆಲವು ಕಳ್ಸಿದ ಉತ್ತರ ಹಂಗೇ ಇಟ್ಟಿದ್ದ. ಅನುಬಂಧದಲ್ಲಿ ಕೀರ್ತಿಶೇಷರಾದ ಹವಿಗನ್ನಡ ಗ್ರಂಥಕರ್ತರು ಹಾಗೂ ಹವಿಗನ್ನಡ ಕುರಿತು ಇದುವರೆಗೂ ನಡೆದ ಅಧ್ಯಯನ-ಸಂಶೋಧನೆಗಳ ವಿವರ ಇದ್ದು. ಹೀಂಗೆ ಹವಿಗನ್ನಡ ಕುರಿತು ಅಧ್ಯಯನ ಮಾಡವ್ವು ಹೇಳವ್ಕೆ ಒಂದು ಉತ್ಕೃಷ್ಟ ಆಕರ ಗ್ರಂಥವಾಗಿ ಈ ಕೃತಿ ಹೊರಹೊಮ್ಮಿದ್ದು. ಈ ಕಾರ್ಯಕ್ಕಾಗಿ ಹರಸಾಹಸ ಮಾಡಿದ ನಾರಾಯಣ ಶಾನಭಾಗರನ್ನ ಎಷ್ಟು ಹೊಗಳಿದರೂ ಕಡ್ಮೆನೇ. ಯಾಕಂದ್ರೆ ಬರಹಗಾರರಿಂದ ಉತ್ತರ ತರ್ಸಗಳಕಾದ್ರೆ ಎಷ್ಟುಕಷ್ಟ ಅಗ್ತು ಹೇಳಿ ಯೆನಗೆ ಗೊತ್ತಿದ್ದು. ಇಷ್ಟೆಲ್ಲ ಸಾಹಿತಿಗಳು ಉತ್ತರ ಕಳ್ಸಿದ್ದು ನೋಡೀರೆ, ನಾರಾಯಣಣ್ಣ, ನಕ್ಷತ್ರಕನ ಹಾಂಗೆ ಅವ್ರ ಬೆನ್ನತ್ತಿದ್ದಂತೂ ಸ್ಪಷ್ಟ.

ಹವಿಗನ್ನಡದಲ್ಲಿ ಕೇಳ್ದ ಪ್ರಶ್ನೆಗೆ ಶಿರಸಿಯಿಂದ ಕಾಸರಗೋಡಿನ ವರೆಗಿಪ್ಪ ಹವಿಗನ್ನಡ ಸಾಹಿತಿಗಳೆಲ್ಲ ತಂತಮ್ಮ ಪ್ರದೇಶದ ಹವಿಗನ್ನಡದಲ್ಲೇ ಉತ್ತರನೂ ಕೊಟ್ಟಿದ್ದೊ. ಇದ್ರಿಂದ ಎಲ್ಲ ಪ್ರದೇಶದ ಹವಿಗನ್ನಡ ಭಾಷಾ ಸ್ವರೂಪವೂ ಸ್ವಲ್ಪ ಮಟ್ಟಿಗಾದ್ರೂ ಒಂದೆಡೆಗೆ ದಾಖಲಾದಂಗೆ ಆತು. ಇದೇನು ಸಾಮಾನ್ಯ ಸಾಧನೆಯಾ? ವೈವಿಧ್ಯತೆಯಲ್ಲಿ ಏಕತೆ ಸಾಧಿಸಲಾಗ್ತು ಅನ್ನೋದನ್ನ ಈ ಸಂದರ್ಭದಲ್ಲಿ ಸಮಾತ್ನಾಗಿ ತೆಳ್ಕಂಬ್ಲೆ ಆತು. ಹವಿಗನ್ನಡ ಸಾಹಿತಿಗಳನ್ನ ಮತ್ತು ಹವೀಕರನ್ನ ಕೇಳಿದ್ದು ಬರೇ ಒಂದೋ ಎರ್ಡೋ ಪ್ರಶ್ನೆ ಅಂತ ಅನ್ನಿಸಿದ್ರೂ ಪದೇ ಪದೇ ಎಲ್ಲರೂ ತಮಗೆ ತಾವೇ ಕೇಳ್ಕಸ್ತ ಇರಕ್ಕಾದ ಚಿರಂತನ ಪ್ರಶ್ನೆ ಅದು.

ಭಾಷೆ ಬಳಸ್ತ ಇದ್ರ ಮಾತ್ರ ಜೀವಂತ ಉಳೀತು. ಜಗತ್ತಿನಲ್ಲಿ ಮೂವತ್ತು ವರ್ಷಗಳಲ್ಲಿ ಸಾವಿರಾರು ಉಪಭಾಷೆಗಳು ನಾಶವ್ಯಾದು. ಹವಿಗನ್ನಡಕ್ಕೂ ಆ ಗತಿ ಬಪ್ಪೊಲಾಗ. ಅದ್ಕಾಗಿ ಈಗ್ಲೇ ನಾವು ಎಚ್ಚತ್ಗಳವ್ವು ಅಂತ್ಹೇಳಿ ಕಳಕಳಿ ವ್ಯಕ್ತ ಆೖದು. ಇದ್ರಲ್ಲಿ ಬರೀ ಭಾಷೆ ಪ್ರಶ್ನೆ ಇಲ್ಲೆ. ಭಾಷೆಗೂ ಸಂಸ್ಕೃತಿಗೂ ಬಾಳ ಹತ್ರಿನ ನಂಟು. ಒಂದು ಸಂಸ್ಕೃತಿ ನಾಶ ಮಾಡವ್ವು ಹೇಳೀರೆ, ಮೊದ್ಲು ಅವ್ರ ಭಾಷೆ ಆಡದು ಅವ್ರಿಂದ ತಪ್ಸವ್ವು ಅಂತ ಹೇಳ್ತ. ನಮ್ಮ ಆಚಾರ-ವಿಚಾರ,

ಸಂಪ್ರದಾಯ, ನಂಬ್ಕೆಗಳನ್ನೆಲ್ಲ ನಂಗೊ ಅಭಿವ್ಯಕ್ತಿ ಮಾಡದು ಶಬ್ದಗಳ ಮೂಲಕ. ಹಾಂಗಪ್ಪಾಗ ಹವಿಗನ್ನಡದ ಒಂದು ಶಬ್ದ ಬರೀ ಶಬ್ದ ಆಗಿರ್ತಿಲ್ಲೆ. ಅದ್ರ ಹಿಂದೆ ನಮ್ಮ ಹವ್ಯಕ ಸಂಸ್ಕೃತಿಯ ಅಂಶನೂ ಅಡಗಿರ್ತು ಅಂತ ತೆಳ್ಕಳವ್ವು. ಉದಾಹರಣೆಗೆ ನಂಗ್ಳ ಹವ್ಯಕ ಸಮಾಜದಲ್ಲಿ ಹೊಸಮನೆ ಕಟ್ಟಾಗ, ಹೊಸ್ತ್ಲು ಪೂಜೆ ಮಾಡಿ, ಒಳ ಪ್ರವೇಶ ಮಾಡ ಶಾಸ್ತ್ರಕ್ಕೆ 'ಹೊಸ್ಮನೆ ಇರುವಾಣ' ಇದ್ದು ಬರೇಕು ಹೇಳಿ ಕರ್ಯಾಣ ಮಾಡ್ತಿದ್ದೊ. ಇರುವಾಣ (ಇರು+ಓಣ) ಶಬ್ದದಲ್ಲಿ 'ಇರು' ಹೇಳ ಕ್ರಿಯಾಪದಕ್ಕೆ 'ಓಣ' ಪ್ರತ್ಯಯ ಹಚ್ಚಿದ್ದು, ವ್ಯಾಕರಣದ ದೃಷ್ಟಿಯಿಂದ ಕಂಡುಬಂದ್ರೂ, ಆ ಹೊಸಮನೀಗೆ ಹೋಗಿ ಸಂತೋಷ, ಸಮಾಧಾನದಿಂದ ವಳಕಂಬ ಆಶಯ ವ್ಯಕ್ತ ಆಗ್ತಿತ್ತು. ಈಗ ಉಪಯೋಗಿಸ್ತಿರೋ 'ಗೃಹಪ್ರವೇಶ' ಸಂಸ್ಕೃತ ಶಬ್ದ ಚಲೋ ಇದ್ರೂ, ಇರುವಾಣದ ಅರ್ಥವ್ಯಾಪ್ತಿ, ಭಾವವಿಸ್ತಾರ ಸಾಧ್ಯತೆ ಅದಕ್ಕಿಲ್ಲೆ ಅಂತನೇ ಅನ್ನಿಸ್ತು. 'ಇರುವಾಣ' ಇದು ಹವಿಗನ್ನಡ ಶಬ್ದ. (ಇದೇ ರೀತಿ ತಿಕ್ಕಾಣ, ಒಗ್ಸಾಣ, ಬೀಸಾಣ ಇತ್ಯಾದಿ ಕ್ರಿಯಾಧಾತುವಿಗೆ–ಓಣ–ಆಣ–ಹಚ್ಚಿ ಶಬ್ದರೂಪ ಮಾಡ್ಕೊತ್ರು) ನಂಗ್ಳ ವಿಶಿಷ್ಟ ಸಂಸ್ಕೃತಿಗೆ ಸಂಬಂಧಪಟ್ಟ ಬಹಳಷ್ಟು ಜನ ಭಾವಿಸೋ ಹಂಗೆ ನಂಗ್ಳದ್ದು ಸಂಸ್ಕೃತ ಮೂಲ ಭಾಷೆ ಅಲ್ಲ. ದ್ರಾವಿಡ ಮೂಲದ ಶಬ್ದಗಳೇ ಹೆಚ್ಚಾಗಿ ಅಲ್ಲಿದ್ದು. ಈಗಿನ ದ್ರಾವಿಡ ಭಾಷೆಗಳಲ್ಲಿ ಆ ಶಬ್ದಗಳು ಉಳೀದಿದ್ರು, ಹವಿಗನ್ನಡದಲ್ಲಿ ಕೆಲವು ಇನ್ನೂ ಜೀವಂತವಾಗಿ ಇದ್ದೊ. ಈ ಹೆಮ್ಮೆ ನಂಗೊಕ್ಕಿರವ್ವು. ಈಗ ನಾರಾಯಣಣ್ಣ ಮಾಡಲ್ ಹಣಕಿದ್ ಕೆಲ್ಸಕ್ಕೆ ಇಡೀ ಹವ್ಯಕ ಸಮಾಜ ಅವ್ರ ಬೆನ್ನ್ ಚಪ್ಪರ್ಸಿ, ತುದಿ ಮುಟ್ಸಲ್ಲೆ ಕೈಲಾದ ಸಹಾಯ ಮಾಡವ್ವು.

ಹವಿಗನ್ನಡ ಉಳ್ಸಿ ಬೆಳ್ಸೋ ಕಾರ್ಯದಲ್ಲಿ ಒಬ್ಬೊಬ್ಬರ ಜವಾಬ್ದಾರಿ ಒಂದೊಂದು ತರದ್ದು. ಯಾರ್ಯಾರ ಪಾತ್ರ ಹ್ಯಾಂಗಿರವ್ವು ಹೇಳದ್ರ ಬಗ್ಗೆ ಆ ಗ್ರಂಥದ ಲೇಖನಗಳಲ್ಲಿ ಪ್ರಸ್ತಾಪ ಆಗಿ, ಸಾಕಷ್ಟು ಚರ್ಚೇನೂ ಆಯ್ದು. ಎಲ್ಲ ಹವೀಕರೂ ತಮ್ಮ ಮನೇಲಿ ಹವಿಗನ್ನಡದಲ್ಲೇ ಮಾತಾಡವ್ವು. ಹಳ್ಳೀಲಿರ್ಲಿ, ಪ್ಯಾಟೇಲಿರ್ಲಿ, ವಿದೇಶದಲ್ಲಿ ವಾಸ್ತವ್ಯ ಹೂಡಿರ್ಲಿ, ತಂಗೊ ಮನೇಲಿ ಮಾತಾಡೊ

ಭಾಷೆ ಹವಿಗನ್ನಡವೇ ಆಗಿರವ್ವು. ಮಕ್ಕು ಬೇರೆ ಭಾಷೆ ಕಲ್ತಿದ್ರೂ ಅವ್ರೊಂದಿಗೆ ಹವಿಗನ್ನಡವನ್ನೇ ಮಾತಾಡವ್ವು. ಮಕ್ಕೊಗೆ ಬ್ಯಾರೆ ಭಾಷೆ ಬ್ಯಾಗ ಬರ್ಲಿ ಅಂತ ಅಬ್ಬೆದಿಕ್ಕೊ ಆ ಭಾಷೆ ಮನೇಲಿ ಮಾತಾಡಲ್ಲೆ ತೊಡಗೀರೆ, ಅಬ್ಬೆ ನುಡಿ ಆತ್ಮೀಯತೆ ಮಾಯವಾಗಿ, ನಾವೇ ಮಕ್ಳನ್ನ ನಮಗೊತ್ತಿಲ್ದೇ ಅಂತರಿಕವಾಗಿ ಅನಾಥರನ್ನಾಗಿ ಮಾಡಾಗ್ತು. ಮಕ್ಕೋಗೆ ತಮ್ಮ ಅಮ್ಮ-ಅಪ್ಪ ಹತ್ರಣ ರಕ್ತ ಸಂಬಂಧಿಕರು ಅಂತ್ಹೇಳೋ ಭಾವನಾತ್ಮಕ ಸಂಬಂಧ ಬೆಳೆಯಲ್ಲೆ ಅಬ್ಬೆ ನುಡಿಯಿಂದ ಮಾತ್ರ ಅವಕಾಶ ಆಗ್ತು. ಭಾವನಾತ್ಮಕ ನೆಲೆ ಹೇಳದು ವ್ಯಕ್ತಿ ಸ್ವಸ್ತ ಜೀವನಕ್ಕೆ ಅತ್ಯವಶ್ಯವಾಗಿ ಬೇಕಾದ ಒಂದು ನೆಲೆಗಟ್ಟು. ಕುಟುಂಬದ ಸ್ಥಾನ ರಕ್ತ ಸಂಬಂಧದಿಂದಷ್ಟೇ ಗಟ್ಟಿ ಆಗ್ತು ಹೇಳಿ ತೆಳ್ಕಂಬ್ದು ತಪ್ಪು. ಆ ಸಂಬಂಧ ಗಟ್ಟಿ ಮಾಡಲ್ಲೆ ಭಾಷಾ ನೆಲೆನೂ ಬೇಕಾಗ್ತು. ನಮ್ಮ ನಮ್ಮ ತಾಯ್ನುಡಿಗಿರೋ ಶಕ್ತಿ ಇಂತಿಷ್ಟೇಯ ಅಂತ ಹೇಳಲ್ಲಾಗ್ತಿಲ್ಲೆ. ಅದರ ಬೆಲೆ ತೆತ್ತಾಗಲೇ ಗೊತ್ತಾಗವ್ವು.

ಹವಿಗನ್ನಡ ಮಾತಾಡಲ್ಲೆ ಸುಲಭ ಆದ್ರೂ, ಅದ್ನ ಬರದ್ರೆ ಓದದು ಕಷ್ಟ ಅಂತ ಸಾಮಾನ್ಯವಾಗಿ ಭಾವಿಸ್ತೊ. ಮೇಲ್ನೋಟಕ್ಕೆ ಅದೂ ಖರೆ ಅಂತ ಅನ್ನಿಸ್ತು. ಎಲ್ಲದೂ ರೂಢಿ ಮ್ಯಾಲೆ ಬದ್ಕದು. ಹೋಗ್ತ-ಹೋಗ್ತ ಎಲ್ಲ ಸರಿ ಆಗ್ತು. ಕುಂಬ್ಳೆಯ ವಿಜಯಕ್ಕ ಇದೇ ಗ್ರಂಥದಲ್ಲಿ ಉತ್ತರ ಬರ್‍ಯಕಾರೆ, ''ಮನಸ್ಸು ಬಿಚ್ಚಿ ಹೇಳ್ಲೆ ಬರವಲೆ, ಇನ್ನೊಬ್ಬಂಗೆ ವ್ಯಕ್ತಪಡಿಸಲೆ ನಮ್ಮ ಆಡುಮಾತಲ್ಲಿ ಸುಲಭ ಆವುತ್ತು. ನಮ್ಮ ಅಂತರಂಗದ ತುಮುಲ, ಕಷ್ಟ, ಸುಖ, ದುಃಖ, ದುಮ್ಮಾನ ಹೀಂಗಿದ್ದ ಹೃದಯದ ಸೂಕ್ಷ್ಮ ಸಂವೇದನೆಗಳ ಸಾಹಿತ್ಯಕ್ಕೆ ರೂಪು ಕೊಡ್ಲೆ ನಾವು ಮಾತಾಡುವ ಭಾಷೆಲಿ ಬೇಗನೆ ಎಡಿತ್ತು ಹೇಳಿ ಎನ್ನ ಅನುಭವ. ಮಾತೃಭಾಷೆಯ ವ್ಯಾಮೋಹ ಅದರ ಸೆಳೆತ್ತ ಹೇಳಿರೆ ಅದೊಂದು ರೀತಿಯ ಪುಳಕ'' (ಪು. 71) ಅಂತ ಅಭಿಪ್ರಾಯಪಟ್ಟಿದ್ರು. ಅದೇ ರೀತಿ ಸಂಪ ಮ.ರಾ. ಹೆಗಡೇರೂ ''ಹವ್ಯಕ ಭಾಷೆಲಿ ಮಾತಾಡದಾದ್ರೆ ಕಥೆ, ಕವನ ಬರೆಯದಾದ್ರೆ ಹಾಸ್ಯದ ಹೊಳೆ ಹರಿಸ್ಲಕ್ಕು. ಸಾಕಷ್ಟು ಗಾದೆ, ಮಾತ್ಬಳಸ್ಲಕ್ಕು; ಚುಟುಕಾಗಿ, ಮೊನಚಾಗಿ ಹೇಳ್ಲಕ್ಕು; ಒಗಟೊಗಟಾಗಿ ಹೇಳಿದ್ರೂ ಕೌತುಕ, ಸ್ವಾರಸ್ಯ, ರಂಜನೆ, ಕುತೂಹಲ ಮೂಡ್ಲಕ್ಕು,

ಗ್ರಹೀಕರ ಮನಸ್ಸನ್ನ ಸುಲ್ಬದಲ್ಲಿ ಗೆಲ್ಲಲಕ್ಕು. ಜೀವನ ಮಾರ್ಗದ ಸ್ವಾನುಭವದ ಬೇಕಾದಷ್ಟು ಉದಾಹರಣೆ ಕೊಡ್ಲಕ್ಕು'' ಹೇಳಿ ಉತ್ಸಾಹದ ಮಾತುಗಳನ್ನಾಡಿದ್ರು. ನೂಜಿಯ ವಾಗ್ದೇವಿ ಅಕ್ಕ ''ನಮ್ಮ ಭಾಷೇಲಿ ಬರದ ಕಾಗದ ಓದುವಗ ನಾವು ಮುಖತಾ ಕಂಡ ಹಾಂಗೇ ಅಪ್ಪದೊಂದು ವಿಶೇಷವೇ'' ಅಂತ ಆತ್ಮೀಯ ಭಾವ್ನೇನ ಹಂಚಕಂಡಿದ್ರು. ಇಂಥ ಉತ್ಸಾಹ ಹಾಗೂ ಭಾವನೆಗಳು ಇಪ್ಪಕಾರೆ ಹವ್ಯಕ ಮಾಸಪತ್ರಿಕೇನ ಹವಿಗನ್ನಡದಲ್ಲೇ ತಪ್ಪ ಸಾಧ್ಯತೆ ಇದ್ದು. ಪ್ರತ್ಯೇಕ ವಾರಪತ್ರಿಕೆನೂ ಮಾಡ್ಲಕ್ಕು. ಹಿಂದೆ ಬಿಸ್ಲಕೊಪ್ಪದ ಸೀತಾರಾಮ, ವಿ.ಬಿ. ಹೊಸಮನೆ ಮುಂತಾದವರೆಲ್ಲ ತಮ್ಮ ಪತ್ರಿಕೇಲಿ ಹವಿಗನ್ನಡ ಅಂಕಣಬರಹ ಬರೆಸಿದ್ದೊ. ಈಗ ಪತ್ರಿಕಾರಂಗದಲ್ಲಿ ಹವೀಕರು ಬೇಕಪ್ಪಷ್ಟ್ ಜನ ಇದ್ದೊ. ಅವ್ರೆಲ್ಲರ ಅನುಭವ, ಸಲಹೆ ಬಳಸ್ಗಂಡು ಹವೀಕ ಜಾಣ-ಜಾಣೆಯರಿಂದ ನಂಬರ್ ಒನ್ ಪತ್ರಿಕೆ ಹೊರಡ್ಸಲ್ಲೆ ಸಾಧ್ಯ ಇದ್ದು.

ಪತ್ರಿಕೆ ಜೊತೇಗೆ ಹವಿಗನ್ನಡದಲ್ಲಿ ಈಗಾಗಲೇ ಬರೀತಾ ಇದ್ದ ಸಾಹಿತಿಗೊ ಕೆಲವ್ರು ಹವಿಗನ್ನಡದಲ್ಲಿ ಬರ್ಯದು ಬಿಟ್ಟಿದ್ದಿ ಅಂತ ಹೇಳಿದ್ದೊ. ಹವಿಗನ್ನಡದಲ್ಲಿ ಬರದ್ರೆ ಮುದ್ರಿಸೋರ್ಯಾರು, ಕೊಂಡಕಂಬರ್ಯಾರು? ಅಂತ್ಹೇಳ ಪ್ರಶ್ನೆ ಕೆಲವ್ರನ್ನ ಕಾಡ್ತಾ ಇದ್ದು. ಹವೀಕ್ರಲ್ಲಿ ಬಹಳಷ್ಟು ಜನ ಸುಶಿಕ್ಷಿತರೇ ಇರಕಾರೆ, ಹವ್ಯಕ ಪತ್ರಿಕೆ 10,000 ಪ್ರಸಾರಾಗ್ತು ಅಂತಿರಕಾರೆ ಒಂದು ಸಾವಿರ ಗ್ರಂಥ ಖರ್ಚಾಗದು ಕಷ್ಟ ಅನ್ನಿಸ್ಲಾಗ. ಜೊತೇಗೆ ಕೆಲವ್ರು ಅಭಿಪ್ರಾಯಪಟ್ಟಂಗೆ, ಮದ್ವೆ, ಮುಂಜಿ, ಶುಭ ಸಮಾರಂಭದಲ್ಲಿ ಹವಿಗನ್ನಡ ಗ್ರಂಥಗಳನ್ನ ಉಡುಗೊರೆಯಾಗಿ ಕೊಡೊದು ರೂಢಿ ಮಾಡ್ಕ್ಯಳವ್ವು. ಹವಿಗನ್ನಡ ಜನಪದ ಕತೆಗಳನ್ನ ಒಗಟುಗಳನ್ನ ಹವ್ಯಕರಲ್ಲದ ಹೊನ್ನಾವರದ ಶಾಂತಿನಾಯಕ ಸಂಗ್ರಹ ಮಾಡಿದ್ದು ಹೇಳದು ಬಹಳ ಮುಖ್ಯ. ಹಂಗೆ ಆಸಕ್ತಿ ಇದ್ದವ್ಕೆ ಹವಿಗನ್ನಡ ಕಲಿಯಲ್ಲೆ ಮಾತಾಡಲ್ಲೆ ನಾವು ಪ್ರೋತ್ಸಾಹ ನೀಡಿದ್ರೆ ತಪ್ಪೇನಿಲ್ಲೆ. ಹವ್ಯಕೇತರರೂ ನಮ್ಮ ಸಂಸ್ಕೃತಿ, ಜಾನಪದ ಮೆಚ್ಗತ್ತ ಅಂದ್ಮೇಲೆ ನಾವ್ಯಾಕೆ ಹಿಂಜರಿಯವ್ವು? ಬಾಳಿಲ ಪರಮೇಶ್ವರಣ್ಣನಂತೂ ಹವಿಗನ್ನಡದಲ್ಲಿ ಮಹಾಕಾವ್ಯ ರಚಿಸಲ್ಲೆ ಸಾಧ್ಯ ಇದ್ದು ಅಂತ 'ಧರ್ಮವಿಜಯ'ದ

ಮೂಲಕ ತೋರ್ಸಿಕೊಟ್ಟಿದ್ದೊ. ಇವೆಲ್ಲ ಹವ್ಯಕರಿಗೆ ಸ್ಫೂರ್ತಿ ಆಗವ್ವು. ಪ್ರತಿಭೆ ಇದ್ದವು, ಯಾವ್ದೇ ಬಿಡಿಯ ಮಾಡ್ಕ್ಯಳ್ದೇ ಹವಿಗನ್ನಡದಲ್ಲಿ ಕೃತಿರಚನೆ ಮಾಡವ್ವು. ಸಂಘ–ಸಂಸ್ಥೆಗಳು, ಮಹಾಸಭೆ ಪ್ರಕಟಣೆಗೆ ಸಹಾಯ ಮಾಡವ್ವು.

ಹವಿಗನ್ನಡ ಉಳ್ಸಿ ಬೆಳ್ಸದ್ರಲ್ಲಿ ನಮ್ಮ ಶ್ರೀಮಠದ ಪಾತ್ರವೂ ಮುಖ್ಯ ಅನ್ನೋದ್ರಲ್ಲಿ ಸಂಶಯ ಇಲ್ಲೆ. ಹವ್ಯಕರೇ ಸೇರ್ದ ಸಭೆ, ಸಮಾರಂಭ, ಚರ್ಚೆಗಳ ಸಂದರ್ಭದಲ್ಲಿ ಶ್ರೀ ಗುರುಗಳು ಹವಿಗನ್ನಡದಲ್ಲಿ ಮಾತಾಡವ್ವು ಹೇಳಿ ಅಭಿಪ್ರಾಯ ಬಯಿಂದು. ಭರತನಹಳ್ಳಿ ನಾ.ಸು. ಭಾವ ಹೇಳ್ದಂಗೆ "ಗುರುಗಳೇ ನಂಭಾಷೆಲ್ಲಿ ಮಾತಾಡ್ತ್ರುಹೇಳೋ ಭಾವನೆ ಉಂಟಾಗಿ ಮಾತಿನ ಬಳಕೆ ಗಟ್ಟೀತನ ಉಂಟಾಗ್ತು." ನುಡಿ ಮೂಲಕ ಎಲ್ಲರನ್ನೂ ಒಟ್ಟುಗೂಡ್ಸ ಕೆಲ್ಸನಾ ಎಲ್ಲರಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಮಠಂಗೋ ಮಾಡಲ್ಲೆ ಸಾಧ್ಯ ಇದ್ದು. ಕಾಲಕ್ಕೆ ತಕ್ಕಂತೆ ಸ್ಪಂದಿಸುವ ಧೀರೋದಾತ್ತ ವ್ಯಕ್ತಿಗಳು ನಮ್ಮ ಮಠಗಳ ಚುಕ್ಕಾಣಿ ಹಿಡಿದದ್ದು ಅವರ ಆಲೋಚ್ನೆಗಳು ಮಾನವ ಕುಲದ ಸುಂದರ ಭವಿಷ್ಯ ನಿರ್ಧಾರಕ್ಕೆ ಮುಖ್ಯ ನೆಲೆಗಟ್ಟ್ಯಾದು. ಇಂಥಾ ಗುರುಗಳ ಬಗ್ಗೆ ನಮಗೆ ಹೆಮ್ಮೆ ಇದ್ದು. ಹವ್ಯಕರನ್ನ ಒಗ್ಗೂಡಿಸೋ ಹಾಗೂ ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನ ಉಳಿಸ್ಗ್ಯಳ ಪ್ರಯತ್ನದ ಹಿಂದೆ ಭಾಷೆದೂ ದೊಡ್ಡ ಪಾತ್ರ ಇದ್ದೂ ಅನ್ನೋದನ್ನ ಮನವರಿಕೆ ಮಾಡಿಕ್ಸಂಡ್ರೆ ಸಾಕು. ಗುರುಗಳ ನುಡಿ ಪ್ರಭಾವ ಸಮಾಜದ ಮೇಲೆ ಆಗೇ ಆಗ್ತು.

ಪುರೋಹಿತಕ್ಕೊ ರೂಢಿ ಮಾಡ್ಕ್ಯಂಡಿದ್ವಿಲ್ಲೆ ಅನ್ನೋದು ಬಿಟ್ರೆ ಹವಿಗನ್ನಡದಲ್ಲಿ 'ಶ್ರೇಯೋಪ್ರಾಪ್ತಿ ವಚನ' ಹೇಳಲ್ಲೆ ಅವಕ್ಕೇನೂ ತೊಂದ್ರೆ ಇಲ್ಲೆ. ಮನೆ ಯಜಮಾನ ನಮ್ಮ ನುಡೀಲೆ ಆಶೀರ್ವಚನಕ್ಕಾಗಿ ಬೇಡ್ಕ್ಯಂಬುಟ್ರೆ ಅದೇ ನುಡಿ ಹಳೀಲೆ, ಪುರೋಹಿತರೂ ತಮ್ಮ ಗಾಡಿ ಮುಂದೆ ನಡೆಸ್ತ್ರು. ಯೆನಗನ್ಸ ಮಟ್ಟೀಗೆ, ಯಾರಿಗೂ ನಮ್ಮ ನುಡಿ ಮ್ಯಾಲೆ ತಿರಸ್ಕಾರ ಇಲ್ಲೆ. ಹ್ಯಾಂಗಿದ್ರೂ ನಡೀತು ಅನ್ನ ಅಸಡ್ಡೆ ಕೆಲವು ಕಡೆ ಕಾಣ್ತು, ಹವಿಗನ್ನಡದಲ್ಲೇ ಎಲ್ಲ ಮಾತಾಡಿ ಅಂತ ತಿಳಿವಳಿಕೆ ಕೊಡವ್ವು ಹೇಳದು, ಭಾಷೆ ಮ್ಯಾಲಿನ ಅಭಿಮಾನಕ್ಕಷ್ಟೇ ಅಲ್ಲ; ಅದು ಒಂದು ಸಮಾಜದ ಜನರನ್ನ ಒಟ್ಟುಗೂಡಿಸೋ ಏಕೈಕ ತಂತು ಅಂಬ ಕಾರಣಕ್ಕಾಗಿ. ಅತಿ

ಕಡ್ಮೆ ಶಾಸ್ತ್ರ–ಸಂಪ್ರದಾಯ ಉಳಿಸ್ಗಂಡವ್ವು ಹವೀಕ್ರು ಅಂತ ಈಗಾಗಲೇ ಪುಕಾರಿದ್ದು ಒಗ್ಗಟ್ಟಂತೂ ಯಾವಾಗ್ಲೂ ಇಲ್ಲೆ. ಅದೆಂತಕ್ಕೆ ಹೀಂಗೆ ಆೖದು ಅಂತ ಆಲೋಚ್ನೆ ಮಾಡೀರೆ ಭಾಷೆಗೂ ಅದ್ರೂ ಇರ ನಂಟು ತೆಳೀತು. ಅದ್ಕಾಗೆ ಹವೀಕರೆಲ್ಲ ಅವಕಾಶ ಸಿಕ್ಕಾಗ ಹವಿಗನ್ನಡ ಬಳ್ಸೋದನ್ನ ಬಿಡ್ಲಾಗ.

ಹವ್ಯಕ ಮಹಾಸಭೆ ಹವ್ಯಕ ಅಧ್ಯಯನ ಕೇಂದ್ರ ಸ್ಥಾಪನೆಮಾಡಿ ತನ್ನ ಮೂಲ ಉದ್ದೇಶ ಸಾಧನೆಗೆ ಸರಿಯಾದ ನಾಂದಿ ಹಾಡಿದ್ದು. ಈ ಮೂಲಕವಾಗಿ ಅದು ಸಾಧಿಸದು ಬಹಳ ಇದ್ದು. ಈ ಗ್ರಂಥದಲ್ಲಿರೋ ಲೇಖಕರ ಅಭಿಪ್ರಾಯದಲ್ಲೂ ''ಎಲ್ಲ ಪ್ರದೇಶದ ಹವ್ಯಕರೂ ಬೆಂಗ್ಳೂರಲ್ಲಿ ನೆಲ್ಸಿದ್ದ. ಆದ್ದರಿಂದ ಹವ್ಯಕ ಮಹಾಸಭೆಯಲ್ಲಿ ಹವಿಗನ್ನಡದ ಎಲ್ಲ ಪ್ರಾದೇಶಿಕ ಸ್ವರೂಪಗಳ ಪ್ರಾತಿನಿಧ್ಯ ಇದ್ದು, ಇವುಗಳ ಅಧ್ಯಯನ ಹಾಗೂ ಅನುಷ್ಠಾನ ಹವ್ಯಕ ಮಹಾಸಭೆಯ ಮೂಲಕ ಆಗವ್ವು'' ಅಂತ ಬಯಸಿದ್ದೊ ಕಂಡುಬಂತು. ಮಹಾಸಭೆಗೂ ಸೈತ ನುಡಿಯ ಮಹಾಸೂತ್ರದ ಮೂಲಕ ಎಲ್ಲ ಹವ್ಯಕರನ್ನೂ ಒಗ್ಗೂಡಿಸಲ್ಲೆ ಸಾಧ್ಯ ಇದ್ದು. ಮಠ ಬಿಟ್ರೆ ನಮ್ಗೆ ನಮ್ಮದನ್ನ ಹೇಳ್ಕ್ಯಂಬ್ಲೆ ಮಹಾಮನೆಯಾಗಿ ಇಪ್ಪ ಅಂದ್ರೆ ಮಹಾಸಭೆನೇಯ. ಸಮಸ್ತಹವ್ಯಕರ ಏಳ್ಗೆ–ಹಿತ ಬಯಸುವ ಮಹಾಸಭೆ ನುಡಿ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸವ್ವು. ಈಗ ಅಧ್ಯಯನ ಕೇಂದ್ರದ ಮೂಲಕ 'ಹವಿಗನ್ನಡ ಸೂರಿ ಪ್ರಶಸ್ತಿ', 'ಹವಿಗನ್ನಡ ಪ್ರತಿಷ್ಠಾನ' ಮತ್ತು 'ಹವಿಗನ್ನಡ ಸಾಹಿತ್ಯ ಸಮ್ಮೇಳನ'ಗಳನ್ನು ಹಮ್ಮಿಕೊಂಡು ಕಾರ್ಯಪ್ರವರ್ತ ಆಯ್ದು ನಿಜ. ಆದ್ರೆ ಈ ಕೆಲ್ಸಗಳೆಲ್ಲ ನಿರಂತರವಾಗಿ ನಡ್ಕಂಡು ಹೋಪಹಂಗೆ ಯೋಜನೆಗಳಾಗವ್ವು. ಯಾರಾದ್ರೂ ಒಬ್ರೀಗೆ ಉತ್ಸಾಹ ಇಪ್ಪತನ್ಕ ಮಾಡ ಕೆಲ್ಸ ಇದಾಗ್ಲಾಗ. ದೂರದೃಷ್ಟಿ ಇಟ್ಗಂಡು ದೀರ್ಘಕಾಲದ ಯೋಜನೇಲಿ ಒಂದೇ ಸಮನೆ ಮುಂದ್ವರಿತಾ ಹೋಗಕಾಗ್ತು.

ಜಾಗತೀಕರಣದ ಹಿನ್ನೆಲೆಯಲ್ಲಿ ಕನ್ನಡ ಭಾಷೇನೇ ಉಳಿಯದು ಕಷ್ಟ. ಇನ್ನು ಹವ್ಯಕ ಭಾಷೆಯ ಬಗ್ಗೆ ಯೋಚಿಸದ್ರಲ್ಲಿ ಹುರುಳಿಲ್ಲೆ ಅಂತ ಕೆಲವ್ರಿಗೆ ಅನಿಸ್ತ ಇದ್ದು. ಸ್ಪರ್ಧಾತ್ಮಕ ಯುಗದಲ್ಲಿ ಇಂಗ್ಲೀಷನ್ನೊ, ಹಿಂದಿಯನ್ನೊ ಅಥವಾ ವಿದೇಶಿ

ಭಾಷೆಗಳನ್ನೊ ಕಲ್ತಗಂಡ್ರೆ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಲಾಗ್ತು ಅಂತಾನೂ ಆಲೋಚ್ನೆ ಮಾಡ್ತ ಇದೆಲ್ಲ ಖರೇನೇ ಇದ್ರೂ ಮನುಷ್ಯನ ಸಾಧನೇನ ಯೆಂತ್ರಲ್ಲಿ ಅಳಿಯವ್ವು ಅನ್ನೋದು ಮುಖ್ಯ. ಜೊತೀಗೆ ಹವಿಗನ್ನಡ ಪ್ರೀತ್ನೋದು ಅಂದ್ರೆ ಬ್ಯಾರೆ ಭಾಷೆ ಕಲೀಲಾಗ ಅಥವಾ ಮಾತಾಡ್ಲಾಗ ಅಂತ ಅಲ್ಲ. ಎಲ್ಲೆಲ್ಲಿ ಯಾವ್ಯಾವ್ದಕ್ಕೆ ಯಾವ್ಯಾವ ಸ್ಥಾನ ಕೊಡವ್ರೋ, ಅನ್ನೋದನ್ನ ಸವ್ಮಾತ್ನಾಗಿ ತೆಳ್ಕಂಡಿರವ್ವು. ಹವೀಕರಿಗೆ ಮೊದ್ಲು ಹವಿಗನ್ನಡ, ಆಮೇಲೆ ಉಳಿದ ಭಾಷೆ. ರಾಷ್ಟ್ರಪ್ರಜ್ಞೆ, ವಿಶ್ವಪ್ರಜ್ಞೆ ಇವೆಲ್ಲ ಅಮೂರ್ತ ಸ್ವರೂಪದವು. ಅವು ಸಾಕಾರ ಪಡೆಯದು ತಾಯ್ನಾಡು– ತಾಯ್ನುಡಿ ಪ್ರೀತಿಸುವುದರ ಮೂಲಕವೇ. ಅದಕ್ಕಾಗಿ ನಾವೆಲ್ಲ ನಮ್ಮ ಹವಿಗನ್ನಡನ ಅವಕಾಶವಿದ್ದಲ್ಲಿ ಸಾಧ್ಯವಿದ್ದಷ್ಟು ಬಳಸನ. ಹವಿಗನ್ನಡ ಉಳ್ಸಿ ಬೆಳ್ಸದು ಅಂದ್ರೆ ಹವ್ಯಕ ಸಂಸ್ಕೃತಿ ಮತ್ತು ಅನನ್ಯತೆಯನ್ನು ಉಳ್ಸಿಕೊಂಬುದೇ ಆಗಿರ್ತು.

'ಹವಿಗನ್ನಡ ಚಿಂತನ'ದೊಳಗಿನ ಬರಹಗಳು ತಮ್ಮಷ್ಟಕ್ಕೆ ತಾವೇ ಗ್ರಂಥದ ಉದ್ದೇಶ ಸ್ಪಷ್ಟಪಡಿಸ್ತ ಹೋಗ್ತೋ. ಹವಿಗನ್ನಡದ ಮ್ಯಾಲಿನ ಅಭಿಮಾನದಿಂದ ಹಾಗೂ ನಾರಾಯಣಣ್ಣನ ವಿಶ್ವಾಸಕ್ಕೆ ಕಟ್ಟುಬಿದ್ದು ಆನೂ ನಾಲ್ಕು ಮಾತು ಬರೆದ್ದೆ. ಈ ಗ್ರಂಥ ಓದಿ, ಹವಿಗನ್ನಡ ಮ್ಯಾಲಿನ ಪ್ರೀತಿ ಉಳ್ಸಿ, ಬೆಳ್ಸಲ್ಲೆ ಕಿಂಚಿತ್ತಾದ್ರೂ ಸಾಧ್ಯವಾದ್ರೆ ಶಾನುಭಾಗರ ಶ್ರಮ ಸಾರ್ಥಕ.

ಡಾ|| ಶಾಲಿನಿ ರಘುನಾಥ
ಮುಖ್ಯಸ್ಥರು, ಜಾನಪದ ಅಧ್ಯಯನ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ

ಅಧ್ಯಾಯ - 1

ಹವಿಗನ್ನಡ – ಒಂದು ಚಿಂತನೆ

''ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ'' ಹೇಳಿ ಶ್ರೀರಾಮಚಂದ್ರ ವಿಭೀಷಣಂಗೆ ಹೇಳಿದ್ದ. ತಾಯಿ, ತಾಯ್ನಾಡು ಜೊತೆಗೆ ತಾಯ್ನುಡಿನೂ ಸೇರಸ್ಕಳೊ. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ತಾಯಿ, ತಾಯ್ನೆಲ, ತಾಯ್ನುಡಿಗಳ ಬಗ್ಗೆ ಸದಭಿಮಾನ ಇರೊ. ಹೆಮ್ಮೆ ಇರೊ. ಕೀಳರಿಮೆ, ಅಸಡ್ಡೆ ಇಪ್ಲಾಗ. ಜೊತೆಗೆ ಮಾತ್ರ ಸಮಾಜದ ಬಗ್ಗೆನೂ ಅಭಿಮಾನ ಇರೊ. ಇವೆಲ್ಲದರ ಬಗ್ಗೆ ಸರಿಯಾದ ಅರಿವು ಮತ್ತೆ ಸದಭಿಮಾನ ಇದ್ದೋರನ್ನ ಸಮಾಜ ಗೌರವಿಸ್ತು. ಸಮಾಜದಲ್ಲಿ ಅಂತೋರ ಸಂಖ್ಯೆ ಹೆಚ್ಚಾದಾಂಗೆ ಸಮಾಜದ ಗೌರವಾನೂ ಹೆಚ್ಚಾಗ್ತು. ಇಡೀ ಸಮಾಜವೇ ಹೆಮ್ಮೆ ಪಡ್ವಾಂಗೆ ಆಗ್ತು. ಸ್ವಯಂಪ್ರಜ್ಞೆ ಮೂಡ್ಸೋ ಬೆಳಕೇ ಅಂತದ್ದು. ಈ ಪ್ರಜ್ಞೆ ಮೂಡ್ಸೊ ಕೆಲ್ಸ ಎಲ್ಲಾ ದಿಕ್ಕಿಂದ್ಲೂ ಆಗ್ತಾನೇ ಇರೊ. ಸಮಾಜ ನಿರಂತರವಾಗಿ ಜಾಗೃತವಾಗಿರೊ. ವಿಸ್ಮೃತಿಗೆ ಜಾರುಲಾಗ.

ಹವ್ಯಕರ ನೆಲೆ-ವಲಸೆ : ಕಳೆದ ಹದಿನೇಳು ಶತಮಾನಗಳಿಂದಾನೂ ಕರ್ನಾಟಕದ ನೆಲವೇ ಹವ್ಯಕರಿಂಗೆ ತಾಯ್ನೆಲ. ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರ, ಸಿರ್ಸಿ, ಸಿದ್ದಾಪುರ, ಯಲ್ಲಾಪುರ ತಾಲೂಕುಗಳು ಮತ್ತೆ ಸಾಗರ ಸೀಮೆ ಅಂದರೆ ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳು ಇವೆಲ್ಲಾ ಭೌಗೋಲಿಕವಾಗಿ ಒತ್ತಟ್ಟಿಗೆ ಇದ್ದು. ಇಲ್ಲಿ ಹವ್ಯಕರ ಸಂಖ್ಯೆ ಗಣನೀಯವಾಗಿದ್ದು. ಹೊನ್ನಾವರದಿಂದ ಉಡುಪಿವರೆಗೆ ವಿರಳವಾಗಿದ್ದು. ಅಲ್ಲಿಂದಾಚೆಗೆ (ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ) ಬಂಟವಾಳ, ಬೆಳ್ತಂಗಡಿ, ಪುತ್ತೂರು, ಮಂಗಳೂರು, ಸುಳ್ಯ, ಕಾಸರಗೋಡು ತಾಲೂಕುಗಳೆಲ್ಲಾ ಭೌಗೋಲಿಕವಾಗಿ ಒತ್ತಟ್ಟಿಗೆ ಇದ್ದು. ಇಲ್ಲಿಯೂ ಹವ್ಯಕರ ಸಂಖ್ಯೆ ಗಣನೀಯವಾಗಿದ್ದು. ಹವ್ಯಕ ಸಂಖ್ಯೆ ಗಣನೀಯವಾಗಿದ್ದು. ಹವ್ಯಕರ ವಸತಿ

ಪ್ರದೇಶದಲ್ಲಿ ಭೌಗೋಲಿಕವಾಗಿ ಉತ್ತರ ಸೀಮೆ ಹಾಗೂ ದಕ್ಷಿಣ ಸೀಮೆ ಹೀಗೆ ಎರಡಾಗಿ ಗುರುತಿಸುಲೂ ಸಾಧ್ಯ ಇದ್ದು. ಉತ್ತರ ಸೀಮೆಯೇ ತಮ್ಮ ಮೂಲ ಹೇಳಿ ದಕ್ಷಿಣ ಸೀಮೆಯ ಕೆಲವು ಹಿರಿಯ ಪಂಡಿತರ ಅಭಿಪ್ರಾಯಾನೂ ಇದ್ದು. (ಸಂಶೋಧನೆಗೆ ಇದೂ ಒಂದು ವಿಷಯ) ಶತಮಾನಗಳ ಹಿಂದಿನ ಕಾಲ್ದಲ್ಲಿ ಕಾರಣಾಂತರಗಳಿಂದ ಉತ್ತರದಿಂದ ದಕ್ಷಿಣಕ್ಕೆ ವಲಸೆ ಹೋದಿಕ್ಕು. ಅಲ್ಲಿದ್ದ ಹೆಚ್ಚಿನ ಅನುಕೂಲಕರ ಪರಿಸ್ಥಿತಿ ನೋಡಿ, ಅನುಭವಿಸಿದ್ಹಾಂಗೆ ವಲಸೆ ಹೆಚ್ಚಾಗಿಕ್ಕು. ಕ್ರಮೇಣ ಸೀಮೆ ತುಂಬ ಪಸರಿಸ್ಕಂಡಿಕ್ಕು. ಈ ಎರಡೂ ಸೀಮೆ ಮಧ್ಯೆ ದೊಡ್ಡ ದೊಡ್ಡ ನದಿ ಇದ್ದು. ಗುಡ್ಡ–ಬೆಟ್ಟಾನೂ ಇದ್ದು. ಹಿಂದಿನ ಕಾಲ್ದಲ್ಲಿ ಕಾಲ್ನಡಿಗೇಲೆ ಹೋಗಕಾಗಿತ್ತು. ಕಳೆದ 100 ವರ್ಷದವರೆಗೂ ಸರಿಯಾಗಿ ಸಾರಿಗೆ ಸಂಪರ್ಕ ಇತ್ತಿಲ್ಲೆ. ಹಾಂಗಾಗಿ ಪರಸ್ಪರ ಸಂಪರ್ಕ ಸಂಬಂಧ ವಿರಳಾಗಿತ್ತು.

ವಲಸೆ ಹೇಳೂದು ಒಂದು ಸಾಮಾಜಿಕ ಪ್ರಕ್ರಿಯೆ. ಇದು ಎಲ್ಲಾ ಸಮಾಜ್ದಲ್ಲೂ ನಿರಂತರವಾಗಿ ನಡಿತಾನೇ ಇರ್ತು. ಹವ್ಯಕರ ವಲಸೆ ಈಗಲೂ ನಡಿತಾನೇ ಇದ್ದು. ಮೂಲನೆಲೆಯಿಂದ ಹೊರಟ ಹವ್ಯಕರು ಇಂದು ಕರ್ನಾಟಕದ ಪೇಟೆ, ಪಟ್ಟಣ, ನಗರ, ಮಹಾನಗರಗಳ್ನೂ ದಾಟಿ, ಭಾರತದ ಬೇರ್ಬೇರೆ ನಗರ ಅಲ್ದೇ ಜಗತ್ತಿನ ಅನೇಕ ದೇಶಕ್ಕೂ ಹೋಗಿ ನೆಲೆಸಿದ್ದೊ. ಹವ್ಯಕರು ಇಂದು ವಿಶ್ವವ್ಯಾಪಿ.

ಒಂದೇ ನುಡಿ ಹಲವು ನುಡಿಯಪ್ಪದು : ಒಂದೇ ನುಡಿ ಆಡೋ ಜನ ಬೇರ್ಬೇರೆ ಕಡೆಲಿ (ದೂರ ದೂರ) ನೆಲಸ್ದಾಗ, ಅವರ ಮಧ್ಯೆ ಸಂಪರ್ಕ ಕಡಿದ್ಹೋದಾಗ ಅಥವಾ ತೀರಾ ವಿರಳಾದಾಗ, ದೂರಕ್ಹೋಗಿ ನೆಲಸ್ದೋರ ನುಡಿ ಮೂಲದ ನುಡಿಗಿಂತ ಭಿನ್ನವಾಗಿ ಹೋಗ್ತು. ವಲಸಿಗರ ನುಡಿಮೇಲೆ ಸ್ಥಳೀಯ ನುಡಿ ಪರಿಣಾಮ ಅಪ್ಪದೇ ಇದ್ಕೆ ಮುಖ್ಯ ಕಾರಣ. ಈವತ್ತಿಗೂ ಉತ್ತರ ಸೀಮೆ ಹವ್ಯಕರ ನುಡಿಗೂ ದಕ್ಷಿಣ ಕನ್ನಡ ಸೀಮೆ ಹವ್ಯಕರ ನುಡಿಗೂ ಹೆಚ್ಚಿನ ಅಂತರ ಕಂಡು ಬಪ್ಪಲೆ ಇದೇ ಕಾರಣ ಹೇಳಿ ಪಂಡಿತರ ಅಭಿಪ್ರಾಯ ಇದ್ದು. ಈ ಎರಡು ನುಡಿಗಳ್ನ ಬಡಗು ಹವ್ಯಕರ ನುಡಿ, ತೆಂಕಣ ಹವ್ಯಕರ ನುಡಿ ಹೇಳಿ ಹೇಳ್ಲಕ್ಕು. ಈ ಎರಡೂ ನುಡಿಲಿ ಮತ್ತೆ ಪ್ರಾದೇಶಿಕ ಒಳಭೇದ ಇದ್ದು ಹೇಳೂದು ಸತ್ಯವೇ.

ಹವ್ಯಕರ ತಾಯ್ನುಡಿ : ಹವ್ಯಕರ ತಾಯ್ನುಡಿ ಹವಿಗನ್ನಡ. ಇದಕ್ಕೆ ಹವ್ಯಕ ಕನ್ನಡ, ಹೈಗನ್ನಡ, ಹೈವಗನ್ನಡ, ಹೈಗಭಾಷೆ ಹೀಗೂ ಹೇಳ್ತೊ. ಹವ್ಯಕರ ಆಡುನುಡಿಗೆ ಹವಿಗನ್ನಡ ಹೇಳೋ ಚೆಂದದ ಹೆಸರಿಟ್ಟ ಕೀರ್ತಿ ವೆಂಕಟೇಶ ದೊಡ್ಮನೆ ತಲಕಾಲಕೊಪ್ಪ ಇವರಿಗೆ ಸಲ್ತು. 1992ನೇ ಇಸ್ವಿ ಜನವರಿ 'ಹವ್ಯಕ' ಪತ್ರಿಕೆಲಿ ಇವರ ''ಹವಿಗನ್ನಡ'' ಹೇಳೊ ಚೆಂದದ ಕವಿತೆ ಪ್ರಕಟ ಆಜು. ಹವಿಗನ್ನಡದಲ್ಲಿ ಎರಡು ಮುಖ್ಯ ಸೀಮಾಭೇದ ಮೇಲೆ ಗುರುತಿಸಿದ್ದೊ. ಒಟ್ಟಾರೆ ಹವಿಗನ್ನಡ್ದಲ್ಲಿ 6 ಮುಖ್ಯ ಪ್ರಾದೇಶಿಕ ಭೇದ ಗುರುತಿಸುಲೆ ಸಾಧ್ಯ ಇದ್ದು ಹೇಳಿ ಪಂಡಿತರ ಅಭಿಪ್ರಾಯ ಇದ್ದು.

1. ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶ – ಕುಮಟಾ, ಹೊನ್ನಾವರ ತಾಲೂಕುಗಳ ಹವಿಗನ್ನಡ.
2. ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ಪ್ರದೇಶ – ಸಿರ್ಸಿ, ಸಿದ್ದಾಪುರ, ಯಲ್ಲಾಪುರ ತಾಲೂಕುಗಳ ಹವಿಗನ್ನಡ.
3. ಮಲೆನಾಡಿನ ಸಾಗರ ಸೀಮೆಯ – ಸಾಗರ, ಸೊರಬ, ಹೊಸನಗರ, ತೀರ್ಥಹಳ್ಳಿ ತಾಲೂಕುಗಳ ಹವಿಗನ್ನಡ

   (ಈ ಮೂರು ಸೇರಿ ಬಡಗು ಹವಿಗನ್ನಡ ಹೇಳ್ಲಕ್ಕು)

4. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪಂಜಸೀಮೆಯ ಹವಿಗನ್ನಡ
5. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಸೀಮೆಯ ಹವಿಗನ್ನಡ
6. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಉಳಿದ ಪ್ರದೇಶದ (ಕಾಸರಗೋಡು ಸೇರಿದೆ) ಹವಿಗನ್ನಡ (ಕುಂಬಳೆ ಸೀಮೆ ಹವಿಗನ್ನಡ)

   (ಈ ಮೂರು ಸೇರಿ ತೆಂಕಣ ಹವಿಗನ್ನಡ ಹೇಳ್ಲಕ್ಕು)

ಈ ನುಡಿಗಳಲ್ಲಿ ಮತ್ತೆ ಸೊಲ್ಪ್ಸೊಲ್ಪ ಒಳಭೇದ ಇದ್ದು ಹೇಳೂದು ವಾಸ್ತವಿಕ ಸಂಗ್ತಿನೇಯಾ. ನುಡಿ ವಿಜ್ಞಾನಿಗಳ ಪ್ರಕಾರ ಸುಮಾರು 20 ಮೈಲಿ ಅಂತರಕ್ಕೆಲ್ಲಾ ನುಡಿ ಪ್ರಯೋಗ ಬದ್ಲಪ್ಪುದು ಸಹಜ. ಹವಿಗನ್ನಡವೂ ಇದ್ಕೆ ಅಪವಾದ ಅಲ್ಲ.

ಹವಿಗನ್ನಡ್ದಲ್ಲಿ ಈ ನಮೂನಿ ಪ್ರಾದೇಶಿಕ ಭೇದ ಇದ್ರೂ ಒಂದ್ಸೀಮೆ ಹವಿಗನ್ನಡ ಇನ್ನೊಂದ್ಸೀಮೆ ಹವ್ಯಕ್ರಿಗೆ ಅರ್ಥ ಆಗ್ತು. ಅಂಥಾ ಒಂದು ಅಂತರಗಂಗೆ ಎಲ್ಲಾ ಸೀಮೆಗಳ ಹವಿಗನ್ನಡ್ದಲ್ಲಿ ಹರಿತಾ ಇದ್ದು.

ನುಡಿಸೇವೆ : ಸಾಹಿತ್ಯ ಪ್ರಿಯರಾದ ಹವ್ಯಕರಲ್ಲಿ ಈವರೆಗೆ ಸುಮಾರು 850 ಜನ ಸಾಹಿತಿಗಳಿಂದ 6000 ಕೃತು ರಚ್ನೆ ಆತು ಹೇಳಿ ಅಂದಾಜಿದ್ದು. ಸುಮಾರು 5500 ರಷ್ಟು ಕೃತಿ ನಾಡುನುಡಿಯಾದ ಕನ್ನಡ್ದಲ್ಲೇ ಇದ್ದು . ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃತಿ ರಚ್ನೆ ಆಜು. ಶ್ರೀ ಅಖಿಲ ಹವ್ಯಕ ಮಹಾಸಭೆಯ (ಸ್ಥಾಪನೆ 1943) ಹವ್ಯಕ ಗ್ರಂಥಾಲಯ್ದಲ್ಲಿ ಹವ್ಯಕ ರಚಿತ ಎಲ್ಲಾ ಕೃತಿಗಳ ಸಂಗ್ರಹ ಆಗ್ತಾ ಇದ್ದು. ಸದ್ಯಕ್ಕೆ ಸುಮಾರು 2500 ಕೃತಿಗಳ ಸಂಗ್ರಹ ಆಜು. ಹವ್ಯಕ ರಚಿತ 1800 ಕೃತಿಗಳ ದಾಖಲೆ ಇದ್ದ ಒಂದು ಪುಸ್ತಕ ಕೂಡಾ ಪ್ರಕಟ ಆಜು. ನೋಡಿ : ಕೀರ್ತಿಶೇಷ ಹವ್ಯಕ ಗ್ರಂಥಕಾರ ಕೃತಿ ಸೂಚಿ. ಲೇಖಕ : ನಾರಾಯಣ ಶಾನಭಾಗ.ಪ್ರ: ಹವ್ಯಕ ಅಧ್ಯಯನ ಕೇಂದ್ರ, ಬೆಂಗಳೂರು. ಪ್ರ.ಮು: 2005

ಹವಿಗನ್ನಡ ನುಡಿಸೇವೆ

ರಚನೆ : ಹವಿಗನ್ನಡದ ಮೊದಲ್ನೇ ಕೃತಿ 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ'. ಇದು 1887ರಲ್ಲಿ ಮುಂಬೈಲಿ ಪ್ರಕಟಾಜು. ಕೃತಿಕಾರ 'ಹವ್ಯಕ ಹಿತೇಚ್ಛು'. ಇದು ಅವರ ಗುಪ್ತನಾಮ. ಈ ನಾಟಕ ಬರ್ದೋರು ಕರ್ಕಿಯ ಸೂರಿ ವೆಂಕಟರಮಣ ಶಾಸ್ತ್ರಿಗಳೇಯಾ ಹೇಳಿ 1953ರಲ್ಲಿ ಪ್ರಾಧ್ಯಾಪಕ ಎಲ್.ಟಿ. ಶರ್ಮಾರು ಕಂಡ್ಹಿದ್ರು. ಅಲ್ದೇ ನಾಟ್ಕದ ಮರು ಮುದ್ರಣಾನೂ ಮಾಡ್ಸಿದ್ರು. ಅಲ್ಲಿಂದ ಇಲ್ಲೀವರೆಗೆ 32 ಜನರಿಂದ 40 ಕೃತಿ ಪುಸ್ತಕ ರೂಪ್ದಲ್ಲಿ ಹೊರಗ್ಬಂಜು. ಇದರಲ್ಲಿ ಎರಡು ಜನ ಹವ್ಯಕೇತರರೂ ಇದ್ದೊ ಹೇಳೂದು ಗಮನಾರ್ಹ. ಕತೆ, ಕಾದಂಬರಿ,ಕವನ ಸಂಗ್ರಹ, ನಾಟ್ಕ, ಶಬ್ದಕೋಶ, ಮಹಾಕಾವ್ಯ ಹೀಂಗೆ ಸಾಹಿತ್ಯದ ಮುಖ್ಯ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿ ಆಜು. ಇದಕ್ಕಿಂತ್ಲೂ ಹೆಚ್ಗೆ ಜನರ ಕತೆ, ಕವನ, ನಾಟ್ಕ, ಲೇಖನ ಇತ್ಯಾದಿ ನಾಡಿನ ಹಲವಾರು ಪತ್ರಿಕೇಲಿ ಪ್ರಕಟ ಆಜು.

ಪ್ರಕಟಣೆ : ಹವಿಗನ್ನಡ ಕೃತಿಯ ಪುಸ್ತಕ ರೂಪ್ದಲ್ಲಿ ಹೊರಗತ್ತಪ್ಪುದು ಅಂದ್ರೆ ಆದೊಂದು ಸಾಹಸವೇ ಸರಿ. ಯಾಕಂದ್ರೆ ಅದ್ಕೆ ದೊಡ್ಡ ಮಾರ್ಕೆಟ್ ಇಲ್ಲೆ. ಹವ್ಯಕರ ಸದ್ಯದ ಜನಸಂಖ್ಯೆ ಸುಮಾರು 4 ಲಕ್ಷ ಮಾತ್ರ. ಅದೂ ಹರಿದು ಹಂಚೋಜೊ. ಹವಿಗನ್ನಡ್ದಲ್ಲಿ ಪ್ರಾದೇಶಿಕ ಭೇದ ಅಂತೂ ಇದ್ದೇ ಇದ್ದು. ಇಷ್ಟಾದ್ರೂ ಕೆಲವು ಜನ ಹವಿಗನ್ನಡ ಪುಸ್ತಕ ಪ್ರಕಟ ಮಾಡೊ ಸಾಹಸ ಮಾಡಿದ್ದೊ. ಕೆಲವು ಕನ್ನಡ ಪತ್ರಿಕೆಯವು ಲೇಖನ, ಕತೆ, ಕವನ, ಅಂಕಣ ಬರಹ ಹೀಂಗೆ ಪ್ರಕಟ ಮಾಡಿದ್ದೊ ಹೇಳೋದು ಸಂತಸದ ಸಂಗ್ತಿ.

ಸಂಶೋಧನೆ : ಹವ್ಯಕ ಸಂಸ್ಕೃತಿ, ಹವಿಗನ್ನಡ ಭಾಷೆ, ಸಾಹಿತ್ಯಗಳ ಮೇಲೆ ಅಧ್ಯಯನ, ಸಂಶೋಧನೆ ಹಿಂದೆಯೂ ನಡದ್ದು. ಈಗ್ಲೂ ನಡೀತಾ ಇದ್ದು. ವಿದೇಶೀ ಮಹಿಳೆ ಕೂಡಾ ಸೇರಿ ಕೆಲವರಿಗೆ ಪಿ.ಎಚ್.ಡಿ. ಕೂಡಾ ದೊರಕಿದ್ದು.

ಹವಿಗನ್ನಡ ನುಡಿ ಹಿರಿಮೆ : ಹಳೆಗನ್ನಡದ ಹಲವಾರು ವೈಶಿಷ್ಟ್ಯಗಳ್ನ ಇಂದಿಗೂ ಉಳಿಸ್ಕಂಡ ಭಾಷೆ ಇದು. ''ಆರಂಕುಶಮಿಟ್ಟೊಡಂ ನೆನೆವುದೆನ್ನಮನಂ ಬನವಾಸಿ ದೇಶಮಂ'' ಹೇಳಿದ ಮಹಾಕವಿ ಪಂಪನ ಕಾವ್ಯದಲ್ಲಿದ್ದ ಎಷ್ಟೋ ಹಳಗನ್ನಡ ಶಬ್ದಂಗಳ ರೂಪ ಹವಿಗನ್ನಡದಲ್ಲಿ ಸಿಕ್ತು– ಹೇಳಿ ಭಾಷಾ ಪಂಡಿತರು ಹೇಳ್ತೊ. ಈ ಮಹಾಕವಿ ಹವ್ಯಕರ ಮಧ್ಯೆ ಬಾಳಿದಂವ. 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ'ಕ್ಕೆ ಕನ್ನಡ ಸಾಹಿತ್ಯದಲ್ಲಿ ಮೊದಲ್ನೆ ಸ್ವತಂತ್ರ ಸಾಮಾಜಿಕ ನಾಟ್ಕ ಹೇಳೋ ಖ್ಯಾತಿ ಇದ್ದು. ಇತ್ತೀಚೆಗೆ ಈ ನಾಟ್ಕ ಅಂಗ್ರೇಜಿಗೂ ಅನುವಾದ ಆಜು (ಅಪ್ರಕಟಿತ) ಕನ್ನಡದ ಪ್ರಧಾನ ಉಪಭಾಷೆಯಾದ ಈ ನುಡಿಲಿ ಆದಷ್ಟು ಸಾಹಿತ್ಯ ಕೃಷಿ, ನುಡಿ ಬಗ್ಗೆ ಆದಷ್ಟು ಅಧ್ಯಯನ ಇನ್ಯಾವ ಉಪಭಾಷೆಯಲ್ಲೂ ಆದದ್ದಿಲ್ಲೆ. ''ದತ್ತೂ ಮಾಣಿ ಮದ್ವೆ ಪ್ರಸಂಗ'' ಹೇಳೋ ನಾಟ್ಕ ಹಿಂದೀ ಮತ್ತೆ ಕೊಂಕಣಿ ಭಾಷೆಗಳಿಗೆ ಅನುವಾದಗೊಂಡಿದ್ದು(ಅಪ್ರಕಟಿತ). ''ದೊಡ್ಡ ಜಾಲು'' ಕಾದಂಬರಿ ತಮಿಳಿನಲ್ಲಿ ಅನುವಾದ ಆಜು. ''ಧರ್ಮ ವಿಜಯ'' ಹೇಳೋ ಮಹಾಕಾವ್ಯ ಕೂಡಾ ಪ್ರಕಟ ಆಜು. ಕನ್ನಡದ ಇನ್ಯಾವ್ದೇ ಉಪಭಾಷೆಲೂ ಮಹಾಕಾವ್ಯ ಇನ್ನೂ ಬಂಜಿಲ್ಲೆ. ಕ್ರಿ.ಶ. 1887ರಿಂದ ಇಲ್ಲೀ ತನ್ಕ ಹವಿಗನ್ನಡ್ದಲ್ಲಿ

ಸೃಷ್ಟಿಯಾದ ಎಲ್ಲಾ ನಮೂನಿ ಸಾಹಿತ್ಯದ ಅಧ್ಯಯನ ಕೃತಿ ಇತ್ತೀಚೆಗೆ ಪ್ರಕಟಾಜು. (ನೋಡಿ : ಈ ನೆಲದ ಕಂಪು ಲೇ। ಡಾ॥ ಹರಿಕೃಷ್ಣ ಭರಣ್ಯ 2006) ಹೀಂಗೆ ಹವಿಗನ್ನಡದ ಕಿರೀಟಕ್ಕೆ ಸಾಕಷ್ಟು ಹೊನ್ನಿನ ಗರಿ ಇದ್ದು. ಈಗ ''ಹವಿಗನ್ನಡ ಸಾಹಿತ್ಯ ಸಮ್ಮೇಲನ'' ಹೇಳೊ ರತ್ನಕಲಶನೂ ಇದಕ್ಕೆ ಸೇರ್ತು. ಇದೆಲ್ಲಾ ಹವ್ಯಕರಿಗೆ ಅತ್ಯಂತ ಹೆಮ್ಮೆಯ, ಅಭಿಮಾನದ ವಿಷ್ಯ.

ಗೋಕರ್ಣದಿಂದಮಾ ಪಯಸ್ವಿನಿ ವರೆಗಿಪ್ಪ ಹವ್ಯಕರಾ ನಾಡೊಳ್
ಮಡಿಕೇರಿಯಿಂದಮಾ ಸಾಗರ ಪರ್ಯಂತಮಾಗಿರ್ಪ ಸಿರಿಬೀಡೊಳ್।
ಅಣ್ಣಯ್ಯ ಬತ್ತಿಲ್ಲೆ ನಾವ್ ಹೋಪೊ ಕಾಂಬೊ ಬಯಿಂದೆ ಅಬ್ಬೆಗೆಂತಾತೊ
ಹಳೆಗನ್ನಡದ ಸೊಗಡಿರ್ಪ ಹವಿಗನ್ನಡದ ಸಿರಿಯದೇನೆಂಬೆನೊ॥

ಹವಿಗನ್ನಡ ಸವಿಗನ್ನಡವಾಗಿರಲಿ. ಹವ್ಯಕರ ನಾಲಿಗೆಲಿ ಸದಾ ನಲಿದಾಡತಿರ್ಲಿ.

ನಾಡು ನುಡಿ ಅಭಿಮಾನ :

ಕನ್ನಡಿಗರಿಗೆ ತಮ್ಮ ನಾಡು, ನಡೆ, ನುಡಿ, ನೆಲ, ಜಲ ಇವುಗಳ ಬಗ್ಗೆ ಅಭಿಮಾನ ಕಡ್ಮೆ ಹೇಳೂದು ಮಹಾ ಮಹಾ ಪಂಡಿತ್ರು ಮತ್ತೆ ಗಣ್ಯರ ಅಭಿಪ್ರಾಯ. ''ಸದಭಿಮಾನದ ಗೂಡು'' ಹೇಳಿ ಕನ್ನಡಿಗರ ಬಗ್ಗೆ ಹೇಳಿದ್ದ ಕಾಲ ಮುಗ್ದೋತು ಹೇಳಿ ನಿಚ್ಚಳವಾಗಿ ಕಂಡು ಬರ್ತಾ ಇದ್ದು. ಶಾಲೆ, ಕಾಲೇಜು, ಸರ್ಕಾರ ಹೀಂಗೆ ಎಲ್ಲಾ ರಂಗ್ದಲ್ಲೂ ಇದೇ ಹಾಡು. ಹವ್ಯಕರಿಗಂತೂ ಅದು ಇನ್ನೂ ಕಡ್ಮೆ ಹೇಳೀ ಕಾಣ್ತು ಹೇಳಿ ಹವಿಗನ್ನಡ ಸಾಹಿತಿಗಳದ್ದು ಮಾತ್ರ ಅಲ್ಲ ಉಳಿದ ಹಲವಾರು ಹಿರಿಯೋರ ಅಭಿಪ್ರಾಯನೂ ಇದ್ದು. ಇಷ್ಟಾಗಿಯೂ ಕೆಲವರಾದ್ರೂ ತಾಯ್ನುಡಿ ಮೇಲಿದ್ದ ಪ್ರೀತಿ, ಅಭಿಮಾನದಿಂದ ಹವಿಗನ್ನಡ್ದಲ್ಲಿ ಹಿಂದೆ ಬರದ್ದೊ, ಈಗ್ಲೂ ಬರಿತಾ ಇದ್ದೊ. ಪ್ರಕಟಣೆಯೂ ಆಗ್ತಾ ಇದ್ದು ಹೇಳೂದು ಸ್ವಲ್ಪಾದ್ರೂ ಸಮಾಧಾನದ ವಿಷ್ಯ. ಹವಿಗನ್ನಡ ಪ್ರೋತ್ಸಾಹಿಸೋ ಕೆಲ್ಸ ಮೊದಲ್ನೇದಾಗಿ ಹವ್ಯಕರೇ ಮಾಡೊ. ಭಗವದ್ಗೀತೆಲಿ ಕೃಷ್ಣ ಪರಮಾತ್ಮ ಹೇಳಿದ್ನಿಲ್ಯ ''ಉದ್ಧರೇದಾತ್ಮನಾತ್ಮಾನಂ ಆತ್ಮಾನಂ ನಾವಸೀದಯೇತ್'' ನಮ್ಮನ್ನ ನಾವೇ ಉದ್ಧಾರ ಮಾಡ್ಕಳೋ ನಾಶ ಮಾಡ್ಕಂಬ್ಲಾಗ. ಇದು ವ್ಯಕ್ತಿಗೆ ಮಾತ್ರ ಅಲ್ಲ, ಅವನ

ತಾಯ್ನುಡಿಗೂ ಸಂಬಂಧ ಪಡ್ತು. ಅಬ್ಬೆನುಡಿ ಆತ್ಮೀಯವಾಗಿರ್ತು, ಹೃದಯಕ್ಕೆ ಹತ್ತಿರವಾಗಿರ್ತು. ಪರನುಡಿಗಳ ಮಧ್ಯೆ ಜೀವನ ಮಾಡ್ತಿಪ್ಪಾಗ ತಾಯ್ನುಡಿ ಕೇಳ್ತಾಗ ಹೃದಯಕ್ಕೆ ಅಪ್ಪ ಆನಂದಕ್ಕೆ ಅದೇ ಸಾಟಿ.

ನುಡಿ-ಸಂಸ್ಕೃತಿ: ನುಡಿ ಹೇಳೂದು ಸಂಸ್ಕೃತಿಯ ಅವಿಭಾಜ್ಯ ಅಂಗ. ನುಡಿ ಉಳಿದ್ರೆ ಸಂಸ್ಕೃತಿ ಉಳಿತು. ನುಡಿ ಅಳಿವು ಸಂಸ್ಕೃತಿಯ ಅಳಿವು. ಜಗತ್ತಿನಲ್ಲಿ ಇಂದು ಎಷ್ಟೋ ನುಡಿ, ಸಂಸ್ಕೃತಿ ಅಳಿದ್ಹೋಜು. ಭಾರತದಲ್ಲೇ 1971ರ ಗಣತಿ ಪ್ರಕಾರ 1400 ರಷ್ಟು ಇದ್ದ ನುಡಿ 1981ಕ್ಕೆ 700ಕ್ಕೆ ಇಳ್ದು 1991ಕ್ಕೆ 200ಕ್ಕೆ ಬಂದು 2001ನೇ ಇಸ್ವಿಗೆ ಕೇವಲ 60ಕ್ಕೆ ಇಳಿದ್ಹೋಜಡ. ಅಂದ್ರೆ 30 ವರ್ಷದಲ್ಲಿ ಎಷ್ಟೊಂದು ಉಪಭಾಷೆ (ನುಡಿ) ನಾಶಾಗೋತು ಅಲ್ದ? ಈ ದುರ್ಗತಿ ಇನ್ನೆಷ್ಟು ನುಡಿಗಳಿಗಿದ್ದೊ ಏನೊ. ಇಂತಾ ಪರಿಸ್ಥಿತಿಲಿ ಉಪಭಾಷಾ ವರ್ಗಕ್ಕೆ ಸೇರಿದ ಹವ್ಯಕರು ಎಚ್ಚೆತ್ಕಳದಿದ್ರೆ ಭವಿಷ್ಯದಲ್ಲಿ ದುರಂತ ನಿಶ್ಚಯ. ಉತ್ತಿಷ್ಟತ, ಜಾಗ್ರತ ಹೇಳೂದು ನಮ್ಮ ಇಂದಿನ ಮಂತ್ರ, ತಂತ್ರ, ಕ್ರಿಯೆ ಎಲ್ಲಾ ಆಗೊ. ಆ ದಿಕ್ಕಲ್ಲಿ ಹವ್ಯಕ ಮಹಾಸಭೆಯ ಅಧ್ಯಯನ ಕೇಂದ್ರ ಕೆಲವು ದಿಟ್ಟ ಹೆಜ್ಜೆ ಇಟ್ಟಿದ್ದು. ಹವಿಗನ್ನಡದ ಆದ್ಯ ಕೃತಿಕಾರರ ಸ್ಮರಣಾರ್ಥ ''ಹವಿಗನ್ನಡ ಸೂರಿ'' ಪ್ರಶಸ್ತಿ ಸ್ಥಾಪನೆ ಮಾಡಿದ್ದು. ಎರಡು ಜನ ಹವಿಗನ್ನಡ ನುಡಿ ಸೇವಕರಿಗೆ ಈ ಪ್ರಶಸ್ತಿ ನೀಡಿ ಪುರಸ್ಕಾರ ಮಾಡಿದ್ದು. ಹವಿಗನ್ನಡದ ಸರ್ವಾಂಗೀಣ ಅಭಿವೃದ್ಧಿಗಾಗಿ ''ಹವಿಗನ್ನಡ ಪ್ರತಿಷ್ಠಾನ'' ಸ್ಥಾಪನೆ ಮಾಡಿದ್ದು. ಈಗ ''ಹವಿಗನ್ನಡ ಸಾಹಿತ್ಯ ಸಮ್ಮೇಲನ''ದ ಕನಸು ನನಸಾಗಿದ್ದು ಒಂದು ಮಹತ್ತರ ಹೆಜ್ಜೆ.

''ಹವ್ಯಕ'' ಪತ್ರಿಕೆ ಓದುಗರ ಅಭಿಪ್ರಾಯ : ಹವ್ಯಕ ಮಹಾಸಭೆಯ ಮುಖವಾಣಿ ''ಹವ್ಯಕ'' ಮಾಸಪತ್ರಿಕೆ. ಹವ್ಯಕ ಸಮಾಜ ಮತ್ತು ಮಹಾಸಭೆ ಮಧ್ಯೆ ಇಪ್ಪ ಐಕ್ಯಕ ಸಂವಹನ ಮಾಧ್ಯಮ. ಇದರ ಪ್ರಸಾರ ಈಗ 10000 ಮಿಕ್ಕಿದ್ದು. ಅಗಸ್ಟ 2006ರ ಸಂಚಿಕೆಲಿ ''ಹವಿಗನ್ನಡ ಉಳ್ಸಿ ಬೆಳ್ಸೂಲೆ ಹವ್ಯಕರು ಏನ್ಮಾಡೋ? ಈ ಪ್ರಶ್ನೆಗೆ ಹವಿಗನ್ನಡದ್ದಲ್ಲಿ ಚಿಕ್ಕ –ಚೊಕ್ಕ ಉತ್ತರ ಬರ್ದು ಹವ್ಯಕ ಅಧ್ಯಯನ ಕೇಂದ್ರಕ್ಕೆ ಕಳ್ಸಿ. ಉತ್ತಮ ಬರಹಕ್ಕೆ ಸೂಕ್ತ ಪುರಸ್ಕಾರ ಇದ್ದು'' ಹೇಳಿ

''ಹವ್ಯಕ ಅಧ್ಯಯನ ಕೇಂದ್ರ''ದಿಂದ ಪ್ರಕಟಣೆ ಕೊಟ್ಟಾಗಿತ್ತು. ಪತ್ರಿಕೆಯ ಜಾಗ್ರತ ಓದುಗರಲ್ಲಿ 7 ಜನ ತಮ್ಮ ಅಭಿಪ್ರಾಯ ಕಳ್ಸಿದ್ದೊ.

ಹವಿಗನ್ನಡ ಲೇಖಕರ ಅಭಿಪ್ರಾಯ : ಬರೆಯುಲೆ ಪ್ರತಿಯೊಬ್ಬ ಲೇಖಕಂಗೂ ಒಂದೊಂದ್ರೀತಿಲಿ ಪ್ರೇರಣೆ ಅಪ್ಪದು ಸಹಜ. ಆದ್ರೆ ತಾಯ್ನುಡಿಲಿ ಬರೆಯುಲೆ ಪ್ರೇರಣೆ ಎಂತಕೆ, ಹೇಗೆ ಬಂತು ಹೇಳೂದು ಬಹಾಳ ಮುಖ್ಯ ಆಗ್ತು. ಹವಿಗನ್ನಡ್ದಲ್ಲಿ ಈ ಹಿಂದೆ ಬರೆದ ಲೇಖಕರಲ್ಲಿ ಕೆಲವು ಜನ ಈಗ ಬರೆತಾ ಇಲ್ಲೆ. ಬಿಟ್ಟಿಕಿದೊ. ಅದ್ಕೂ ಒಂದು ಕಾರಣ ಇದ್ದಲ್ಲದಾ? ತಾಯ್ನುಡಿಯಾದ ಹವಿಗನ್ನಡ ಉಳ್ಸಿ ಬೆಳ್ಸೂಲೆ ಹವ್ಯಕರು ಏನ್ಮಾಡೋ ಹೇಳೂದಂತು ಅತ್ಯಂತ ಮಹತ್ವದ ಪ್ರಶ್ನೆಯಾಗ್ತು. ಈ ವಿಷ್ಯದಲ್ಲೆಲ್ಲಾ ಹವಿಗನ್ನಡ ಗ್ರಂಥಕಾರರು ಏನು ಹೇಳ್ತೊ ಹೇಳಿ ಅವ್ರಿಂದ್ಲೇ ತಿಳ್ಕಳೋ ಹೇಳ್ವಂತ ಆಶೆ ತುಂಬಾ ದಿನದಿಂದ ಇದ್ದಿತ್ತು.

1. ನಾ ಎಂತಕೆ ಹವಿಗನ್ನಡ್ದಲ್ಲಿ ಬರ್ದೆ. ಬರೀತಾ ಇದ್ದೆ. ಬಿಟ್ರೆ ಯಾಕ್ಬಿಟ್ಟೆ?
2. ಹವಿಗನ್ನಡ ಉಳ್ಸಿ ಬೆಳ್ಸೋಲೆ ಹವ್ಯಕರು ಏನ್ಮಾಡೊ?

ಈ ಪ್ರಶ್ನೆಗಳ್ನ ಇಟ್ಟು ಎಲ್ಲಾ ಹವಿಗನ್ನಡ ಗ್ರಂಥಕಾರರಿಗೂ ಪತ್ರ ಹಾಕ್ದೆ. ಹವಿಗನ್ನಡ್ದಲ್ಲೇ ಉತ್ತರ ಕೊಡಿ ಹೇಳಿ ವಿನಂತಿನೂ ಮಾಡ್ಕಂಡೆ. ಕೆಲವ್ರು ಕೂಡ್ಲೆ ಉತ್ತರ ಕೊಟ್ಟೊ. ಉಳಿದವ್ರನ್ನ ತಿರುಗಿ ಸಂಪರ್ಕ ಮಾಡಕಾತು.

ಹವ್ಯಕ ಪತ್ರಿಕೆ ಪ್ರಕಟಣೆಗೆ ಬಂದ ಪ್ರತಿಕ್ರಿಯೆ ಮತ್ತೆ ಗ್ರಂಥಕರ್ತರಿಂದ ಬಂದ ಉತ್ತರ ಎಲ್ಲಾ ಓದ್ತಾ ಹೋದಾಂಗೆ ಇದನ್ನೆಲ್ಲಾ ಹವ್ಯಕ ಸಮಾಜದ ಗಮನಕ್ಕೆ ತರ್ಲೇಬೇಕು ಹೇಳಿ ಅನಿಸ್ತು. ಅವ್ರವ್ರ ಅಭಿಪ್ರಾಯಗಳ್ನ ಅವ್ರವ್ರ ಹವಿಗನ್ನಡ್ದಲ್ಲೇ ಇಡೊ. ಇದೂ ಒಂದ್ರೀತಿಲಿ ಡಿಫರಂಟಾಗಿರ್ತು. ಬೇರ್ಬೇರೆ ನಮೂನಿ ಅಭಿಪ್ರಾಯದ ಜೊತೆಗೆ ಆಯಾ ಭಾಗದ ಹವಿಗನ್ನಡದ ಸವಿನೂ ಒಂದೇ ಕಡೆಗೆ ಸಿಕ್ತು. ಅದ್ರಿಂದ ನುಡಿ ಬಾಂಧವ್ಯಕ್ಕೂ ಸಹಾಯ ಆಗ್ತು. ನುಡಿ ಸಂಗಮ ಆಗ್ತು. ಇದೆಲ್ಲಾ ಈ ಸಂಕಲನದ ಹಿಂದಿದ್ದ ಆಶಯವೂ ಹೌದು. ಪ್ರೇರಣೆಯೂ ಹೌದು. ಅಭಿಪ್ರಾಯ ಮತ್ತೆ ಉತ್ತರ ಕಳ್ಸಿ ಕೊಟ್ಟವರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸ್ತೆ.

ಅಭಿಪ್ರಾಯಗಳು : ಅಬ್ಬೆ ಮಾತು, ತಾಯ್ನುಡಿ ಮೇಲಿನ ಪ್ರೀತಿ, ಅಭಿಮಾನವೇ ಹವಿಗನ್ನಡದ್ದಲ್ಲಿ ಬರೆಯುಲೆ ತಮ್ಗೆ ಪ್ರೇರಣೆ ನೀಡಿದ್ದು ಹೇಳೂದು ಹೆಚ್ಚಿನವರ ಅಭಿಪ್ರಾಯ. ಹವಿಗನ್ನಡಕ್ಕೆ ಹಳ್ಳಿಲಿ ಭದ್ರ ನೆಲೆ ಇದ್ದು. ನಗರಕ್ಕೆ ಬಂದೊರು ತಾಯ್ನುಡಿ ಅಲಕ್ಷ ಮಾಡತ್ತಿದ್ದೊ. ನಗರವಾಸಿಗಳು ತಮ್ಮ ಮನೆಲಿ ತಾಯ್ನುಡಿಲಿ ಮಾತಾಡೊ. ಮಕ್ಕೊಗೆ ಕಲಿಸೊ. ಪರಸ್ಪರ ಭೆಟ್ಟಿಯಾದಾಗ ತಾಯ್ನುಡಿಲೆ ಮಾತಾಡೊ. ಪರಭಾಷೆ ಮಾತಾಡ್ವೋರ ಗುಂಪಿನಲ್ಲಿ ಹವ್ಯಕರು ಪರಸ್ಪರ ಭೆಟ್ಟಿಯಾದ್ರೆ ಅವು ತಮ್ಮತಮ್ಮೊಳಗೆ ಹವಿಗನ್ನಡದ್ದಲ್ಲಿ ಮಾತಾಡುಲೆ ನಾಚಿಕೆ ಪಡುಲಾಗ. ಹವ್ಯಕರ ಸಭೆ, ಸಮಾರಂಭಗಳಲ್ಲಿ ವೇದಿಕೆ ಮೇಲೂ ತಾಯ್ನುಡಿ ಬಳಕೆ ಮಾಡೊ. ಹವ್ಯಕ ಸಂಘ, ಸಂಸ್ಥೆಲೂ ಇದೇ ಪದ್ಧತಿ ಇರೊ. ಹವ್ಯಕ ಸಮ್ಮೇಲನ, ಹವ್ಯಕ ಸಾಹಿತ್ಯ ಸಮ್ಮೇಲನ, ಇಂಥಲ್ಲೂ ವೇದಿಕೆ ಮೇಲೆ ತಾಯ್ನುಡಿ ಬಳಕೆ ಆಗೊ. ಇಲ್ಲೆಲ್ಲಾ ಬೇರ್ಬೇರೆ ಪ್ರಾಂತದ ಹವ್ಯಕರು ಸೇರ್ತಾಗ ಅದು ಹವಿಗನ್ನಡ ಸಂಗಮವೂ ಆಗಿರ್ತು, ಆಡುನುಡಿಲಿ ಇದ್ದ ಭೇದ ತೊಂದ್ರೆ ಹೇಳಿ ತಿಳ್ಕಂಬ್ಲಾಗ. ಅದನ್ನ ಧನಾತ್ಮಕವಾಗಿ ಉಪಯೋಗ್ಸೊ. ಹವ್ಯಕ ಮಹಾಸಭೆಲಿ ಎಲ್ಲಾ ಭಾಗದ ಹವ್ಯಕ್ರು ಇರ್ತೊ, ಅದು ಹವಿಗನ್ನಡದ ಸಂಗಮ, ಸಾಮರಸ್ಯದ ವೇದಿಕೆ ಆಗೊ. ಇಂಥಾ ಭೇದ ಕೊಂಕಣಿ, ತುಳು, ಮರಾಠಿ ಇವ್ರಲ್ಲೂ ಇದ್ದು. ಆದ್ರೂ ಅವು ಪರಸ್ಪರ ಭೆಟ್ಟಿಯಾದಾಗ, ಸಭೆ, ಸಮ್ಮೇಲನದಲ್ಲಿ ತಮ್ಮತಮ್ಮ ನುಡಿಲೇ ಮಾತಾಡ್ತೊ, ಹಾಂಗೆ ಮಾತಾಡುಲೆ ಅವು ಖುಶಿ ಪಡ್ತೊ, ಹೆಮ್ಮೆ ಪಡ್ತೊ, ಅವ್ರ ಗುರುಮಠದಲ್ಲೂ ಹೀಂಗೆ ಇದ್ದು. ಗುರುಗಳು ಆಶೀರ್ವಾದಾನೂ ಅದೇ ನುಡೀಲೆ ಮಾಡ್ತೊ, ಇದೆಲ್ಲಾ ನಮ್ಮ ಕಣ್ಣ ತೆರೆಸೊ. ಮಾದರಿಯಾಗೊ. ಹವಿಗನ್ನಡದ್ದಲ್ಲಿ ಚರ್ಚಾಕೂಟ, ಭಾಷಣ, ನಿಬಂಧ ಇತ್ಯಾದಿ ಸ್ಪರ್ಧೆ ಆಗ್ತಾ ಇರೊ. ಹವ್ಯಕ ಮಹಾಸಭೆ, ಹವ್ಯಕ ಪತ್ರಿಕೆ ಇವೆರಡೂ ನುಡಿರಕ್ಷಣೆ, ಪೋಷಣೆ ಬಗ್ಗೆ ಈವರೆಗೆ ಹೇಳ್ಕಂಬಂತ ಕೆಲ್ಸ ಮಾಡಿದ್ದು ಕಾಣ್ತಿಲ್ಲೆ. ನುಡಿ ಇದ್ದರೆ ಸಂಸ್ಕೃತಿ ಇರ್ತು, ಸಂಸ್ಕೃತಿ ರಕ್ಷಣೆ ಜವಾಬ್ದಾರಿ ಸಮಾಜ ಸಭೆ ಮತ್ತೆ ಮಠಗಳದ್ದು. ಸಂಸ್ಕೃತಿ ಉಳಿಯಕಾರೆ ನುಡಿರಕ್ಷಣೆಗೆ ಮುಂದಾಗ್ಲೇ ಬೇಕು ಇತ್ಯಾದಿ ಅಭಿಪ್ರಾಯ ಹಲವರಿಂದ ಬಂಜು. ವೈಯಕ್ತಿಕ ಅಭಿಪ್ರಾಯಗಳ್ನ ಯಥಾವತ್ ಅವರವ್ರದೇ ನುಡಿಲಿ ಮುಂದಿನ

ಪುಟಗಳಲ್ಲಿ ನೀಡಿದ್ದೆ. ಪ್ರಜ್ಞಾವಂತ ಹವ್ಯಕ ಬಂಧುಗಳು ದಯವಾಡಿ ಅವನ್ನೆಲ್ಲಾ ಗಮನಿಸೊ.

ರಜತ ಸೂತ್ರಗಳು

ಹವಿಗನ್ನಡ ಉಳ್ಸಿ ಬೆಳ್ಸೂಲೆ ಹವ್ಯಕರು ಏನ್ಮಾಡೋ ಅನ್ನೋದ್ರ ಬಗ್ಗೆ ಹವ್ಯಕ ಪತ್ರಿಕೆ ಪ್ರಜ್ಞಾವಂತ ಓದುಗರು, ಹವಿಗನ್ನಡ ಗ್ರಂಥಕಾರರು ನೀಡಿದ ಅಭಿಪ್ರಾಯದ ಜೊತೆಗೆ ಕೆಲವು ಸ್ವಂತದ ಅಭಿಪ್ರಾಯನೂ ಸೇರಸ್ಕಂಡು ಹವ್ಯಕ ಬಂಧುಗಳ ಮುಂದೆ ಇಡ್ತೆ

1. ಹವಿಗನ್ನಡಕ್ಕೆ ಗ್ರಾಮೀಣ ಭಾಗ್ದಲ್ಲಿ ಇದ್ದ ಭದ್ರ ನೆಲೆ ಸಡಿಲಪ್ಲೆ ಬಿಡುಲಾಗ. ನಗರವಾಸಿ ಹವ್ಯಕರು ಊರಿಗೆ ಬಂದಾಗ ತಪ್ದೇ ತಾಯ್ನುಡಿಲೇ ಮಾತಾಡೊ. ಪೇಟೆ (ಗ್ರಾಂಥಿಕ)ಭಾಷೆಲಿ ಮಾತಾಡೂದು ಪ್ಯಾಶನ್ ಹೇಳಿ ತಿಳ್ಕಂಬ್ಲಾಗ.
2. ನಗರವಾಸಿ ಹವ್ಯಕರು ತಂವ್ತುವ್ಮ ಮನೇಲಿ ತಾಯ್ನುಡಿಲೇ ಮಾತಾಡೊ. ಅಬ್ಬೆಹಾಲು ಕುಡಿಸೋದ್ರ ಜೊತೆಗೆ ಮಕ್ಕೊಗೆ ತಾಯ್ನುಡಿನೂ ಕಲಿಸೊ. ಸಣ್ಣ ವಯಸ್ಸಿನ ಮಕ್ಕೊ ಬೇಗ ಕಲ್ತಕತ್ತೊ.
3. ನಗರವಾಸಿ ಹವ್ಯಕರು ತಂವ್ತುವ್ಮ ವುನೇಲಿ, ಪೇಟೇಲಿ, ಪರಸ್ಪರ ಭೆಟ್ಟಿಯಾದಾಗ, ಹತ್ತಾರು ಜನ ಪರಭಾಷಿಕರ ವುಧ್ಯೆ ಪರಸ್ಪರ ಭೆಟ್ಟಿಯಾದಾಗ ಇಬ್ಬರೂ ಹವ್ಯಕರೇ ಹೇಳಿ ಗೊತ್ತಾದ್ಮೇಲೆ ಮುಜುಗರ ಪಟ್ಕಳದೇ ತಾಯ್ನುಡಿಲೇ ಮಾತಾಡೊ.
4. ಈ ಕೆಳಗಿನ ಸಂದರ್ಭಗಳಲ್ಲಿ ಹವಿಗನ್ನಡದ ಬಳಕೆ ಮಾಡೊ.
   1) ಪರಸ್ಪರ ಪತ್ರ ವ್ಯವಹಾರ್ದಲ್ಲಿ(ಈಗಿತ್ಲಾಗಿ ಪತ್ರ ಬರೆಯುದೆ ಕಡ್ಮೆ ಆಜು).
   2) ಆಮಂತ್ರಣ, ಶುಭಾಶಯ, ಅಭಿನಂದನ ಪತ್ರಿಕೆಗಳಲ್ಲಿ
   3) ಹವ್ಯಕರೇ ಹೆಚ್ಚಾಗಿ ಸೇರಿದ ಸಭೆ, ಸಮಾರಂಭಗಳಲ್ಲಿ
   4) ಸ್ಥಳೀಯ ಹವ್ಯಕ ಸಂಘಗಳು ತಮ್ಮ ಸಭೆಲಿ ನಡೆಯೊ ಚರ್ಚೆಲಿ, ವಾರ್ಷಿಕ ಯಾ ವಿಶೇಷ ಸಮಾರಂಭ ವೇದಿಕೆಲಿ.

5) ಶ್ರೀ ಅಖಿಲ ಹವ್ಯಕ ಮಹಾಸಭೆ ತನ್ನ ಪ್ರತಿ ತಿಂಗಳ ವಿಶೇಷ, ವಾರ್ಷಿಕ ಸಭೆಗಳಲ್ಲಿ, ಸಮಾರಂಭ, ವಿಶೇಷ ಕಾರ್ಯಕ್ರಮದ ವೇದಿಕೆಗಳಲ್ಲಿ,
6) ಹವ್ಯಕರ ಮನೇಲಿ ನಡೆಯೊ ವೈದಿಕ ಕಾರ್ಯಕ್ರಮದಲ್ಲಿ ಪುರೋಹಿತರು ಆಶೀರ್ವಾದ ಮಾಡ್ವಾಗ.
7) ಹವ್ಯಕ ಮಠಾಧಿಪತಿಗಳು ಸಮಾವೇಶಗಳಲ್ಲಿ ಆಶೀರ್ವಚನ ನೀಡ್ವಾಗ.
8) ಇನ್ನಿತರ ಸೂಕ್ತಸಮಯ, ಸಂದರ್ಭಗಳಲ್ಲಿ,

5. ಹವಿಗನ್ನಡ ಪುಸ್ತಕಗಳನ್ನ ಈ ಕೆಳಗಿನ ಸಂದರ್ಭಗಳಲ್ಲಿ ಉಪಯೋಗ ಮಾಡೊ.

1) ಹವ್ಯಕರ ಮನೆಗಳಲ್ಲಿ ನಡೆಯೊ ಗೃಹಪ್ರವೇಶ, ಮುಂಜಿ, ಮದುವೆ, ಹುಟ್ಟುಹಬ್ಬ ಅಥವಾ ಇನ್ಯಾವ್ದೇ ಸೂಕ್ತ ಶುಭ ಸಂದರ್ಭಗಳಲ್ಲಿ ನೆನಪಿನ ಕಾಣಿಕೆ, ಉಡುಗೊರೆಯಾಗಿ.
2) ಸ್ಥಳೀಯ ಹವ್ಯಕ ಸಂಘ – ಸಂಸ್ಥೆ, ಹವ್ಯಕ ಪರಿಷತ್ತು ಶ್ರೀ ಅಖಿಲ ಹವ್ಯಕ ಮಹಾಸಭೆಗಳಲ್ಲಿ ನಡೆಯೊ ಪ್ರತಿಭಾ ಪುರಸ್ಕಾರ, ಸಮ್ಮಾನ ಅಥವಾ ಇನ್ಯಾವ್ದೇ ವಾರ್ಷಿಕ ಯಾ ವಿಶೇಷ ಸಮಾರಂಭಗಳಲ್ಲಿ ನೀಡುವ ಪ್ರೋತ್ಸಾಹ ಅಥವಾ ಸ್ಮರಣಿಕೆ ರೂಪದಲ್ಲಿ,

ಟಿಪ್ಪಣಿ : ಉಕ್ತ ಸಂದರ್ಭಗಳಲ್ಲಿ ಹವಿಗನ್ನಡ ಕೃತಿಗಳು ಸಿಗ್ದೇ ಇದ್ದರೆ ಕನಿಷ್ಠ ಪಕ್ಷ ಹವ್ಯಕ ಲೇಖಕರ ಕೃತಿಗಳನ್ನಾದ್ರೂ ಉಪಯೋಗ್ಸಿ ಹವ್ಯಕ ಲೇಖಕರನ್ನು ಪ್ರೋತ್ಸಾಹಿಸೊ.

6. ಉದಯೋನ್ಮುಖ ಹವಿಗನ್ನಡ ಬರಹಗಾರರಿಗೆ ಪ್ರೋತ್ಸಾಹ ಕೊಡೋ ಸಲುವಾಗಿ ಸ್ಥಳೀಯ ಹವ್ಯಕ ಸಂಘ – ಸಂಸ್ಥೆ, ಹವ್ಯಕ ಪರಿಷತ್ತು ಶ್ರೀ ಅಖಿಲ ಹವ್ಯಕ ಮಹಾಸಭೆಗಳಲ್ಲಿ ಕನಿಷ್ಠ ವರ್ಷಕ್ಕೊಮ್ಮೆಯಾದ್ರೂ ಹವಿಗನ್ನಡ ಭಾಷಣ, ನಿಬಂಧ, ಚರ್ಚಾಕೂಟ, ಕತೆ, ಕವನ, ಚುಟುಕು ಇತ್ಯಾದಿ ಸ್ಪರ್ಧೆ ಏರ್ಪಡ್ಸಿ ವಿಜೇತರಿಗೆ ಹವಿಗನ್ನಡ ಪುಸ್ತಕಗಳನ್ನೇ ನೀಡೊ. ಪುರಸ್ಕೃತ ಲೇಖನಂಗಳ ಸಂಕಲನ ಪ್ರಕಟ ಮಾಡೊ ವ್ಯವಸ್ಥೆ ಆಗೊ.

7. ಹವ್ಯಕ ಸಮಾಜ, ಮಹಾಸಭೆ, ಮಠ ಇವೆಲ್ಲಾ ಖ್ಯಾತ ಹವಿಗನ್ನಡ ಸಾಹಿತಿಗಳ್ನ, ನುಡಿ ಸೇವಕರನ್ನ, ಹವಿಗನ್ನಡ ಕೃತಿಗಳನ್ನ ಗುರುತ್ಸಿ ಗೌರವಿಸೊ. ಅತ್ಯುತ್ತಮ ಕೃತಿಗಳಿಗೆ ಪ್ರಶಸ್ತಿ ನೀಡೊ.

8. ನುಡಿ ಸಂಸ್ಕೃತಿ (ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಕರ ಪಡೆನುಡಿಗಳ ಕೋಶ) ಬಂದ್ದಾಂಗೆ ಇತರೆ ಹವಿಗನ್ನಡ ಪ್ರದೇಶದ ಪಡೆನುಡಿಗಳ ಸಂಗ್ರಹ ಆಗೊ.

9. ಹವಿಗನ್ನಡ್ದ ಬಗ್ಗೆ ಈವರೆಗೆ ಆದ ಅಧ್ಯಯನ, ಪಿ.ಹೆಚ್.ಡಿ. ಕೃತಿಗಳ ಪ್ರಕಟಣೆ ಆಗೊ. ಇಂಥ ಅಧ್ಯಯನ ಆಗ್ದೇ ಇದ್ದ ಭಾಗ್ದಲ್ಲಿ ಅಧ್ಯಯನ ಮಾಡ್ರೋರಿಗೆ ಪ್ರೋತ್ಸಾಹ ಕೊಡೊ.

10. ಪಂಪ ಮುಂತಾದವರ ಹಳೆಗನ್ನಡ ಕಾವ್ಯಗಳಲ್ಲಿದ್ದು ಹವ್ಯಕರ ಬಳಕೆಲಿದ್ದ ಶಬ್ದಂಗಳ ಹುಡುಕಿ ತೆಗೆಯೊ. ಅಂತಹ ಪದಗಳ ಸಂಗ್ರಹ ತಯಾರಾಗೊ.

11. ಎಷ್ಟ್ರೋ ಹವಿಗನ್ನಡ ಶಬ್ದಗಳೇ ಮರೆಯಾಗಿ ಹೊಗ್ತಿದ್ದೊ. ಈಗಿರುವ ಹಿರಿಯೋರ ನಂತರ ಇನ್ನೂ ಎಷ್ಟ್ರೋ ಶಬ್ದ ಅವ್ರ ಸಂಗ್ತಿಗೇ ಹೋಗ್ತು. ಆದಷ್ಟು ಬೇಗ ಅಂತಹ ಶಬ್ದಗಳ್ನ ಅರ್ಥ ಮತ್ತೆ ಪ್ರಯೋಗ ಸಹಿತ ಸಂಗ್ರಹ ಮಾಡೊ. ಅವನ್ನೆಲ್ಲಾ ಅಧ್ಯಯನ, ಪರಿಷ್ಕಾರ ಮಾಡಿ ಸಮಗ್ರ ಹವಿಗನ್ನಡ ಪದಕೋಶ ತಯಾರಾಗೊ.

12. ಹವಿಗನ್ನಡ ವ್ಯಾಕರಣ ಇನ್ನೂ ತಯಾರಾಜಿಲ್ಲೆ. ಎಲ್ಲಾ ಭಾಗದ ಹವಿಗನ್ನಡ ಭಾಷಾ ಪಂಡಿತ್ರು ಸೇರ್ಕಂಡು ಇಂಥಾ ಒಂದು ವ್ಯಾಕರಣ ರಚನೆ ಮಾಡೊ ವ್ಯವಸ್ಥೆ ಆಗೊ.

13. ಹವಿಗನ್ನಡ ಪುಸ್ತಕ ಪ್ರಕಟಣೆ, ಪ್ರದರ್ಶನ ಮಾರಾಟ ಮಾಡುಲೆ ಒಂದು ಸೂಕ್ತ ವ್ಯವಸ್ಥೆ ಆಗೊ.

14. ಸ್ಥಳೀಯ ಹವ್ಯಕ ಸಂಘಗಳ ಪತ್ರಿಕೆಗಳಲ್ಲಿ ಹವಿಗನ್ನಡಕ್ಕೆ ಸೂಕ್ತಸ್ಥಾನ ಕೊಡೊ. ಅದಕ್ಕಿಂತ ಹೆಚ್ಚಾಗಿ 'ಹವ್ಯಕ' ಪತ್ರಿಕೆ ಹವಿಗನ್ನಡಕ್ಕೆ ಕನಿಷ್ಠ ನಾಲ್ಕು ಪುಟ ಮೀಸಲಿಡೊ. ಅದರಲ್ಲಿ ಎಲ್ಲಾ ಪ್ರದೇಶದ ಹವಿಗನ್ನಡಕ್ಕೂ ಸೂಕ್ತ ಸ್ಥಾನ ನೀಡೊ.

15. ಹವ್ಯಕ ಸಮಾಜಕ್ಕೆ ತನ್ನ ತಾಯ್ನುಡಿಗೆ ಮೀಸಲಾದ ಒಂದು ಪತ್ರಿಕೆ ನಡೆಸೋ ಧಾರಣಾಶಕ್ತಿ ಇದ್ದು. ಅದು ಕಾರ್ಯರೂಪಕ್ಕೆ ಬರ್‍ಲಿ.

16. ಶ್ರೀ ಅಖಿಲ ಹವ್ಯಕ ಮಹಾಸಭೆ ಈವರೆಗೆ ನಡೆಸಿದ ಮಹಾಸಮ್ಮೇಲನ, ವಿಶ್ವ ಹವ್ಯಕ ಸಮ್ಮೇಲನ ಇತ್ತೀಚೆಗೆ (2002ರಲ್ಲಿ) ನಡೆಸಿದ ಹವ್ಯಕ ಸಾಹಿತ್ಯ ಸಮ್ಮೇಲನ ಇತ್ಯಾದಿಗಳಲ್ಲಿ ತಾಯ್ನುಡಿಗೆ, ತಾಯ್ನುಡಿ ಸಾಹಿತ್ಯಕ್ಕೆ ಸ್ಥಾನ ಸಿಕ್ಕಿದ್ದಿಲ್ಲೆ. ಈ ಪದ್ಧತಿ ಮುಂದುವರೆಯುಲಾಗ. ಮುಂದೆ ನಡೆಸೊ ಸಮ್ಮೇಲನಗಳಲ್ಲಿ ಹವಿಗನ್ನಡ ಮುಖ್ಯವಾಗ್ಲಿ.

17. ಹವಿಗನ್ನಡ ಕೃತಿಗಳ ಬಗ್ಗೆ ಸಂವಾದ, ವಿಚಾರ ಸಂಕಿರಣ ಆಗೊ. ಪ್ರಬಂಧ ರಚನೆ ಪತ್ರಕಾಮೇಷ್ಪಿ ನಡೆಸೊ. ಬೇರೆ ವೇದಿಕೆಗಳು ಹವಿಗನ್ನಡ ಕೃತಿಗಳ ಬಗ್ಗೆ ಹಮ್ಮಿಕೊಂಡ ಇಂಥ ಚಟುವಟಿಕೆಗಳಿಗೆ ಸೂಕ್ತ ಪ್ರೋತ್ಸಾಹ ನೀಡೊ.

18. ಹವಿಗನ್ನಡ ನಾಟಕ, ಯಕ್ಷಗಾನಗಳ ರಂಗಪ್ರಯೋಗ ವ್ಯವಸ್ಥೆ ಮಾಡೊ. ಅಂಥಾ ಪ್ರಯೋಗ ನಡೆಸ್ಸೋರನ್ನ ಪ್ರೋತ್ಸಾಹಿಸೊ. ಹವಿಗನ್ನಡ ಗೀತಗಾಯನ ಸ್ಪರ್ಧೆ ಏರ್ಪಡಿಸೊ. ವಿಜೇತರಿಗೆ ಪುರಸ್ಕಾರ ನೀಡೊ. ಹವ್ಯಕರ ಸಭೆ ಸಮಾರಂಭಗಳಲ್ಲಿ ಹವಿಗನ್ನಡ ಗೀತೆಗಳಿಗೆ ಸೂಕ್ತ ಸ್ಥಾನ ಕೊಡೊ.

19. ಆಗಾಗ ಹವಿಗನ್ನಡ ಸಾಹಿತ್ಯ ಸಮ್ಮೇಲನ ನಡೆಸೊ (ಕನಿಷ್ಠ 5 ವರ್ಷಕ್ಕೊಮ್ಮೆ) ಅದ್ರಿಂದ ಹವಿಗನ್ನಡದ್ದಲ್ಲಿ ಭಾಷಾ ಸಾಮರಸ್ಯ ಆಗ್ತು

20. ಹವಿಗನ್ನಡದ ಅಭಿವೃದ್ಧಿಗಾಗಿ ಸಲಹೆ ನೀಡುಲೆ ಹವಿಗನ್ನಡ ಸಾಹಿತಿಗಳು, ಬರಹಗಾರರು, ಪ್ರಕಾಶಕರು, ಅಭಿಮಾನಿಗಳು, ನುಡಿ ಪರಿಚಾರಕರು, ಹೃದಯವಂತ ಚಿಂತಕರು, ಇಂಥವರ ಪ್ರಾತಿನಿಧ್ಯ ಇದ್ದ ಒಂದು ಸಲಹಾ ಸಮಿತಿ/ಚಿಂತಕರ ಚಾವಡಿ ಅಸ್ತಿತ್ವಕ್ಕೆ ಬರೊ.

21. ಪ್ರತಿಭಾನ್ವಿತರಾಗಿದ್ದರೂ ಆರ್ಥಿಕವಾಗಿ ದುರ್ಬಲರಾಗಿದ್ದ ಹವಿಗನ್ನಡ ಲೇಖಕರ ಉತ್ತಮ ಹವಿಗನ್ನಡ ಕೃತಿಗಳ ಪ್ರಕಟಣೆಗೆ ಸೂಕ್ತ ವ್ಯವಸ್ಥೆ ಆಗೊ.

22. ಹೃದಯವಂತ ಹಣವಂತ ಹವ್ಯಕರು ತಮ್ಮ ಕುಟುಂಬದ ಮದುವೆ, ಮುಂಜಿ, ಗೃಹಪ್ರವೇಶ ಮುಂತಾದ ದೊಡ್ಡ ಸಮಾರಂಬ್ದಲ್ಲಿ ಉತ್ತಮ ಹವಿಗನ್ನಡ ಕೃತಿಗಳ ಪ್ರಕಟಣೆ, ಲೋಕಾರ್ಪಣೆಗೆ ಮುಂದಾಗೊ.

23. ಹವಿಗನ್ನಡದ ಸರ್ವಾಂಗೀಣ ಅಭಿವೃದ್ಧಿಗಾಗಿ ಸ್ಥಾಪನೆಯಾದ 'ಹವಿಗನ್ನಡ ಪ್ರತಿಷ್ಠಾನ'ದ ಚಟುವಟಿಕೆಗಳಿಗೆ ಸಾಕಷ್ಟು ಧನಸಹಾಯ ಸಿಗೊ.

24. ಹವ್ಯಕರು ತಮ್ಮ ಕುಟುಂಬ್ದಲ್ಲಿ ನಡೆಸೊ ಶುಭಕಾರ್ಯಗಳಲ್ಲಿ, ಅದ್ದೂರಿಯ ಸಮಾರಂಭಗಳಲ್ಲಿ ಮಾಡೊ ಖರ್ಚಿನಲ್ಲಿ ನೂರಕ್ಕೆ ಒಂದ್ರುಪಾಯಿ ಅಷ್ಟಾದರೂ ತಾಯ್ನುಡಿ ಸೇವೆಗಾಗಿ ಇದ್ದ 'ಹವಿಗನ್ನಡ ಪ್ರತಿಷ್ಠಾನ'ಕ್ಕೆ ಮಂಗಲಕಾರ್ಯ ದೇಣಿಗೆ ರೂಪ್ದಲ್ಲಿ ನೀಡೋ ಪದ್ದತಿ ಕಾರ್ಯರೂಪಕ್ಕೆ ತರೊ.

25. ವರ್ತಮಾನ ಕಾಲದ ಪ್ರಬಲ ಸಂವಹನ ಮಾಧ್ಯಮಗಳಾದ ಪತ್ರಿಕೆ, ಆಕಾಶವಾಣಿ, ದೂರದರ್ಶನ, ಧಾರಾವಾಹಿ, ಸಿನೆಮಾ ಇತ್ಯಾದಿಗಳಲ್ಲಿ ಹವಿಗನ್ನಡದ ಬಳಕೆ ಅಪ್ಪಲೆ ಪ್ರಯತ್ನ ಮಾಡೊ.

ಹವ್ಯಕ ಸಮಾಜ ತನ್ನ ಸಾಮಾಜಿಕ ಜವಾಬ್ದಾರಿ ಅರ್ತ್ಕಳೊ. ತಾಯ್ನುಡಿ ರಕ್ಷಣೆ ಅದರಲ್ಲಿ ಒಂದು ಮಹತ್ವದ ಜವಾಬ್ದಾರಿ. ನುಡಿರಕ್ಷಣೆಯಿಂದ ಸಂಸ್ಕೃತಿ ರಕ್ಷಣೆ. ಹವ್ಯಕರಾದ ನಾವು ನಮ್ಮ ತಾಯ್ನುಡಿಯಾದ ಹವಿಗನ್ನಡದ ಬಗ್ಗೆ ಇದ್ದ ಜವಾಬ್ದಾರಿ ಅರ್ತ್ಕಂಡು ರಚನಾತ್ಮಕ ಕೆಲಸ ಮಾಡ್ತಾ ಇದ್ರೆ ''ಹವಿಗನ್ನಡಕ್ಕೂ ಒಂದು ಅಕಾಡೆಮಿ ಬೇಕು'' ಹೇಳಿ ಒತ್ತಡ ತರ್ಲಕ್ಕು. ಬರೀ ನಿರ್ಣಯಕ್ಕೆ ಬಲ ಇರ್ತಿಲ್ಲೆ.

ಶತಮಾನದ ಬೆಳವಣಿಗೆ

ಕಳೆದ ಒಂದು ಶತಮಾನ್ದಲ್ಲಿ ಶಿಕ್ಷಣದಲ್ಲಿ ಹವ್ಯಕರು ಬಹಳ ಮುಂದೆ ಬಂಜೊ. ಬಹುಶಃ ಇಂದು ಅಶಿಕ್ಷಿತ ಹವ್ಯಕರೇ ಇಲ್ಲೆ. ಶಿಕ್ಷಣ ಪಡ್ದೋರಲ್ಲಿ ಹೆಚ್ಚನಂಶ ಜೀವನೋಪಾಯಕ್ಕಾಗಿ ವಲಸೆ ಹೋಜೋ. ನಗರ ಪ್ರದೇಶಕ್ಕೆ ವಲಸೆ ಹೋದ ಎಲ್ಲಾ ಹವ್ಯಕರ ತಾಯ್ನುಡಿ ಮೇಲೂ ಸ್ಥಳೀಯ ನುಡಿ ಪ್ರಭಾವ ಆಜು. ಈ ವಲಸಿಗರಲ್ಲಿ ಹೆಚ್ಚಿನವಕ್ಕೆ ಹವಿಗನ್ನಡ ಅಂದರೆ ಎಲರ್ಜಿ. ಕೆಲವರ ಮೇಲೆ ಇದರ ಪ್ರಭಾವ ಎಷ್ಟಾಜು ಅಂದ್ರೆ, ಅವ್ರ ಮನೇಲಿ ಹವಿಗನ್ನಡ ಸುಟ್ಕೆಂಡ್ರಿಂಬ್ಲೂ ಸಿಕ್ತಿಲ್ಲೆ.

ತಾಯ್ನುಡಿಲಿ ಮಾತಾಡಿಗಿದ್ದದ್ದೇ ಅವ್ಕೆ ಒಂದು ಪ್ಯಾಶನ್ನಾಗೋಜು. ಬರೇ ಗ್ರಾಂಥಿಕ ಕನ್ನಡ್ದಲ್ಲೆ ಮಾತಾಡ್ತೊ, ಈಗಿತ್ಲಾಗಂತೂ ಅದ್ಕೂ ಕೊರ್ತೆ ಟುಸ್ - ಪುಸ್ ಹೇಳಿ ಮನೆಲಿದ್ದೊರೆಲ್ಲಾ ಬರೇ ಇಂಗ್ಲೀಷಿನಲ್ಲೇ ಮಾತಾಡ್ತೊ, ಮಕ್ಳೊ ಕಾನ್ವೆಂಟಿಗೋಗ್ತಿದ್ದೊ ಅದ್ಕಾಗಿ... ಹೇಳಿ ಕಾರಣ ಕೊಡ್ತೊ, ಈ ಜನ ಊರಿಗೆ ಹೋದಾಗ್ಲೂ ಪೇಟೆ ಕನ್ನಡಾನೇ ಉದುರುಸ್ತೊ, ಇದೆಲ್ಲಾ ನಿರಭಿಮಾನದ ಪರಮಾವಧಿ. ಇದು ಒಂದು ಆಂತರಿಕ ದೌರ್ಬಲ್ಯ ಹೇಳ್ಲಕ್ಕು. ಆದ್ರೆ ಈಗಿತ್ಲಾಗಿ ಇದರಿಂದ ಊರಲ್ಲಿದ್ದ ಕೆಲವು ಅಡ್ನಾಡಿ ಜನಾನೂ ತಾಯ್ನುಡಿ ಉಪೇಕ್ಷೆ ಮಾಡೂಲೆ ಹಣ್ಕಿದ್ದೊ. ಇದು ಖಂಡಿತಾ ಒಳ್ಳೆ ಬೆಳವಣಿಗೆ ಅಲ್ಲ, ಗ್ರಾಮೀಣ ಭಾಗ್ದಲ್ಲಿ ಭದ್ರವಾಗಿದ್ದ ಹವಿಗನ್ನಡಕ್ಕೂ ಸಾವ್ಕಾಶ ಹತ್ತತಿದ್ದ ಈ ಗೆದ್ದಲು ರೋಗದ ಬಗ್ಗೆ ಸಮಾಜ ಜಾಗ್ರತ ಆಗೊ.

ದಕ್ಷಿಣೋತ್ತರ ಹವ್ಯಕ ಸೀಮೆಗಳ ಮಧ್ಯೆ ಹಿಂದಿನ ಕಾಲ್ದಲ್ಲಿ ಸಾರಿಗೆ, ಸಂಪರ್ಕದ ಅಭಾವ, ತೊಂದ್ರೆ ಇದ್ದಿತ್ತು. ಕುಮಟಾದಿಂದ ಪುತ್ತೂರಿಗೆ, ಹೊನ್ನಾವರದಿಂದ ಕಾಸರಗೋಡಿಗೆ ಹೋಪ್ಲೆ ಒಂದು ದಿನ ಸಾಕಾಗ್ತಿತ್ತಿಲ್ಲೆ. ಹಾಂಗಾಗಿ ಸಂಬಂಧ, ಬಾಂಧವ್ಯ, ಹೇಳೂದು ಅಪರೂಪಾಗಿತ್ತು. ಕಳೆದ 50 ವರ್ಷದಲ್ಲಿ ಸಾರಿಗೆ ಸಂಪರ್ಕದಲ್ಲಿ ತುಂಬಾ ಅಭಿವೃದ್ಧಿ ಆಜು. ಕೊಂಕಣ ರೈಲು, ಹೆದ್ದಾರಿಗಳಿಂದಾಗಿ ಪ್ರಯಾಣ ಸಮಯ ತುಂಬಾ ಕಡ್ಮೆ ಆಜು. ಇದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಸಾಗರ ಸೀಮೆ ಪ್ರದೇಶಕ್ಕೂ ಪ್ರಯಾಣ ಸೌಲಭ್ಯ ಜಾಸ್ತಿ ಆಜು. ಇದ್ರಿಂದಾಗಿ ಪರಸ್ಪರ ಒಡನಾಟ, ಬಳಕೆ, ಸಂಬಂಧ ಜಾಸ್ತಿ ಆಗ್ತಾ ಇದ್ದು. ನುಡಿ ಲಗ್ನ ಆಗ್ತಾ ಇದ್ದು. ಇದು ನಿಜ್ವಾಗ್ಲೂ ಸಕಾರಾತ್ಮಕ ಬೆಳವಣಿಗ್ಯೇ ಸೈ. ಪ್ರಜ್ಞಾವಂತ ಹವ್ಯಕರು ಅದ್ಕೆ ಸರಿಯಾಗಿ ಪ್ರೋತ್ಸಾಹ ನೀಡಿದ್ರೆ, ಹಳೆಗನ್ನಡ ನಡುಗನ್ನಡ ಆಗಿ ಹೊಸಗನ್ನಡಕ್ಕೆ ಬಂದ ಹಾಗೆ ಸದ್ಯೋ ಭವಿಷ್ಯತ್ತಿನಲ್ಲಿ ಹವಿಗನ್ನಡದ ಹೊಸರೂಪ ಮೈದಳೆಯುಲೆ ಸಾಧ್ಯ ಇದ್ದು. ಹಳೇ ಬೇರು ಹೊಸ ಚಿಗುರು ಮೂಡಿರಲು ಮರ ಸೊಬಗು ಅಲ್ದ? ಹವಿಗನ್ನಡದ ನವೋದಯದ ಉಷಃಕಾಲದಲ್ಲಿ ನಾವಿದ್ದೊ. ಅದ್ರ ಸ್ವಾಗತ ಮಾಡಿ ಮನೆ/ಮನ ತುಂಬಸ್ಕಂಬೊ.

ಹವಿಗನ್ನಡದ ಅಪೂರ್ವ ಸಂಗಮ ಸ್ಥಳ ಬೆಂಗಳೂರು

ಕಳೆದ ಶತಮಾನದ ಆರಂಭ್ದಲ್ಲಿ ಶಿಕ್ಷಣಕ್ಕಾಗಿ ಮೈಸೂರಿಗೆ ಬರ್ತಾ ಇದ್ದ ಹವ್ಯಕರು ಕ್ರಮೇಣ ಬೆಂಗಳೂರಿನತ್ತ ಸಾಗಿರೊ. ಅವರ ಸಂಖ್ಯೆ ಹೆಚ್ಚಾದಾಂಗೆ ಸಾಂಘಿಕ ಪ್ರಜ್ಞೆ ಬೆಳತ್ತು. 1943ರಲ್ಲಿ ಹವ್ಯಕ ಸಭೆ ಪ್ರಾರಂಭಾತು. ಈಗ ಅದು ಶ್ರೀ ಅಖಿಲ ಹವ್ಯಕ ಮಹಾಸಭೆ ಆಗಿ ಬೆಳೆದು ನಿಂತಿದ್ದು. ರಾಜ್ಯ ಪುನರ್ಘಟನೆಯಾದ ನಂತರ ಬೆಂಗಳೂರಿಗೆ ಬಪ್ಪ ಹವ್ಯಕರ ಸಂಖ್ಯೆ ಕ್ರಮೇಣ ಹೆಚ್ಚಾತು. ದಕ್ಷಿಣೋತ್ತರ ಕನ್ನಡ ಜಿಲ್ಲೆ ಸಾಗರ ಸೀಮೆ, ಕಾಸರಗೋಡು ಹೀಗೆ ತಮ್ಮ ಎಲ್ಲಾ ಮೂಲ ನೆಲೆಗಳಿಂದ್ಲೂ ಹವ್ಯಕರು ನಿರಂತರವಾಗಿ ಬೆಂಗಳೂರಿಗೆ ಬಂದು ನೆಲಸ್ತೊ. ಕಳೆದ ಒಂದು ದಶಕ್ದಲ್ಲಂತೂ ವಲಸೆ ಪ್ರಮಾಣ ತೀರ ಹೆಚ್ಚಿದ್ದು. ಇದರಿಂದ ಇಂದು ಬೆಂಗಳೂರು ಹವಿಗನ್ನಡದ ಎಲ್ಲಾ ಪ್ರಭೇದಗಳ ಅಪೂರ್ವ ಸಂಗಮಸ್ಥಾನ ಆಜು. ಇದರಿಂದ ಹವ್ಯಕರಿಗೆ ಮತ್ತೆ ತಾಯ್ನುಡಿಗೆ ದೊಡ್ಡ ಲಾಭ ಆಜು. ಬೇರ್ಬೇರೆ ಸೀಮೆ ಹವ್ಯಕರು ಒಂದೇ ಕಡೆ ಸೇರೋ ಅವ್ಕಾಶ ಇಲ್ಲಿದ್ದು. ಪರಸ್ಪರ ಒಡನಾಟ, ಸಂವಾದ, ಸಂಬಂಧ ಇದರಿಂದಾಗಿ ಎಲ್ಲಾ ಸೀಮೆ ಹವಿಗನ್ನಡ ಅರಿಯುಲೆ, ಕಲಿತ್ಕಂಬ್ಲೆ ಇಲ್ಲಿ ಅತ್ಯುತ್ತಮ ಅವಕಾಶ ಇದ್ದು. ಹವ್ಯಕ ಮಹಾಸಭೆ ತನ್ನ ಎಲ್ಲಾ ಕಾರ್ಯಕ್ರಮಗಳಲ್ಲಿ ಹವಿಗನ್ನಡಕ್ಕೆ ಪ್ರಾಧಾನ್ಯ ಕೊಟ್ಟರೆ ಈ ಸಂಗಮಸ್ಥಾನ ನೂತನ ಹವಿಗನ್ನಡ್ದ ಉದಯಕ್ಕೆ ಕಾರಣಾಗ್ತು. ಹವ್ಯಕ ಸಮಾಜ, ಮಹಾಸಭೆ ಮೇಲೆ ಈ ವಿಷ್ಯದಲ್ಲಿ ಈವರೆಗೆ ಹೆಚ್ಚಿನ ಒತ್ತಡ ಹಾಕ್ದಾಂಗೆ ಕಾಣ್ತಿಲ್ಲೆ. ತಾಯ್ನುಡಿ ಬಗ್ಗೆ ನಿಜವಾದ ಕಳಕಳಿ ಇದ್ದ ಪ್ರತಿಯೊಬ್ಬ ಪ್ರಜ್ಞಾವಂತ ಹವ್ಯಕನೂ ಇದರ ಬಗ್ಗೆ ಪ್ರಾಮಾಣಿಕ, ಗಂಭೀರ ಪ್ರಯತ್ನ ಮಾಡೊ.

ಹವ್ಯಕತನ ಉಳಿಸ್ಕಂಬೊ

ಯಾವ್ದೇ ಕೆಲ್ಸ ಆಗಕಾರೆ ಜ್ಞಾನ, ಇಚ್ಛೆ, ಕ್ರಿಯೆ ಈ ಮೂರೂ ಶಕ್ತಿಗಳ ಸಂಯೋಜನೆ ಆಗೊ ಹೇಳಿ ಬಲ್ಲೋರು ಹೇಳ್ತೊ. ಹವ್ಯಕರಿಗೆ ಸಾಕಷ್ಟು ಜ್ಞಾನಶಕ್ತಿಯಾ ಪರಮಾತ್ಮ ಕರುಣ್ಸಿದ್ದ. ಇಚ್ಛಾ ಶಕ್ತಿ ಬೆಳಸ್ಕಂಡು ಕ್ರಿಯಾತ್ಮಕವಾಗಿ ಆಚರ್ಣೆಗೆ ತಪ್ಪುದು ವ್ಯಕ್ತಿಗೆ, ಸಮಷ್ಟಿಗೆ ಸಂಬಂಧ್ಸಿದ್ದು. ಅದ್ರಲ್ಲಿ ಹವ್ಯಕರು ಹಿಂದೆ

ಬೀಳ್ತೊ ಹೇಳೊ ಅಪವಾದ ಆದಷ್ಟು ಬೇಗ ದೂರ ಮಾಡೋ ಕೆಲ್ಸ ಹವ್ಯಕರೇ ಮಾಡೊ. ಇಲ್ದೆ ಇದ್ರೆ ''ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಂ?'' ಇದಕ್ಕೆ ನಾವು ನಿದರ್ಶನ ಆಪ್ಪಾಂಗೆ ಆಗ್ತು.

ಹವ್ಯಕತನ ಹೇಳೂದು ಹವಿಗನ್ನಡ್ದಲ್ಲಿ ಮಾತ್ರ ಇದ್ದು. ಯಾಕಂದ್ರೆ ಇದು ಹವ್ಯಕರಿಗೆ ಅಂದ್ರೆ ನಮ್ಗೆ ಮಾತ್ರ ತಾಯ್ನುಡಿ. ಅದು ನಮ್ಮ ಏಕ್ಯಕ ಹೆಗ್ಗುರ್ತು. ಅದು ನಮ್ಮ ಅಂತಃಸತ್ವ. ಅದೇ ಇಲ್ದೆ ಹೋದ್ರೆ ಹವ್ಯಕತನ ಹೇಳೂದು ಹೆಸ್ರಿಗೆ ಮಾತ್ರ ಇರ್ತು. ಅಂತಃಸತ್ವ ಸತ್ತೋಗಿರ್ತು. ಹಾಂಗಪ್ಪಾಗ. ಹವ್ಯಕತನ ಉಳಿಸ್ಕಳೊ ಅಂದ್ರೆ ಹವಿಗನ್ನಡ ಉಳಿಸ್ಕಳೊ. ನಮ್ಮ ಹೆತ್ತತಾಯಿ ಹವಿಗನ್ನಡ ಹೊತ್ತತಾಯಿ ಕನ್ನಡ. ಬಾಡಿಗೆ ತಾಯಿ ಅಂಗ್ರೇಜೀ. ಮಾತೃದೇವೋಭವ. ತಾಯಿ ದೇವರು. ತಾಯ್ನುಡಿ ದೇವರ ನುಡಿ. ಅಬ್ಬೆ ನುಡಿ ಮರ್ತರೆ ದೇವರ ಮರ್ತಾಂಗೆ ಅಲ್ದ? ''ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ''. ಮಕ್ಕಳಲ್ಲಿ ಅಪ್ರೂಪಕ್ಕೆ ಕೆಲವು ಕೆಟ್ಟೋರು ಆಗ್ಲಕ್ಕು. ಆದ್ರೆ ಅಬ್ಬೆ ಯವಾಗ್ಲೂ ಒಳ್ಳೆಯವ್ಳೆಯಾ. ಅಬ್ಬೆ ನುಡಿ ಮರ್ರು ಕೆಟ್ಮಕ್ಳೊ ಹೇಳಿ ಹೇಳಸ್ಕಂಬ್ದು ಬೇಡ. ಈ ಸತ್ಯ ನಮ್ಮ ಅಂತರಂಗಕ್ಕಿಳಿಯೊ. ಕೃತಿಗೂ ಇಳಿಯೊ.

ಎಲ್ಲಾದರು ಇರು ಹೆಂಗಾದರು ಇರು
ಎಂದೆಂದಿಗು ನೀ ಹವ್ಯಕನಾಗಿರು ।
ಹವ್ಯಕ ತಾಯಿಯ ಓ ಮುದ್ದಿನ ಕರು
ಹವ್ಯಕತನವೊಂದಿದ್ದರೆ ನೀನಬ್ಬೆಗೆ ಕಲ್ಪತರು ॥

(ಕುವೆಂಪು ಕ್ಷಮೆ ಕೋರಿ)

ಅಬ್ಬೆಗೆ ಕಲ್ಪತರುವಾಗಿ ಪರಿಣಮಿಸೋ ಅವ್ಕಾಶ ಎಲ್ಲೋರಿಗೂ ಇದ್ದು. ಯವಾಗ್ಲೂ ಇದ್ದು. ಎಲ್ಲಿದ್ರೂ ಇದ್ದು. ಬಳಸ್ಕಂಬ್ದು ವ್ಯಕ್ತಿಗೆ, ಸಮಷ್ಟಿಗೆ ಸಂಬಂಧ್ಸಿದ್ದು.

॥ ಹವಿಗನ್ನಡಂ ಗೆಲ್ಗೆ ॥

ಹವಿಗನ್ನಡ ಎಂತಕ್ಕಾಗಿ ಉಳ್ಸಕಳೋ?

ಯಾವ್ದೇ ಒಳಭಾಷೆ ಮನೇಲಿ ಮಾತ್ಯಾಡ್ಕ್ಯಂಬೋದಕಷ್ಟೇ ಆಗಿರ್ತಿಲ್ಲೆ. ಭಾಷೆ ಸಂಗ್ತೀಗೇ ಒಂದು ಸಂಸ್ಕೃತಿ, ಜೀವನ ವಿಶೇಷತೆಯಿಂದ ಕೂಡ್ಕ್ಯಂಡಿರ್ತು. ಬಾಷೆ ಭಾವನಾತ್ಮಕವಾಗಿ 'ನಾವು ಒಂದು' – ಎಂಬ ಸಂಘಟನಾ ಶಕ್ತಿಯಾಗಿರ್ತು. ಭಾಷೆ ಪರಸ್ಪರ ಸ್ವಕೀಯತೆಯನ್ನು ಉಂಟ್‌ಮಾಡ್ತು. ಸಮಾಜದ ವ್ಯವಸ್ಥೆ ಎಂದಿನಿಂದಲೂ ಪ್ರತ್ಯೇಕತೆಯಲ್ಲಿ ಏಕತೆ; ಏಕತೆಯಲ್ಲಿ ಪ್ರತ್ಯೇಕತೆ ಎಂಬ ರೂಪದಲ್ಲೇ ಸ್ಥಾಪಿತ ಗೊಂಡಿರ್ತು. ಹೀಂಗೆ ಒಟ್ಟು ಸಮಾಜದೊಳಗಡೆಗೇ 'ಘಟಕ'ವಾಗಿ ಬದಕೋವಾಗ ಆ ಘಟಕ ತನ್ನ ಸ್ವಹಿತವ ಕಾಯ್ದು ಕೊಂಬಲ್ಲೆ ಎಲ್‌ರನ್ನೂ ಹತ್ರ ಮಾಡಲ್ಲೆ ಅವರ್ದೇ ಸ್ವಂತ ಒಳಭಾಷೆ ಭಾಳ ಗಟ್ಟೀ ಪಾತ್ರವಹಿಸ್ತು. ಹೀಂಗೆ ಹವ್ಯಕ ಜನಾಂಗ – ಒಟ್ಟಾರೆ ಸಾಮಾಜಿಕ – ಪರಿಸ್ತಿತೀಲಿ ಸಿಕ್ಯಂಡು ದುರ್ಬಲ, ಅನಾಥ ಆಗ್ಬಿದ್ದಾಂಗೆ ನಂಮ ಸ್ವಕೀಯ ಹಿತ ಕಾಪಾಡ್ಕ್ಯಂಬಲ್ಲೆ ತನ್ದೇ ಆದ ಭಾಷೆಯಲ್ಲಿ ಒಂದ್ ಸೂರ್ನಡಿಗೆ ಬೆಸ್ಗಂಬೋದು ಅವಶ್ಯ. ಹೀಂಗೆ ಬೆಸ್ಗಂಬಲ್ಲೆ ಅಂದ್ರೆ ನಾವೆಲ್ಲ ಒಂದು ಎಂಬೊ ಭಾವನಾತ್ಮಕತೆ ಬೆಳಿಯಲ್ಲೆ ಭಾಷೇನೆ ಗಟ್ಟೀ ಸೂತ್ರ. ಈ ಸೂತ್ರ ಹವೀಕರಿಗಷ್ಟೇ ಎಂದಲ್ಲ. ಎಲ್ಲಾ ಒಳ ಪಂಗಡಗಳೂ ಇದೇ ಸೂತ್ರದಲ್ಲೇ ತಮ್ಮನ್ನು ಒಂದಾಗಿ ಕಂಡಕತ್ತಾ ಇದ್ವ. (ತುಳು, ಕೊಂಕಣಿ, ಕೊಡವ – ಹೀಂಗೆ) ತಂವ್ದೇ ಸಂಸ್ಕೃತಿ, ಅಸ್ಮಿತೆ, ಅಸ್ತಿತ್ವ ಉಳಶ್ಯಕಂಬಲ್ಲೆ ಕಾಪಾಡ್ಕ್ಯಂಬಲ್ಲೆ ಭಾಷೆ ಬಳಕೆ ಅವಶ್ಯ. ಸ್ವಾಭಿಮಾನ ಉದ್ದೀಪನಗೊಳ್ತು. ಹಾಂಗಾಗಿ ಪ್ರಸ್ತುತದ ಪರಿಸ್ಥಿತಿಯಲ್ಲಿ ಹವೀಕಭಾಷೇನ ಉಳ್ಸಕಂಬೋದು ತೀರಾ ಅಗತ್ಯ. 'ಗ್ಲೋಬಲಾಜೇಶನ್' ಮಾತಾಡೋದಕ್ಕೂ ಒಟ್ಟಾರೆ ಸಾಮಾಜಿಕದ ವಾಸ್ತವಕ್ಕೂ ಅಂತರ ಇದ್ದು. ಮನೆಗೆದ್ದು ಮಾರುಗೆದಿ. ತಾನುಳ್ದ್ರೆ ಲೋಕ ಉಳೀತು. ತನ್ನ ಕಾಲ ಮೇಲೆ ತಾ ಮೊದ್ಲು ನಿಂತಕಂಬೋದ ಕಲಿಯ ಅಲ್ದ?

ಯಾನು ಇಡಿಯಾಗಿ ಕನ್ನಡದ ಪರ ಇದ್ದಂವ. ಸಮಗ್ರ ಕನ್ನಡದ ಬಗ್ಗೆ ಯೋಚಿಸೋಂವಾ. ಆದ್ರೂ ಹವೀಕ ಭಾಷೆ ಬಗ್ಗೆ ಪ್ರತ್ಯೇಕ ಮೋಹ ಇಟ್ಕಂಡಿದ್ದು ಎಂತಕ್ಕೇಂದ್ರೆ–ಮನೆಯ ಒಳಗೊಂದು ಗಂಡ ಹೆಣ್ತೀ ಬೇರೇನೆ ಒಂದು ಖಾಸಗೀ ಕೋಣೆ ಇಟ್ಕಂಡ್ಹಾಂಗೆ ಇದು–ಎಂಬ ತತ್ವ ಎಂದು. ಅದನ್ನೇ ಎಲ್ಲ್ರಿಗೂ ಹೇಳ್ತಿ ಅಷ್ಟೇ.

– ನಾ.ಸು. ಭರತನಹಳ್ಳಿ

ಪತ್ರಕರ್ತ, ಸಾಹಿತಿ, ಚಿಂತಕ 'ನಾಸು' ತಾವೇ ಪ್ರಶ್ನೆ ಈ ಕೇಳ್ಕಂಡು ಉತ್ತರಾನೂ ಕಳ್ಸಿದ್ರು. ಅವ್ರಿಗೆ ಕೃತಜ್ಞತೆಗಳು – ನಾರಾಯಣ ಶಾನಭಾಗ

ಅಧ್ಯಾಯ -2

ಹವಿಗನ್ನಡ ಸಾಹಿತಿಗಳು ಎಂತಾ ಹೇಳ್ತೊ

ಹವಿಗನ್ನಡ ಗ್ರಂಥಕಾರರಿಗೆ ಎರ್ಡು ಪ್ರಶ್ನೆ ಕೇಳಾಗಿತ್ತು

1. ನಾ ಎಂತಕೆ ಹವಿಗನ್ನಡ್ದಲ್ಲಿ ಬರ್ದೆ? ಬರೆತಾ ಇದ್ದೆ? ಬಟ್ಟದ್ರೆ, ಯಾಕ್ಬಿಟ್ಟೆ?
2. ಹವಿಗನ್ನಡ ಉಳ್ಸಿ ಬೆಳ್ಸೊಲೆ ಹವ್ಯಕರು ಏನ್ಮಾಡೊ?

ಉತ್ತರ ಅವ್ರ ಮಾತ್ನಲ್ಲೆ ಕಳ್ಸಿದ್ರೊ. ಅದ್ರುನ್ನೆಲ್ಲಾ ಸಹೃದಯ ಓದುಗರ ಮುಂದೆ ಹಾಂಗೇ ಇಡ್ತಾ ಇದ್ದೆ.

ಹವಿಗನ್ನಡ ಗ್ರಂಥಕಾರರ ಅಭಿಪ್ರಾಯಗಳು

ಡಾ॥ ಹರಿಕೃಷ್ಣ ಭರಣ್ಯ ಎಂ.ಎ. ಪಿ.ಹೆಚ್.ಡಿ
ಮುಖ್ಯಸ್ಥರು ಕನ್ನಡ ವಿಭಾಗ
ಮದುರೈ ಕಾಮರಾಜ ವಿಶ್ವವಿದ್ಯಾನಿಲಯ
ಮದುರೈ, ತಮಿಳುನಾಡು – 625 021
ದೂರವಾಣಿ – 0425–2458459(ಮ)

(ಮೂಲತಃ ಪುತ್ತೂರು ತಾಲೂಕಿನ ಭರಣ್ಯ ಗ್ರಾಮದೋರು)

55 ವರ್ಷ. ಪ್ರಕಟಿತ ಕೃತಿ: 15

ಹವಿಗನ್ನಡ ಕೃತಿಗಳು :

1. ಹೀಂಗೊಂದು ಮದುವೆ : ನಾಟಕ 1990 ಪು 43
2. ಬದ್ಧ : ನಾಟಕ 1991 ಪು: 58
3. ಗೆಣಸಲೆ : ಮುಕ್ತಕಗಳು 1995 ಪು: 50
4. ದೊಡ್ಡಜಾಲು : ಕಾದಂಬರಿ 1996 ಪು: 66 (ತಮಿಳಿಗೆ ಅನುವಾದ ಆಜು)
5. ಸಾವಿರದ ಒಂದು ಗೆಣಸಲೆ : ಮುಕ್ತಕಗಳು 2003 ಪು : 112

6. ನುಡಿ ಸಂಸ್ಕೃತಿ : ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಕರ ಪಡೆನುಡಿಗಳ ಕೋಶ (ಡಾ। ಶ್ರೀ ಕೃಷ್ಣ ಭಟ್ಟ ಅರ್ತಿಕಜೆ ಇವರೊಂದಿಗೆ) 2005 ಪು : 120

ಪ್ರಶಸ್ತಿ : "ಹವಿಗನ್ನಡ ಸೂರಿ" ಶ್ರೀ ಅಖಿಲ ಹವ್ಯಕ ಮಹಾಸಭೆಯ ಹವ್ಯಕ ಅಧ್ಯಯನ ಕೇಂದ್ರದಿಂದ 2004ರಲ್ಲಿ.

ಹವ್ಯಕ ಅಧ್ಯಯನ ಕೇಂದ್ರ 2004ರಲ್ಲಿ ಸ್ಥಾಪಿಸಿದ "ಹವಿಗನ್ನಡ ಪ್ರತಿಷ್ಠಾನ"ದ ಸ್ಥಾಪಕಾಧ್ಯಕ್ಷರು.

❶ ಹವಿಗನ್ನಡ, ಎನ್ನ ಹೆತ್ತ ಅಬ್ಬೆಯ ಮೂಲಕವಾಗಿ ನೆತ್ತರಿಲ್ಲೇ ಬಂದ ನುಡಿ. ಎನ್ನ ಉಸುಲೇ ಇದು. ಎನ್ನ ಹೃದಯದ ಆತ್ಮೀಯವಾದ ಆಪ್ತವಾದ, ಭಾವನೆಗೂ ಏನಿದ್ದರೂ ಈ ನುಡಿಲಿಯೇ ಮದಾಲು ಹುಟ್ಟಿಗೊಂಬದು. ಆನೊಬ್ಬ ಭಾವಜೀವಿ, ಬರಹಗಾರ ಆದರೂ, ಇದಕ್ಕೆ ಸಂಬಂಧಪಟ್ಟ ಹಾಂಗೆ, ಭಾವನೆ – ವಿಚಾರಂಗಳೂ ಮದಾಲು ಬಪ್ಪದು ಎನ್ನ ಭಾಷೆಲಿಯೇ ಹೇಳುವದೂ ಮುಖ್ಯವೇ. ಇದರೆಲ್ಲಾ, ಈ ನುಡಿಲಿಯೇ, ಹಾಂಗೆಯೇ ಹೇಳಿದರೆ ಅದು ಪರಿಪೂರ್ಣವೂ ಚೊಕ್ಕವೂ ಆವುತ್ತು, ಇಲ್ಲಿ ಒಂದು ವಿಶೇಷ ತೃಪ್ತಿ ಇದ್ದು ಇದು ಎನ್ನ ಅನುಭವ.

ಪ್ರತಿಯೊಬ್ಬಂಗೂ ಅವರವರ ತಾಯ್ನುಡಿಲಿಯೇ ಭಾವನೆಗೊ ಹುಟ್ಟುವದು. ಹವಿಗನ್ನಡದವು ಕನ್ನಡಲ್ಲಿ ಬರವಗ ಎಡೆಎಡೆಲಿ ಹವ್ಯಕ ಜಾಯಮಾನ ಕಂಡುಬಪ್ಪದು ಈ ಕಾರಣಂದ. ನಮ್ಮ ಹವಿಗನ್ನಡಕ್ಕೂ, ಹಳಗನ್ನಡ / ನಡುಗನ್ನಡಕ್ಕೂ ಅಂಥಾ ದೊಡ್ಡ ವ್ಯತ್ಯಾಸ ಏನೂ ಇಲ್ಲೆ. ಭಾವನೆ – ಸ್ಪಂದನೆಗಳ ಆತ್ಮೀಯವಾಗಿ, ಚೊಕ್ಕದಾಗಿ ಹೇಳಿಗೊಂಬಲೆ ಬೇಕಾಗಿ, ಇದು ನಮ್ಮದು ಹೇಳುವ ಪ್ರೀತಿ– ಅಭಿಮಾನಂಗಳಿಂದಾಗಿ, ಆನು ಹವಿಗನ್ನಡಲ್ಲಿ ಬರೆತ್ತಾ ಇದ್ದೆ. ಆನೊಬ್ಬ ಸೃಜನಶೀಲ ಲೇಖಕನೂ ಭಾವಜೀವಿಯೂ ಆದಕಾರಣ, ಸಾಹಿತ್ಯದ ಬೇರೆ ಬೇರೆ ಪ್ರಕಾರ /ಪ್ರಭೇದಂಗಳನ್ನೂ ಈ ನುಡಿಲಿ ಬರವಲೆ ಪ್ರಯತ್ನ ಮಾಡಿದ್ದೆ. ಮದಾಲು ಮದಾಲು ಬರದದ್ದು ಕವಿತೆಗಳ, ಮತ್ತೆ ನಾಟಕ, ಮುಂದೆ ಕಾದಂಬರಿ, ಪ್ರಬಂಧ, ಹರಟೆ ಹೀಂಗೆ ಪ್ರಯೋಗಂಗಳ ಮಾಡುತ್ತಾ ಬಂದೆ. ಸಾಹಿತ್ಯದ ಯಾವುದೇ ಪ್ರಕಾರಕ್ಕೆ ನಮ್ಮ ನುಡಿ ಲ್ಯಾಕಲ್ಲಿ ಬಗ್ಗುತ್ತು, ಒಗ್ಗುತ್ತು

❷ ಈ ನುಡಿ, ಕನ್ನಡದ ಅತ್ಯಂತ ಹಳೆಯ ಉಪಭಾಷೆ, ಶ್ರೀಮಂತ ಭಾಷೆ. ಇದರಲ್ಲಿ 'ಇಗ್ಗಪ್ಪಹೆಗಡೇ ವಿವಾಹ ಪ್ರಹಸನ' ನಾಟಕವೇ ಮದಾಲಾಣ ಪ್ರಕಟಿತ ನಾಟಕ ಕೃತಿ ಹೇಳುವದು ಎಲ್ಲರಿಂಗೂ ಗೊಂತಿದ್ದು. ಇದು ಕನ್ನಡದ ಮದಲಾಣ ಸ್ವತಂತ್ರ ಸಾವಾಜಿಕ ನಾಟಕವೂ ಅಪ್ಪು. ಈ ಹವಿಗನ್ನಡ, ಕೇವಲ ಮನೆಯೊಳದಿಕ್ಕಾಣ ಮಾತಾಗಿಯೇ ಸಾವಿರಾರು ವರ್ಷಗಳಿಂದ, ಲಕ್ಷಾಂತರ ಬಾಯಿಗಳ ಮೂಲಕವಾಗಿ ಬದುಕ್ಕಿ ಬಯಿಂದು, ಒಳುಕ್ಕೊಂಡಿದು. ಅನೇಕ ಪ್ರಾದೇಶಿಕ ವೈವಿಧ್ಯಂಗಳೂ ಇದ್ದು. ಭಾಷೆ ಹೇಳುವದು ಸಾಂಸ್ಕೃತಿಕ ಕೇಂದ್ರ ಬಿಂದು. ವಾಹಕ, ಹರಳು ಕಟ್ಟಿದ ರಸಕೇಂದ್ರ. ಇದರ, ವಾತನಾಡಿಗೊಂಡೇ ಇಪ್ಪದರಿಂದಲೂ ಒಳಿಶಲಕ್ಕು, ಎರಡನೆಯದಾಗಿ, ನಮ್ಮ ನಮ್ಮ ಮನೆಯ ಮಕ್ಕೊಗೆ, ನಮ್ಮ ಈ ಬಂಗಾರ ಮಾತಿನ ಖಂಡಿತವಾಗಿಯೂ ಹೇಳಿಕೊಡೆಕ್ಕು. ಹೇಳಿದರೆ, ಮನೆಯೊಳದಿಕ್ಕೆ ಹವ್ಯಕ ಸಂಸ್ಕೃತಿಯ ಒಳಿಶಿದರೆ ಅದು ಭಾಷೆಲಿಯೂ ಖಂಡಿತ ಒಳಿತ್ತು, ಸಾಹಿತ್ಯ, ಕಲೆ ಇತ್ಯಾದಿಗಳಲ್ಲಿ ಅದರ ವಿವಿಧ ಪ್ರಕಾರಂಗಳಲ್ಲಿಯೂ ಸಾಧ್ಯ ಆದಷ್ಟೂ ಅದರ ಒಳಿಶಿಗೊಂಬಲೆ, ಎಡಿಗಾದವು ಪ್ರಯತ್ನ ಮಾಡೆಕ್ಕು. ಹವ್ಯಕ ಲೇಖಕಂಗೊ ಎಲ್ಲರೂ, ಬೇರೆ ಭಾಷೆಗಳಲ್ಲಿ ಬರಕ್ಕೊಂಡಿದ್ದರೂ, ಅವರವರದ್ದೇ ನುಡಿಲಿ ಸಾಹಿತ್ಯ ರಚನೆಯ ಮಾಡೆಕ್ಕು. ಪ್ರಕಟಣೆ ಅಪ್ಪಹಾಂಗೆ ವ್ಯವಸ್ಥೆ ಇದ್ದರೆ ತನ್ನಷ್ಟಕ್ಕೇ ಲೇಖಕಂಗೊ ಹುಟ್ಟಿಗೊಳ್ಳುತ್ತವು, ಲೇಖನಂಗೊ ಕೃತಿಗೊ ಹುಟ್ಟಿಗೊಳ್ತು. ಇದಕ್ಕೆಲ್ಲಾ ಬೇಕಪ್ಪದು, ನಮ್ಮದು, ನಮ್ಮ ನುಡಿ – ಹೇಳುವ ಒಂದು ಪುಟ್ಟ ಅಭಿಮಾನ ಪ್ರೀತಿಗೊ ಅಷ್ಟೇ.

ಉಪಭಾಷೆಗೊ ಒಳುದರೆ ಮಾತ್ರವೇ ಸಮಗ್ರ ಕನ್ನಡ ಒಳಿಗಷ್ಟೇ. ಹೇಳಿದರೆ, ಕನ್ನಡದ ಅನರ್ಘ್ಯ ಸಂಪತ್ತೇ ಈ ಉಪಭಾಷೆಯ ಸಂಸ್ಕೃತಿಗೊ. 'ಕನ್ನಡ ನಾಡಿಲ್ಲೇ ಕನ್ನಡ ಉಳಿಸಿ' ಹೇಳುವದೆಷ್ಟು ದುರಂತವೋ, ಹಾಂಗೇ, ಅವರವರ ತಾಯ್ನುಡಿಗೂ ಬಪ್ಪಲಾಗ. ಇದರ ಒಳಿಶೆಕ್ಕಾದ್ದದು ನಾವೇ.

✤ ✤ ✤

ಕೆ ಪರಮೇಶ್ವರ ಭಟ್ಟ ಬಾಳಿಲ : ನಿವೃತ್ತ ಶಿಕ್ಷಕ
ಬಾಳಿಲ, ಸುಳ್ಯ, ದಕ್ಷಿಣ ಕನ್ನಡ – 574212
ದೂರವಾಣಿ : 08257–275005
(ಮೂಲತಃ ಕಾಸರಗೋಡು ತಾಲೂಕಿನ
ಪೆರಡಾಲ ಗ್ರಾಮದೋರು)
66 ವರ್ಷ. ಪ್ರಕಟಿತ ಕೃತಿ : 4

ಹವಿಗನ್ನಡ ಕೃತಿಗಳು :

1. ಕಿಟ್ಟಣ್ಣನ ಪ್ರೀತಿ : ನೀಳ್ಗವನ – ಕೃಷ್ಣ ಸುಧಾಮರ ಕತೆ 1993 ಪು : 16
2. ಹೊಳಪಿನ ಹಾದಿ : ನೀಳ್ಗವನ –ಧ್ರುವಚರಿತೆ – 1995 ಪು. 24
3. ಧರ್ಮ ವಿಜಯಃ ಮಹಾಕಾವ್ಯ–ಮಹಾಭಾರತ ಕಥಾವಸ್ತು 2005 ಪು.430

ಪ್ರಶಸ್ತಿ : 'ಹವಿಗನ್ನಡ ಸೂರಿ' – ಶ್ರೀ ಅಖಿಲ ಹವ್ಯಕ ಮಹಾಸಭೆಯ ಹವ್ಯಕ ಅಧ್ಯಯನ ಕೇಂದ್ರದಿಂದ 2005ರಲ್ಲಿ.

❶ ದೇವರ ದಯಂದ ಎನಗೆ ಕನ್ನಡಲ್ಲಿ ಬೇರೆ ಬೇರೆ ಛಂದಸ್ಸಿಲ್ಲಿ ಕವನ ಬರವಲೆ ಎಡಿತ್ತು ಸಣ್ಣ ಪ್ರಾಯಂದಲೇ ಕವನ ಬರವ ಹವ್ಯಾಸ ಇದ್ದ ಕಾರಣ ಮಾತ್ರಾ ಗಣಂಗಳ ಸಾಮಾನ್ಯ ಹಿಡಿತ ಸಿಕ್ಕಿದ್ದು. ಹಲವು ಮಕ್ಕಳ ಕವನಂಗಳ, ಭಾವಗೀತೆಗಳ ಬರದ್ದೆ. ನಮ್ಮ ಮನೆ ಮಾತಿಲ್ಲಿ (ಹವಿಗನ್ನಡಲ್ಲಿ) ಪದ್ಯಬರವಲಾವುತ್ತೊ ನೋಡೆಕು ಹೇಳಿ ಪ್ರಯತ್ನ ಪಟ್ಟೆ. ಗೆಲುವಾತು. ಛಂದೋಬದ್ಧವಾಗಿ ದ್ವಿಪದಿ ಚೌಪದಿ, ಷಟ್ಪದಿಗಳ ಪ್ರಾಸ ಸಹಿತ ಚೆಂದಕೆ ಬರವಲೆ ಹವಿಗನ್ನಡ ಶಬ್ದಂಗೊ ಹೊಂದಿಕೆ ಆವುತ್ತು. ಮತ್ತೇಭವಿಕ್ರೀಡಿತ, ಶಾರ್ದೂಲ ವಿಕ್ರೀಡಿತ, ಉತ್ಪಲಮಾಲಾ ಇತ್ಯಾದಿ ವೃತ್ತ ಜಾತಿಗಳಿಂಗೂ ನಮ್ಮ ಭಾಷೆಯ ಪದಗುಂಪು ಅನುಕೂಲವಾಗಿ ಕೂಡುತ್ತು. ಹಾಂಗಿಪ್ಪ ಕೆಲವಾರು ರಚನೆಗಳ ಆನು ಮಾಡಿದ್ದೆ ಕೂಡ. ಹಾಂಗಾಗಿ ಹವಿಗನ್ನಡಲ್ಲಿ ಬರವಲೆ ಮುಖ್ಯ ಕಾರಣ ಕೇವಲ ಕುತೂಹಲ ಮತ್ತು ಪ್ರಯೋಗ ಈಗ ಯಶಸ್ಸು ಅಷ್ಟೆ. ಕೆಲವು ನೀಳ್ಗವನ (ಖಂಡಕಾವ್ಯ) ದ್ವಿಪದಿ, ಚೌಪದಿಗಳಲ್ಲಿ ಬರದೆ. ಇತ್ತೀಚೆಗೆ ಐದ್ಯೆದು ಮಾತ್ರಾಗಣಂಗಳ ಸ್ರೋತವಾಗಿ ಧರ್ಮ ವಿಜಯವನ್ನು ಬರದೆ. ದೇವರೇ ಆ ಶಕ್ತಿಯ ಎನಗೆ ಕೊಟ್ಟದು.

ಬರವ ಶಕ್ತಿ ಕುಂದಿದ್ದಿಲ್ಲೆ. ಬರವದರ ಬಿಟ್ಟಿದೂ ಇಲ್ಲೆ. ಆದೊಂದು ಮರುಳು. ಈಗಲೂ ಬರೆತ್ತಾ ಇದ್ದೆ. ತೋಟಕ್ಕೆ ಒಂದು ಸುತ್ತು ಹಾಕಿ ಬಪ್ಪಗ ನಾಲ್ಕು ಸಾಲಿನ ಒಂದು ಚುಟುಕ ರೂಪ ಪಡೆತ್ತು, ಬಂದು ಕೂದು ಬರವದು. ಸುಮಾರು ಏಳುನೂರು ಚಿಲ್ಲರೆ ಚುಟುಕಂಗೊ ತಯಾರಿದ್ದು. ಎಂತಕೆ ಬರವದು? ಆರಿಂಗೆ ಬೇಕಾಗಿ? ಕೇಳಿದರೆ ಉತ್ತರ ಎನ್ನಲ್ಲಿಲ್ಲೆ. ಮನಸ್ಸು ಇತರ ಗೊಂದಲಂಗಳಿಂದ ಬಿಡುಗಡೆ ಹೊಂದಿ ಒಂದು ರೀತಿಯ ಆರಾಮು ಸಿಕ್ಕುತ್ತು ಅಷ್ಟೆ.

❷ ಹವಿಗನ್ನಡ ಉಳಿಸಿ ಬೆಳೆಸಲೆ ಹವ್ಯಕರು ಎಂತ ಮಾಡೆಕು ಹೇಳುವ ಪ್ರಶ್ನೆಗೆ ಉತ್ತರ ಕೊಡುವದು ಕಷ್ಟದ ಕೆಲಸ, ಅದೂ ನಮ್ಮ ರಾಜ್ಯ ಭಾಷೆ ಕನ್ನಡವೇ ಕುಲಗೆಟ್ಟು ಹೋಪ ಈ ಕಾಲಲ್ಲಿ. ಒಂದೇ ಮಾತಿಲ್ಲಿ ಹೇಳುತ್ತರೆ, ಬಹುಪಾಲು ಹವ್ಯಕರಿಂಗೆ ನಮ್ಮ ಭಾಷೆಯ ಮೇಗೆ ಪ್ರೀತಿ ಅಭಿಮಾನ ಕಮ್ಮಿ. ಈ ಮಾತು ಅಪ್ರಿಯವಾದ ಸತ್ಯ. ಎಲ್ಲೇ ಇರಲಿ, ಎಷ್ಟು ಜೆನವೇ ಕೂಡಿರಲಿ, ಇತರ ಭಾಷೆಯವು (ಕೊಂಕಣಿ, ತುಳು, ಮಲೆಯಾಳ) ಒಬ್ಬಕ್ಕೊಬ್ಬ ಅವರವರ ಭಾಷೆಲಿ ಎಷ್ಟು ಚೆಂದಕೆ ಮಾತಾಡುತ್ತವು! ಕೇಳಿದವು ನೆಗೆ ಮಾಡುಗೋ ಹೇಳಿ ಅಂಜಿಕೆ, ಆತಂಕ, ಕೀಳರಿಮೆ ಏವದೂ ಇಲ್ಲೆನ್ನೆ! ಸ್ವಂತ ಭಾಷೆಯ ಮೇಗೆ ಅವಕ್ಕಷ್ಟು ಮೋಹ. ಆ ಮನೋಸ್ಥಿತಿ ನಮಗಿದ್ದೊ? ಆರಾದರೂ 'ಏನು ಭಾವ' ಹೇಳಿ ಸುರು ಮಾಡಿದರೆ ಆತು. ನವಗೆ ಏನೋ ಒಂದು ಥರಾ ಆವುತ್ತಲ್ಲದೋ? ನಮ್ಮ ಅಬ್ಬೆಯ ಮಡಿಲಲ್ಲಿ ಕಲ್ತ ಭಾಷೆ ಅದು. ಏಕೆ ಪ್ರೀತಿ ಅಭಿಮಾನ ಕಮ್ಮಿ ಆತು? ಅಬ್ಬೆಯನ್ನೇ ನಾವು ಮರದ ಹಾಂಗೇ ಅಲ್ಲದೋ? ಆ ಪ್ರೀತಿ ಒಳಿಯೆಕು, ಹವಿಗನ್ನಡವೂ ಒಳಿತ್ತು.

ಇನ್ನೊಂದು ವಿಚಾರ ಯಾವುದೇ ಭಾಷೆ ಶಾಶ್ವತವಾಗಿಪ್ಪಲೆ ಆಯಾ ಭಾಷೆಲಿ ಧಾರಾಳ ಸಾಹಿತ್ಯ ಸೃಷ್ಟಿ ಆಯೆಕು. ಮಕ್ಕಳಿಂದ ತೊಡಗಿ ಪ್ರಾಯಸ್ಥರಿಂಗೂ ಹಿತ ಅಪ್ಪ ರೀತಿಯ ಕವನಂಗೊ, ಕಾದಂಬರಿಗೊ, ಕಾವ್ಯಂಗೊ ಅಂತೂ ಸಾಹಿತ್ಯದ ಬೇರೆ ಬೇರೆ ಪ್ರಕಾರಂಗೊ ಮೂಡಿಬರೆಕು. ನಮ್ಮದರ ನಾವೇ ತೆಕ್ಕೊಳೆಕು, ನವಗೆ ನಮ್ಮದೇ ಪ್ರೋತ್ಸಾಹ. ಎನ್ನ ಕೃತಿಯ ನಿಂಗೊ, ನಿಂಗಳದ್ದರ ಆನು. ಹವ್ಯಕರ ಮನೆ ಸಂಖ್ಯೆ ನೋಡಿದರೆ ಯಾವುದೇ ಕೃತಿಯ ಸಾವಿರ ಪ್ರತಿ ಮಾರಾಟ ಅಪ್ಪಲೆ ಕಷ್ಟಾಗ. ಬೇಕಪ್ಪದು 'ನಮ್ಮದಿದು' ಹೇಳಿ ಪ್ರೀತಿ 'ಇದರಲ್ಲಿ ಎಂತದಿದ್ದು?'

ಕೇಳಿದರೆ? ಒಳ ಹೊಕ್ಕು ನೋಡುವ ಮನಸ್ಸು ಬೇಕಾದ್ದು. ನಮ್ಮವರಲ್ಲಿ ಅಂತಹ ಔದಾರ್ಯದ ಹೃದಯ ಇದ್ದರೆ ಸಾಹಿತ್ಯ ಸೃಷ್ಟಿಯೂ ಅಕ್ಕು ನಮ್ಮ ಭಾಷೆಯೂ ಒಳಿಗು. 'ತಲೆಗೆ ಹೆಟ್ಟುವವದರಿಂದ ಹೆಚ್ಚು, ಬೆನ್ನು ತಟ್ಟುವವು ನಮ್ಮಲ್ಲಿರೆಕು. ಯಥೇಚ್ಛವಾಗಿ ಹವಿಗನ್ನಡ ಸಾಹಿತ್ಯ ಉಂಟಾದರೆ ಮುಂದಂಗೆ ಹವಿಗನ್ನಡ ಸಾಹಿತ್ಯ ಅಕಾಡೆಮಿಯೂ ಅಪ್ಪ ಪ್ರಯತ್ನ ಮಾಡ್ಲಕ್ಕನ್ನೆ? ಅಂಬಗ ಈ ಭಾಷೆಗೂ ಒಂದು ಸ್ಥಿರವಾದ ಅಸ್ತಿತ್ವ ಬಾರದೋ? ಗುರಿ ತುಂಬದೂರದ್ದಾದಿಕ್ಕು. ಪ್ರಯತ್ನವೂ, ಹಟಸಾಧನೆಯೂ ಬೇಕು. ಆಗ ಹೇಳಿ ಕೂದರೆ, ಎಂತದೂ ಇಲ್ಲೆ.

✣ ✣ ✣

ಮಹಾಬಲೇಶ್ವರ ಗಣಪತಿ ಶಾಸ್ತ್ರಿ(ಗಂಧರ್ವ) ಬಾಳಗಾರ
ಅಜ್ಜೀಬಳ ಸಿರ್ಸಿ , ಉತ್ತರ ಕನ್ನಡ
55 ವರ್ಷ. ಕೃಷಿಕ, ಪತ್ರಕರ್ತ
ಪ್ರಕಟಿತ ಕೃತಿ : 3

ಹವಿಗನ್ನಡ ಕೃತಿ: ದತ್ತೂ ಮಾಣಿ ಮದ್ವೆ ಪ್ರಸಂಗ–1990 ನಾಟ್ಕ, ಪುಟ : 24 ಈ ನಾಟ್ಕ ಹಿಂದೀಲಿ ''ದತ್ತೂ ಬೇಟೆಕಾ ಶಾದೀ ಪ್ರಸಂಗ'' ಹೇಳಿ, ಕೊಂಕಣೀಲಿ ''ದತ್ತೂ ಬಾಳಾಲೆ ಲಗ್ನಾಚೋ ಪ್ರಸಂಗ್'' ಹೇಳಿ ಅನುವಾದ ಆಜು.

❶ ಯಂತಕ್ಕೆ ಅಂದ್ರೆ ಯನ್ನ ಮಾತೃ ಭಾಷೆ ಇದು. ಉಳಿದೆಲ್ಲ ಭಾಷೆಯ ಕಲ್ತದ್ದು. ಆನು ಯಾವ್ದೇ ವಿಚಾರ ಮಾಡೋದಿದ್ರೂ ಮೊದ್ಲು ಹವ್ಯಕ ಭಾಷ್ಯಲ್ಲೇ ಮಾಡ್ತಿ. ಬೇರೆ ಯಾವ್ದೇ ಭಾಷ್ಯಲ್ಲಿದ್ದ ವಿಷ್ಯಾನೂ ಹವ್ಯಕ ಭಾಷೆಗೆ ಪರಿವರ್ತನೆ ಮಾಡ್ಕ್ಯೇ ಅರಸ್‌ಗ್ಯತ್ತಿ

1981ರಲ್ಲಿ ರಾಜ್ಯ ಮಟ್ಟದ ಯುವಜನ ಮೇಳದ ಸಣ್ಣಕಥಾ ಸ್ಪರ್ಧ್ಯಲ್ಲಿ ಮೊದಲ್ನೆ ನಂಬರ್ ಬಂದಿ. ಹೊಸ್ತೆಂತದಾದ್ರೂ ಬರ್ಯವು ಹೇಳಿ ತುಡಿತ ಇದ್ದಿತ್ತು. 1982ರಲ್ಲಿ ಸೋಂದಾದಲ್ಲಿ ಯುವಜನ ಮೇಳ ನಡ್ದಿತ್ತು. ಓಣಿಕೇರಿ ಯುವತಿ ಮಂಡ್ಳದವು ಹವಿಗನ್ನಡ ನಾಟ್ಕ ಆಡ್ದ. ಆದ್ರೆ ಹವ್ಯಕ ಭಾಷೆ ಕನ್ನಡವೇ ಅಲ್ಲ ಹೇಳಿ ಯುವಜನ ಸೇವಾಧಿಕಾರಿ ಆ ನಾಟ್ಕವ ಸ್ಪರ್ಧ್ಯಿಂದ ಕ್ಯಾನ್ಸಲ್ ಮಾಡ್ದ.

ವಾಗ್ವಾದ ಆತು. ಯಾವ ಪ್ರಯೋಜನವೂ ಆಜಿಲ್ಲೆ. ಮನ್ಸಿಗೆ ನೋವಾತು. ಈ ಭಾಷೆ ಯನ್ನ ಮಾತೃಭಾಷೆ. ಈ ಭಾಷ್ಯಲ್ಲಿ ಯಂಗಿದ್ದ ಹಿಡ್ತ ಉಳಿದ್ರಲ್ಲಿ ಇಲ್ಲೆ. ಈ ಭಾಷ್ಯಲ್ಲಿ ಬರ್ಯದ್ರಲ್ಲಿದ್ದ ಖುಶಿ ಬೇರೆ ಭಾಷ್ಯಲ್ಲಿ ಬರ್ಯದ್ರಲ್ಲಿ ಸಿಗ್ತಿಲ್ಲೆ. ನಾಟ್ಕ ಬರ್ಯವು ಹೇಳಿ ತೀರ್ಮಾನ ಮಾಡ್ಜಿ. ವರದಕ್ಷಿಣೆ ಕಾಲ ಆಗಿತ್ತು. ಅದೇ ವಿಷ್ಯ ತಗಂಡು 1983ರಲ್ಲಿ ಕಾಲ್ಪನಿಕ ನಾಟ್ಕ ಬರ್ದಿ. ಅದೇ 'ದತ್ತೂ ಮಾಣಿ ಮದ್ವೆ ಪ್ರಸಂಗ'' ಆಕಾಶವಾಣಿಗೆ ಕಳಿಸ್ದೆ. ''ಹವ್ಯಕ ಭಾಷೆ ಕಲಾವಿದರು ಇಲ್ಲ'' ಹೇಳಿ ಶರಾ ಬರ್ದು ವಾಪಸ್ ಕಳಸ್ದ. ಛಲ ಬಂತು. ಕೆಲವು ಜನ್ರ ಸೇರ್ಸಿ 1984ರಲ್ಲಿ ಧ್ವನಿ ಸುರುಳಿ ಮಾಡಿ ಬಿಡುಗಡೆ ಮಾಡ್‌ಸ್ಜಿ. ರಂಗದ ಮೇಲೂ ಬಂತು. ಸಾಕಷ್ಟು ಪ್ರಯೋಗಾನೂ ಆತು. 1990ರಲ್ಲಿ ಪುಸ್ತಕ ರೂಪ್ದಲ್ಲಿ ಬಿಡುಗಡೆ ಮಾಡ್ಯಾತು. ಈ ಹುಚ್ನಲ್ಲಿ ಸಾಕಷ್ಟು ದುಡ್ ಕಳ್ಕಂಡಿ. ಆದ್ರೆ ಜನ 'ಮಾಣಿ'ಯ ಸ್ವೀಕಾರ ಮಾಡ್ದ. ಟಿ.ಎಸ್.ಎಸ್.ನಿಂದ ಸನ್ಮಾನವೂ ಆತು.

ಹವ್ಯಕ ಭಾಷ್ಯಲ್ಲಿ ಬರದ್ರೆ ಪ್ರಕಟಣೆಗೆ ಹೆಚ್ಗೆ ಅವ್ಕಾಶ ಇಲ್ಲೆ. ಪ್ರೋತ್ಸಾಹ ಕಡ್ಮೆ. ಕೊಂಕಣಿ ಭಾಷೆ ಆಡವ್ರಲ್ಲಿದ್ದ ಸ್ವಾಭಿಮಾನ ಈ ಭಾಷೆ ಮಾತಾಡವ್ರಲ್ಲೂ ಬಂದ್ರೆ ಈ ಭಾಷ್ಯಲ್ಲಿ ಮಹತ್ವದ ಕೃತಿ ರಚ್ನೆ ಮಾಡೂಲೆ ಸಾಧ್ಯ. ಈ ಭಾಷೆ ಗ್ರಂಥಕ್ಕಿಂತ್ಲೂ ಧ್ವನಿ ಮಾಧ್ಯಮ್ದಲ್ಲಿ ಹೆಚ್ಚು ಯಶಸ್ವಿ ಆಗ್ತು ಅನಸ್ತು.

❷ ಸಾಹಿತ್ಯ ಸೃಷ್ಟಿಯಾಗವು. ಜನ ಸಾಮಾನ್ಯರ ಜನಜೀವನದ ಬವಣೆ ಮರೆಸ್ವಂತ ಕತೆ, ಕವನ, ನಾಟ್ಕ, ಪತ್ರಿಕ್ಯಲ್ಲಿ ಧಾರಾವಾಹಿ, ಟೀವ್ಯಲ್ಲಿ ಧಾರಾವಾಹಿ, ಸಿನಿಮಾ, ಸಿ.ಡಿ. ಹೊರಗ್ಬರವು. ಹವ್ಯಕ ಲೋಕ್ದ ಅನಾವರಣ ಆಗ್ತಾ ಇರವು. ಹವ್ಯಕ ಸಮುದಾಯಕ್ಕೆ ಸಂಬಂಧ್ಸಿದ್ದ ಮಠ ಈವರೆಗೆ ಈ ಭಾಷೆ ಬಗ್ಗೆ ಲಕ್ಷ ಹಾಕಿದ್ದಿಲ್ಲೆ. ಅವೂ ಪ್ರೋತ್ಸಾಹ ಕೊಡವು. ಈ ಭಾಷಿಕ್ರಲ್ಲಿ ಯಲ್ಲದೂ ಇದ್ದು. ಆದ್ರೂ ಸ್ವಾತಂತ್ರ್ಯ ಪೂರ್ವದ ಕೀಳರಿಮೆ ಕೆಲವ್ರಲ್ಲಿ ಜೀವಂತ ಇದ್ದು. ಇದು ಖಂಡಿತ ಹೋಗವು. ಸಂಘ, ಸಂಸ್ಥೆ, ಕಂಪೆನಿ ಮುಂತಾದವು ಈ ಭಾಷೆ ಧಾರಾವಾಹಿ, ಸಾಹಿತ್ಯ ಪ್ರಕಟಣೆಗೆ ಪ್ರಾಯೋಜಕತ್ವ ವಹಿಸ್ಕಳವು. ಕಾಲದ ಬದ್ಲಾವಣೆಗೆ ನಾವೂ ಹೊಂದ್ಕಳವು.

ಈ ಭಾಷೆ ನಮ್ದು ಹೇಳ ಪ್ರೀತಿ ಹೆಮ್ಮೆ ನಮ್ಗೆ ಇರವು.

✤ ✤ ✤

ಎಸ್. ಚಂದ್ರಶೇಖರ ಚೊಕ್ಕಾಡಿ ಸುಳುಗೋಡು ಮನೆ
ಅಂಚೆ : ಚೊಕ್ಕಾಡಿ, ಸುಳ್ಯ ದ.ಕ. 574 212
ದೂರವಾಣಿ : 08257–284443
56ವರ್ಷ. ಕೃಷಿಕ.
ಪ್ರಕಟಿತ ಕೃತಿ : 7

ಹವಿಗನ್ನಡ ಕೃತಿ : ನೀರಮೇಲಣ ಗುಳ್ಳೆ ಕಾದಂಬರಿ 1996 ಪುಟ : 80

❶ ಹವ್ಯಕ ಭಾಷೆ ಎನಗೆ ಬಹಳಷ್ಟು ಆತ್ಮೀಯವಾದ ಭಾಷೆ. ಅದ್ರಲ್ಲಿ ಇಪ್ಪಷ್ಟು ಆತ್ಮೀಯ ಭಾವನೆ ಬೇರೆ ಬೇರೆ ಯಾವ ಭಾಷೆಲ್ಲೂ ಇಲ್ಲೆ. ಹವ್ಯಕನಾಗಿ ಆನೇ ಹವ್ಯಕ ಭಾಷೆ ಸೇವೆ ಮಾಡದ್ದೆ ಹೇಂಗೆ? ಹಾಂಗೆ 'ನೀರ ಮೇಲಣ ಗುಳ್ಳೆ' ಬರವಲೆ ಸುರು ಮಾಡಿದ್ದೆ. ಒಂದೆರಡು ಪುಟ ಬರವಲೆ ನಿಧಾನ ಆತು. ನಂತರದ ಕತೆ ಬೇರೆಯೇ. ಸುಮಾರು 80 ಪುಟ ಇಪ್ಪ ಕಾದಂಬರಿಯ ಆನು ಕೇವಲ 5 ದಿನಲ್ಲಿ (ದಿನಕ್ಕೆ ಸುಮಾರು 2 ಗಂಟೆ) ಬರದು ಮುಗಿಸಿದ್ದೆ.

ಈಗ ಬರೆತ್ತಾ ಇಲ್ಲೆ. ಏಕಂದ್ರೆ ಪುಸ್ತಕವ ಆರೂ ಆಸಕ್ತಿಲ್ಲಿ ಓದುತ್ತವಿಲ್ಲೆ. ಖರೀದಿ ಮಾಡುತ್ತವಿಲ್ಲೆ. ಈಗಲೂ ಎನ್ನ ಪುಸ್ತಕದ ಕನಿಷ್ಠ ಒಂದು ಸಾವಿರ ಪ್ರತಿ ಖರ್ಚಾವುತ್ತು ಹೇಳಿ ಯಾರಾದರೂ ಗ್ಯಾರಂಟಿ ಕೊಟ್ಟರೆ ಎಷ್ಟು ಬರವಲೂ ಆನು ತಯಾರಿದ್ದೆ.

❷ ಹವಿಗನ್ನಡ ಉಳ್ಸಿ ಬೆಳಸುಲೆ ನಾವು ಮಾಡೆಕ್ಕಪ್ಪದು ಇಷ್ಟೆ. ಹವ್ಯಕ ಆಡು ಭಾಷೆಲ್ಲಿ ಹೆಚ್ಚು ಹೆಚ್ಚು ಬರೆಯಕ್ಕು. ಪ್ರಕಟಿಸೆಕ್ಕು. ಧ್ವನಿ ಸುರುಳಿ ತಯಾರು ಮಾಡೆಕ್ಕು. ಸಾಕ್ಷಿ ಚಿತ್ರ ಮಾಡೆಕ್ಕು. ಬರೆವವಕ್ಕೆ ಪ್ರೋತ್ಸಾಹ ಕೊಡೆಕ್ಕು. ಹವ್ಯಕರು ಯಾರಾದ್ರೂ ಬರದರೆ ಅದರ ಕೂಡಲೇ ಪ್ರಕಟಿಸುವ ವ್ಯವಸ್ಥೆ ಬೇಕು.

✣ ✣ ✣

ಡಾ॥ ಶ್ರೀ ಕೃಷ್ಣ ಭಟ್ಟ ಅರ್ತಿಕಜೆ ಎಮ್.ಎ. ಪಿಹ್.ಡಿ.
ನಿವೃತ್ತ ಮುಖ್ಯಸ್ಥರು, ಕನ್ನಡ ವಿಭಾಗ
ಮದ್ರಾಸ ವಿಶ್ವವಿದ್ಯಾಲಯ
ನಂ. ಎ–8, 3ನೇ ಮಹಡಿ,
ಶಾಂತಿ ಅಪಾರ್ಟ್‌ಮೆಂಟ್ ನಂ. 13/5
ಬಾಲಕೃಷ್ಣ ಸ್ಟ್ರೀಟ್ ಮೈಲಾಪೂರ್, ಚೆನ್ನೈ–600 004
ದೂರವಾಣಿ : 044–24982520

(ಮೂಲತಃ ಪುತ್ತೂರು ತಾಲೂಕಿನ ಪಡುವನ್ನೂರು ಗ್ರಾಮದೋರು)

61 ವರ್ಷ. ಪ್ರಕಟಿತ ಕೃತಿ : 12 ಪಶ್ಯಗಳು : 18

ಹವಿಗನ್ನಡ ಕೃತಿ :

1. ಜಾನಪದ ಜೀವನ (ಹವ್ಯಕ ಜನಪದ ಗೀತೆಗಳ ಅಧ್ಯಯನ) 1981 ಪು. 83.
2. ಹವ್ಯಕ ಗಾದೆಗಳು ಸಂಗ್ರಹ ಮತ್ತು ಸಂಪಾದನೆ 1985 ಪು. 120
3. ನುಡಿ ಸಂಸ್ಕೃತಿ (ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಕ ಪಡೆನುಡಿಗಳ ಸಂಗ್ರಹ) (ಡಾ॥ ಹರಿಕೃಷ್ಣ ಭರಣ್ಯರೊಂದಿಗೆ) 2005 ಪು: 120

❶ ಹವಿಗನ್ನಡ ಕನ್ನಡದ ಒಂದು ಪ್ರಮುಖ ಉಪಭಾಷೆ. ಪ್ರಾಚೀನವಾದ ಈ ಭಾಷೆಗೆ ಅದರದ್ದೇ ಆದ ಸೊಗಸು, ಚೆಂದ ಇದ್ದು. ಇದರಲ್ಲಿ ಅಪಾರವಾದ ಶಬ್ದ ಸಂಪತ್ತು ಇದ್ದು. ಜನಪದ ಸಾಹಿತ್ಯ ಇದ್ದು. ನಮ್ಮ ಭಾಷೆ ಬಗ್ಗೆ ಎನಗೆ ತುಂಬ ಅಭಿಮಾನ. ಜನಪದ ಸಾಹಿತ್ಯದಲ್ಲದೆ ಎನಗೆ ಬಹಳ ಆಸಕ್ತಿ ನಮ್ಮ ಭಾಷೆಲಿಪ್ಪ ಸಾಹಿತ್ಯ ಸಂಪತ್ತಿನ ಹಾಗೂ ಶಬ್ದ ಭಂಡಾರವ ಒಳಿಶೆಕ್ಕು ಹೇಳುವ ಭಾವನೆ ಎನ್ನದು. ಹಾಂಗಾಗಿ ಹವಿಗನ್ನಡದಲ್ಲಿ ಬರ್ದೆ. ಬರೀತಾ ಇದ್ದೆ. ನಮ್ಮ ಭಾಷೆಲಿ ಹೇಳಿರೆ ನಮ್ಮವಕ್ಕೆ ಬೇಗನೆ ತಲಪುಗು. ಅರ್ಥ ಅಕ್ಕು ಹೇಳುವ ಅಭಿಪ್ರಾಯ ಕೂಡಾ ಎನಗೆ ನಮ್ಮ ಭಾಷೆಲಿ ಬರವಲೆ ಪ್ರೇರಣೆ. ನಮ್ಮ ಹವಿಗನ್ನಡ ಇನ್ನಷ್ಟು ಸಮೃದ್ಧ ಆಯೆಕ್ಕು ಹೇಳುವ ದೃಷ್ಟಿಕೋನ ಎನ್ನದು. ನಮ್ಮಲ್ಲಿ ಹೆಚ್ಚಿನವು ಪ್ರಯತ್ನ ಮಾಡಿರೆ ಅದು ಕಷ್ಟ ಅಲ್ಲ.

❷ ನಮ್ಮವರ ಹತ್ತರ ಮಾತನಾಡುವಾಗ ಬೇರೆ ಭಾಷೆ (ಇಂಗ್ಲೀಷ್, ಹಿಂದಿ ಇತ್ಯಾದಿ) ಉಪಯೋಗಿಸುವದರ ಮೊದಲು ನಿಲ್ಲಿಸೆಕ್ಕು. ನಮ್ಮ ಭಾಷೆ ಬಗ್ಗೆ ಅಭಿಮಾನ, ಆಸಕ್ತಿ ಬೆಳಿಸೆಕ್ಕು. ಅದರ ಬಗ್ಗೆ ಇಪ್ಪ ಕೀಳರಿಮೆಯ ದೂರ ಮಾಡೆಕ್ಕು. ನಮ್ಮ ಭಾಷೆಲಿಪ್ಪ ಸಾಹಿತ್ಯವ ಓದಿ ತಕ್ಕ ಪ್ರತಿಕ್ರಿಯೆ ನೀಡೆಕ್ಕು. ಹವಿಗನ್ನಡದಲ್ಲಿ ಬರವ ಲೇಖಕರಿಂಗೆ ತುಂಬು ಪ್ರೋತ್ಸಾಹ ನೀಡೆಕ್ಕು. ಈಗಾಗಲೇ ಬರೀತಾ ಇಪ್ಪ ಲೇಖಕರು ಇನ್ನಷ್ಟು ಕೃತಿಗಳ ರಚನೆ ಮಾಡೆಕ್ಕು. ಹವ್ಯಕ ಸಂಘಟನೆಗೊ ಆಗಾಗ ಹವಿಗನ್ನಡಕ್ಕೆ ಸಂಬಂಧಪಟ್ಟ ಹಾಂಗೆ ಭಾಷಾ ಸಾಹಿತ್ಯಿಕ ವಿಚಾರ ಸಂಕಿರಣ, ಸಭೆ ಸಮಾರಂಭ, ಚರ್ಚೆ ನಡೆಸಲೆ ತಕ್ಕ ವ್ಯವಸ್ಥೆ ಮಾಡೆಕ್ಕು. ಹವ್ಯಕ ಭಾಷಾ ಜಾಗೃತಿಯ ಮಾಡೆಕ್ಕು. ಸಮಗ್ರ ಹವ್ಯಕ ಪದಕೋಶ, ಪಡೆನುಡಿಕೋಶ, ವಿಶ್ವಕೋಶ, ಮಾಹಿತಿ ಕೋಶ ಮುಂತಾದುವುಗಳ ರಚನೆಗೆ ಹವ್ಯಕ ಮಠಂಗೊ, ಸಂಘ, ಸಂಸ್ಥೆ ಮುಂದಾಯೆಕ್ಕು. ಸಮಗ್ರ ಹವ್ಯಕರ ಜನಪದ ಸಾಹಿತ್ಯದ ಸಂಗ್ರಹ ಪ್ರಕಟಣೆ ಕೂಡಾ ಆಯೆಕ್ಕು. ಪ್ರತಿಯೊಬ್ಬ ಹವ್ಯಕನೂ ಈ ನಿಟ್ಟಿಲಿ ಕೆಲಸ ಮಾಡಲೆ ಮುಂದೆ ಬಂದರೆ ಹವ್ಯಕ ಭಾಷೆಯ ಉಳಿಸಿ ಬೆಳಸಲೆ ಸಾಧ್ಯ.

✣ ✣ ✣

ಸವಿತಾ ಯಸ್. ಭಟ್ಟ ಅಡ್ವಾಯಿ
ಅಡ್ವಾಯಿ ಮನೆ, ಪೆರುವಾಯಿ (ವಯಾ) ಅಡ್ಯನಡ್ಕ
ಬಂಟವಾಳ ದ.ಕ.–574260
ದೂರವಾಣಿ : 08255–237244
53 ವರ್ಷ. ಗೃಹಿಣಿ ಪ್ರಕಟಿತ ಕೃತಿ : 7

ಹವಿಗನ್ನಡ ಕೃತಿ : ಹೂಮಾಲೆ : ಕವನ ಸಂಕಲನ : 1993 ಪು. 21
ಹಿರಿಮೆ : ಪ್ರಪ್ರಥಮ ಹವಿಗನ್ನಡ ಕವಯಿತ್ರಿ

❶ ಎನ್ನ ಹೆತ್ತಮ್ಮೆ ಎನಗೆ ಮೊದಲು ಕಲಿಶಿದ ಭಾಷೆಯೇ ಹವಿಗನ್ನಡ. ಶಾಲೆಗೆ ಹೋಪವರೆಗೆ ಅಂದ್ರೆ, 6 ವರ್ಷದ ತನಕ ಗೊಂತಿದ್ದದು ಇದೊಂದೇ ಭಾಷೆ. ಹವಿಗನ್ನಡ ಎನ್ನ ಮೊದಲ ಭಾಷೆ. ಅದರ ಮೇಲೆ ಇತರ ಭಾಷೆಗಳಿಂದ ಒಂದು ತೂಕ

ಹೆಚ್ಚಿನ ಪ್ರೀತಿ. ಹಾಂಗಾಗಿ ಹವಿಗನ್ನಡಲ್ಲಿ ಆನು ಬರದೆ. ಕವನ ಸಂಕಲನ 'ಹೂಮಾಲೆ' ಬರದು ಹವ್ಯಕ ಭಾಷೆಲಿ ಕವನ ಸಂಕಲನ ಹೊರತಂದ ಮೊದಲ ಹವ್ಯಕ ಲೇಖಕಿ ಎನಿಸಿಕೊಂಡೆ. ಹವಿಗನ್ನಡಲ್ಲಿ ಕಥೆ ಬರದು ಎರಡು ಬಾರಿ ಕೊಡಗಿನ ಗೌರಮ್ಮ ದತ್ತಿ ನಿಧಿ ಪ್ರಶಸ್ತಿ ಗಳಿಸಿದೆ. ಅಲ್ಲದೆ ಹಲವಾರು ಕವನ, ಚುಟುಕ, ಲೇಖನ ಹೀಂಗೆ ಬರದೆ. ಈಗಲೂ ಬರೆತ್ತಾ ಇದ್ದೆ. ಬಿಟ್ಟಿದ್ದಿಲ್ಲೆ.

❷ ಹವಿಗನ್ನಡ ಉಳ್ಸಿ ಬೆಳ್ಸೂಲೆ ಎಲ್ಲಾ ಹವ್ಯಕರೂ ಮನಸ್ಸು ಮಾಡೆಕ್ಕು. ಹವ್ಯಕ ಹೆಮ್ಮಕ್ಕೊ ಹವಿಗನ್ನಡ ಭಾಷೆಲಿಯೆ ಮನೆಲಿ ಮಾತಾಡಿದರೆ ಮಕ್ಕೊಗೆ ಹವಿಗನ್ನಡ ಭಾಷೆ ಬತ್ತು. ಇಂಗ್ಲೀಷ ಇತ್ಯಾದಿ ಅಗತ್ಯ ಕಲಿಸಿಲಿ. ಆದರೆ.... ದೇಶ ವಿದೇಶಲಿದ್ರೂ, ಪೇಟೆ ಪಟ್ಟಣಲ್ಲಿದ್ರು ಹಳ್ಳಿಲಿಯೇ ಆಗಲಿ, ದಿಲ್ಲಿಯೇ ಆಗಲಿ ಎಲ್ಲಿದ್ರೂ, ಮನೆ ಮಾತಾಗಿ ಹವಿಗನ್ನಡ ಮಾತಾಡ್ಲೆ ಮರವಲೆ ಆಗ. ಹವಿಗನ್ನಡ ಗೊಂತಿಪ್ಪ ಲೇಖಕರು ಹವಿಗನ್ನಡಲ್ಲಿ ಕಥೆ, ಕವನ, ಲೇಖನ, ನಾಟಕ, ಕಾದಂಬರಿ ಬರೆಯೆಕ್ಕು. ಬರದ್ದರ ಇತರರು ಪ್ರಕಟ ಮಾಡುವ ಸಹಕಾರ ನೀಡೆಕ್ಕು. ಮಕ್ಕೊಗೆ ಹವಿಗನ್ನಡಲ್ಲಿ ಕಥೆ ಕವನ ಕಲಿಶೆಕ್ಕು. ಹೀಂಗೆಲ್ಲಾ ಮಾಡಿರೆ ಹವಿಗನ್ನಡ ಉಳಿಗು ಬೆಳಗು.

✣ ✣ ✣

ಡಾ|| ನಾ. ಮೊಗಸಾಲೆ 'ಕವಿತಾ' ಕಾಂತಾವರ
ಕಾರ್ಕಳ ಉಡುಪಿ –574129
ದೂರವಾಣಿ : 08258–276216
62 ವರ್ಷ. ಆಯುರ್ವೇದ ವೈದ್ಯರು,
ಸಂಘಟಕ ಸಾಹಿತಿ,
ಕಾಂತಾವರ, ಕನ್ನಡ ಸಂಘದ ಜೀವನಾಡಿ
(ಮೂಲತಃ ಕಾಸರಗೋಡು ತಾಲೂಕಿನ ಕೋಳ್ಯೂರಿನೋರು)
ಪ್ರಕಟಿತ ಕೃತಿ : 27

ಹವಿಗನ್ನಡ ಕೃತಿ : ಅನಂತ ಕಾದಂಬರಿ 1968 ಪುಟ : 120 ಭಾಗಶಃ ಸಂಭಾಷಣೆ ಹವಿಗನ್ನಡದಲ್ಲಿದ್ದು.

❶ ಆನು ಹವ್ಯಕ ಭಾಷೆಲಿ ಬರವಲೆ ಹೆರಟದು ಆ ಭಾಷೆಯ ಚೆಂದ ಹಾಂಗೂ ಅದರ ವಿಶೇಷ ಬೇರೆ ಭಾಷೆಯೋರಿಂಗೂ ಗೊತ್ತಾಯೆಕ್ಕು ಹೇಳಿ. ಅಲ್ಲದ್ದೆ ಆನು ಆ ದಿನಂಗಳಲ್ಲಿ ಕಾದಂಬರಿ ಬರವಗ ಇಂಥ ಪ್ರಯತ್ನವ ಬೇರೆ ಭಾಷೆಲಿ ಆರೂ ಮಾಡಿದ್ದವಿಲ್ಲೆ. ಶಿವರಾಮ ಕಾರಂತ, ಸೇಡಿಯಾಪು ಕೃಷ್ಣಭಟ್ಟರ ಹಾಂಗಿಪ್ಪ ದೊಡ್ಡ ಸಾಹಿತಿಗ ಕೂಡಾ ಪ್ರಾದೇಶಿಕ ಭಾಷೆಲಿ ಸಾಹಿತ್ಯ ಸೃಷ್ಟಿ ಬೇಡ. ಶುದ್ಧ ಕನ್ನಡಲ್ಲಿ ಹೇಳಿದರೆ ಗ್ರಾಂಥಿಕ ಭಾಷೆಲಿ ಬರೆಯಕ್ಕು ಹೇಳಿ ಹೇಳಿಕೊಂಡು ಇತ್ತಿದ್ದವು. ಆನು ಆ ದಿನಂಗಳಲ್ಲಿ ರಜಾ ಕ್ರಾಂತಿಕಾರಿ (ಈಗ ಹೇಳುವ ಮಾತಿಲಿ ಹೇಳುವುದಾದರೆ ಬಂಡಾಯಗಾರ) ಆಗಿ ಇದ್ದ ಕಾರಣ ಇಂಥ ಒಂದು ಹೊಸ ಪ್ರಯತ್ನಕ್ಕೆ ಇಳುದೆ. ಅಲ್ಲದ್ದೆ ಆನು ಆಗ ಬರೆದ ಕಾದಂಬರಿ 'ಅನಂತ'ದ ವಸ್ತುವೇ ಹವ್ಯಕರಲ್ಲಿ ಇಲ್ಲದ್ದ ಒಂದು ಸಂಪ್ರದಾಯವ (ಸೊಸೆಯ ಮದುವೆ ಅಪ್ಪಲಕ್ಕು ಹೇಳಿ) ತಪ್ಪಲೆ ಪ್ರಯತ್ನಿಸಿದ್ದು. ಹಾಂಗಾಗಿ ವಸ್ತು ಶೈಲಿ, ಭಾಷೆ ಎಲ್ಲದರಲ್ಲಿಯೂ ಹೊಸತ್ತು ಬರಲಿ ಹೇಳಿ ಹಾಂಗೆ ಬರದೆ.

ಈಗ ಆನು ಹವ್ಯಕ ಭಾಷೆಲಿ ಹೇಳಿದರೆ ನಮ್ಮ ಭಾಷೆಲಿ ಬರೆತ್ತಾ ಇಲ್ಲೆ. ಅದಕ್ಕೆ ಕಾರಣ-ಆನು ಬರದ ಅನಂತ ಕಾದಂಬರಿಯ ''ನವಭಾರತ'' ಪೇಪರಿಲಿ ವಿಮರ್ಶೆ ಮಾಡಿದ ಘನ ವಿದ್ವಾಂಸ ತೆಕ್ಕುಂಜ ಗೋಪಾಲಕೃಷ್ಣ ಭಟ್ರು ನಮ್ಮ ಭಾಷೆಗೆ ಇಂತಹ ಸಾಹಿತ್ಯವ ತಡಕ್ಕೊಂಬ ಧಾರಣ ಸಾಮರ್ಥ್ಯ ಇಲ್ಲೆ ಹೇಳುವ ಅರ್ಥಲ್ಲಿ ಬರದು ನಿರಾಶೆ ಹುಟ್ಟಿಸಿದ್ದು. ಅಲ್ಲದೇ ಅವಕ್ಕೂ ಅವರ ಹಾಂಗೇ ನವ್ಯ ಸಾಹಿತ್ಯದ ಮೇಲೆ ಅನೇಕ ಜನಕ್ಕೆ ಆಗ ಒಂದು ರೀತಿಯ ಪೂರ್ವಾಗ್ರಹ ಇತ್ತು. ಎನ್ನ ಕಾದಂಬರಿಯ ವಸ್ತು ನವ್ಯ, ಬರವಣಿಗೆಯ ರೀತಿ (ಶೈಲಿ) ಕೂಡಾ ಒಳುದ ಕಾದಂಬರಿಗಳ ಹಾಂಗೆ ಅಲ್ಲ; ಹೇಳಿದರೆ ನವ್ಯ ಸಾಹಿತ್ಯದ ಮಾದರಿ ಇತ್ತಲ್ಲದಾ ಹಾಂಗಾಗಿ ಅವು ಈ ರೀತಿ ಬರವಲೆ ಕಾರಣ ಆದಿಕ್ಕು. ಇದಕ್ಕಿಂತಲೂ ದೊಡ್ಡ ಸಂಶಯ ಎನಗೆ ಇಪ್ಪದು, ನಮ್ಮ ಹಿರಿಯ ತಲೆಮಾರಿನ ಹವ್ಯಕ ವಿದ್ಯಾವಂತರಿಗೆ ಹೊಸತಾಗಿ ಬರವೋರ ಬಗ್ಗೆ ಹೆಚ್ಚು ಪ್ರೀತಿ ವಿಶ್ವಾಸ ಆಗ ಇತ್ತಿಲ್ಲೆ. ಅಂವ ಎಂಥ ಬರೆಗು ಹೇಳಿ ಹೇಳುವ ಕೀಳಂದಾಜು ಇದ್ದಿಕ್ಕು. ಹಾಂಗಾಗಿ ತೆಕ್ಕುಂಜ ಅಣ್ಣನ ಟೀಕೆ ಆಕಾಲಲ್ಲಿ ಸರಿಯಾದದ್ದೆ ಆದಿಕ್ಕು. ಈ ಬಗ್ಗೆ ಎನಗೆ ಕೋಪ ಅಥವಾ ಬೇಸರ ಇಲ್ಲೆ.

❷ ಹವ್ಯಕ ಭಾಷೆ ಹೇಳಿ ಅಲ್ಲ ಎಲ್ಲ ಪ್ರಾದೇಶಿಕ ಭಾಷೆ ಉಳಿಸುಲೆ ಆ ಭಾಷೆಲಿ ಮಾತಾಡುವ ಜನಕ್ಕೆ ಇದು ಎನ್ನ ಭಾಷೆ ಹೇಳುವ ಪ್ರೀತಿ ಬೇಕು. ಬಂಟರಿಂಗೆ, ಕೊಂಕಣಿಗರಿಂಗೆ, ತಮಿಳರಿಂಗೆ, ಮಲೆಯಾಳಿಗಳಿಂಗೆ ಎಲ್ಲ ಇಂಥ ಭಾಷಾಭಿಮಾನ ಇದ್ದು. ಕನ್ನಡಿಗರಿಂಗೆ ದೇಶ ಭಾಷೆಗಳ ಮೇಲೆ ಯಾವ ಅಭಿಮಾನವೂ ಇಲ್ಲೆ. ಅಥವಾ ಉಳಿದೋರಿಂದ ತುಂಬಾ ಕಡಮ್ಮೆ. ಹವ್ಯಕರು ಕನ್ನಡಿಗರಲ್ಲದೋ, ಕನ್ನಡಿಗರ ಎಲ್ಲ ಗುಣವೂ ಅವರಲ್ಲಿ ಇದ್ದು. ಅದರಲ್ಲಿ ತಪ್ಪೆಂತ? (ಭಾಷಾಭಿಮಾನ ಇಲ್ಲದೇ ಇಪ್ಪದೂ ಈಗ ಫ್ಯಾಶನ್ ಆವುತ್ತಾ ಇದ್ದಲ್ಲದೋ?) ಹವ್ಯಕ ಭಾಷೆಯ ಉಳಿಸುಲೆ ಮೊದಲ ಪ್ರಯತ್ನ ಆಯೆಕ್ಕಾದು ಶುರುವಿಲಿ ಗುರುಮಠಂದ. ಆಮೇಲೆ ಹವ್ಯಕ ಸಂಘಂದ. ನಮ್ಮ ಸ್ವಾಮಿಗಳು ಒಳ್ಳೆಯೋರು ಖಂಡಿತ. ಆದರೆ ಭಾಷೆ ಒಳುದರೆ ಮಾಂತ್ರ ಸಂಸ್ಕೃತಿ ಉಳಿಗು ಹೇಳಿ ಅವು ತಿಳುಕೊಳ್ಳದ್ದರೆ ಹವ್ಯಕ ಸಂಸ್ಕೃತಿಯೂ ನಾಳೆ ಉಳಿಯ.

ಇನ್ನು ನಮ್ಮ ಹವ್ಯಕ ಸಂಘದೋರಿಂಗೆ ಹವ್ಯಕ ಭಾಷೆ, ಹವ್ಯಕ ಸಾಹಿತಿಗಳ ಬಗ್ಗೆ ಗೌರವ ಇದ್ದ ಹಾಂಗೆ ಇಲ್ಲೆ. ''ಧರ್ಮ ವಿಜಯ'' ಮಹಾಕಾವ್ಯದ ವಿಚಾರ ಗೋಷ್ಠಿಗೆ ಸಹಾಯ ಮಾಡದ್ದ ಆ ಸಂಘಂದ ಆನು ದೊಡ್ಡ ನಿರೀಕ್ಷೆ ಬಿಡಿ ಯಾವ ಪುರುಷಾರ್ಥವನ್ನೂ ನಿರೀಕ್ಷಿಸುವದು ತಪ್ಪು ಹೇಳಿ ಇದ್ದೆ.

✣ ✣ ✣

ಶ್ರೀಪಾದ ಎ. ಹೆಗಡೆ ಮಗೆಗಾರು ತ್ಯಾರ್ಸಿ
ಸಿದ್ದಾಪುರ ಉ.ಕ. –581355
ದೂರವಾಣಿ : 08389–231460
54 ವರ್ಷ. ಕೃಷಿಕ, ಶಿಕ್ಷಕ.
ಪ್ರಕಟಿತ ಕೃತಿ : 1

ಹವಿಗನ್ನಡ ಕೃತಿ : ದೇವಿಯ ದೀವಿಗೆ ನಾಟಕ 1998 ಪುಟ : 92 ಸಂಭಾಷಣೆ ಭಾಗಶಃ ಹವಿಗನ್ನಡದಲ್ಲಿ, 1998ರಲ್ಲಿ ರಾಜ್ಯ ಮಟ್ಟದ ನಾಟಕ ರಚನಾ ಸ್ಪರ್ಧೆಲಿ ಪ್ರಥಮ ಬಹುಮಾನ ಪಡೆದ ನಾಟಕ.

❶ ಸಿದ್ದಾಪುರ ತಾಲೂಕಿನಲ್ಲಿ 1932ರಲ್ಲಿ ನಡ್ದ ''ಕರ ನಿರಾಕರಣೆ'' ಚಳ್ವಳಿ ಸುತ್ತಮುತ್ತ ನೆಡ್ದ ನೈಜ ಘಟ್ನೆ ಆಧಾರ ಇಟ್ಗಂಡು ''ದೇವಿಯ ದೀವಿಗೆ'' ಎಂಬ

ಐತಿಹಾಸಿಕ ನಾಟ್ಕ ಬರ್ದಿ. ಈ ಚಳ್ವಳೀಲಿ ಹವ್ಯಕ ಮನೆತನದವೇ ಹೆಚ್ಚಾಗಿ ಭಾಗವಹಿಸಿದ್ರಿಂದ ಪ್ರಾದೇಶಿಕ ಸೊಗ್ಡು ನಾಟ್ಕಕ್ಕೆ ಇರ್ಲಿ ಅಂತ ತಿಳ್ಕಂಡು ಇಲ್ಲಿ ಜನ್ರ ಹವ್ಯಕ ಭಾಷೆಲೇ ನಾಟ್ಕ ಬರ್ದಿ. ಇದು ಯಶಸ್ವೀ ಪ್ರಯೋಗಾನೂ ಆತು. ಇಲ್ಲಿ ಬಳಸಿದ ಭಾಷೆ ನೋಡುಗ್ರ ಹೃದಯಕ್ಕೆ ಹತ್ರಾನೂ ಆತು. ಈ ನಾಟ್ಕದಲ್ಲಿ ಅಲ್ಲಲ್ಲಿ ಸಂದರ್ಭಕ್ಕೆ ತಕ್ಕಂತೆ ಹಸ್ಲರ್ ಭಾಷೆನೂ ಬಳ್ಕೆ ಆಯ್ದು (ದೇವಿ ಹಸ್ಲರ ಜಾತಿಯವಳು). ಸಾಮಾನ್ಯ ಭಾಷೆನೂ ಇದ್ದು.

ಇನ್ನೊಂದು 'ಜ್ವಾಲೆ' ಎಂಬ ಹವ್ಯಕ ಭಾಷೆಯ ರೇಡಿಯೋ ನಾಟ್ಕ ಧಾರವಾಡ ಆಕಾಶವಾಣಿ ಕೇಂದ್ರದಿಂದ ಪ್ರಸಾರ ಆಯ್ದು.

❷ ಹವ್ಯಕ್ರು ಇಪ್ಪಲ್ಲೀವರೆಗೆ ಹವಿಗನ್ನಡ ಉಳಕತ್ತು. ಇದು ಚಿರಾಯು. ಆದ್ರೂವ ಹೊಸ ವಿಜ್ಞಾನದ ಆವಿಷ್ಕಾರದಿಂದಾಗಿ ಭಾಷೆ, ಸಂಪ್ರದಾಯ, ಸಂಕರ ಆಗಿ ಹೋಗ್ಲಕ್ಕು. ಅಲ್ದೇ ಭಾಷೆ ಕಾಲದಿಂದ ಕಾಲಕ್ಕೆ ಬದ್ಲಾವಣೆ ಆಗ್ತಾ ಇರ್ತು. ಭಾಷೆ ಬದ್ಲಾವಣೆ ಆಗ್ತಾ ಇದ್ದ? ಆದ್ರೆ ಹ್ಯಾಂಗೆ ಆಗ್ತಾ ಇದ್ದು? ಅದ್ರ ಮೇಲೆ ಇನ್ನೂ ಯಾವ್ಯಾವ ಭಾಷೆ ಪ್ರಭಾವ ಬೀರ್ತು ಅಂತ ಗುರುತ್ಸದಕ್ಕಾಗಿ ಈ ಭಾಷೆ ಗ್ರಂಥ ರೂಪ್ದಲ್ಲಿ ಹೆಚ್ಚೆಚ್ಚಾಗಿ ಬಪ್ಪದು ಒಳ್ಳೇದು. ಶ್ರಮ ಅನಿಸಿದ್ರೂ ಈಗ ನಿಂಗ ಮಾಡಲೆ ಹೊರಟ ಸಾಹಸದ ಕ್ರಮ ಮೆಚ್ಚ್ವಂತದು. ಶ್ರೀಮಂತವಾದ ಹವ್ಯಕ ಭಾಷೆ, ಸಂಸ್ಕೃತಿ, ಸಂಪ್ರದಾಯ ಉಳಸ ಜವಾಬ್ದಾರಿ ತಂಗ್ಳದ್ದೆಲ್ಲ ಇದ್ದು ಹೇಳಿ ಪ್ರತಿಯೊಬ್ಬ ಹವ್ಯಕರಿಗೂ ಮನವರಿಕೆ ಆಗವು. ಭಾಷೆ ಬಗ್ಗೆ ಹೆಮ್ಮೆ ಇರವು.

✣ ✣ ✣



ಎಂ.ಎ. ಭಟ್ಟ (ಶ್ರೀಮಿತ್ತೂರು)
ನಿವೃತ್ತ ಶಿಕ್ಷಕ. C/o ಡಾ|| ಉದಯಕುಮಾರ
ಶುಭೋದಯ ಕ್ಲಿನಿಕ್ ಎಸ್.ಎಂ. ರಸ್ತೆ ಜಾಲಹಳ್ಳಿ
(ಪಶ್ಚಿಮ) ಬೆಂಗಳೂರು–560 015
ದೂರವಾಣಿ : 080–28389371
(ಮೂಲತಃ ಬಂಟ್ವಾಳ ತಾಲೂಕಿನ ಮಿತ್ತೂರಿನೋರು)
78 ವರ್ಷ. ಪ್ರಕಟಿತ ಕೃತಿ : 15
ಹವಿಗನ್ನಡ ಕೃತಿ : 'ನನ್ನೂರ ಹಿರಿಯರು' ಕೃತಿಯಲ್ಲಿ 'ಕೆಂಪಜ್ಜಿ ಮತ್ತು ಬೆಳಿಯಜ್ಜಿ'

ಕತೆ. 'ಉತ್ತರಾಯಣ', 'ಮಧುರ ಬಂಧನ' ಕಾದಂಬರಿಗಳಲ್ಲಿ ಹವಿಗನ್ನಡ ಶಬ್ಧಗಳ ವಿಪುಲ ಪ್ರಯೋಗ.

❶ ಎನ್ನ ಅಜ್ಜಿಗೆ – ಅಬ್ಬೆಯ ಅಬ್ಬೆಗೆ – ಹವಿಗನ್ನಡ ಮತ್ತು ತುಳು ಭಾಷೆ ಬಿಟ್ಟರೆ ಬೇರೆ ಭಾಷೆ ಗೊಂತಿತ್ತಿಲ್ಲೆ. ಈ ಎರಡೂ ಭಾಷೆ ಗೊಂತಿಲ್ಲದೋರ ಹತ್ತರೆ ಮಾತಾಡಬೇಕಾಗಿ ಬಂದರೆ ಅವರದ್ದೇ ಆದ ಕನ್ನಡಲ್ಲಿ ಮಾತಾಡುತ್ತಿದ್ದವು. ಅದರಲ್ಲಿ ಶೇ. 90 ಶಬ್ದಂಗೊ ಹವಿಗನ್ನಡದ ಶಬ್ದಂಗಳೇ. ಆನು ಅಜ್ಜಿ ಮನೇಲಿ ಬೆಳೆದೋನು. ಸಣ್ಣಾದಿಪ್ಪಾಗ ಅಜ್ಜಿ ಎನಗೆ ಕತೆಗಳ ಹೇಳುತಿದ್ದವು. ಆಗ ಅಜ್ಜಿ ಸುಮಾರು ಸರ್ತಿ 'ಆನೇ ಯಾವಾಗಲೂ ಕತೆ ಹೇಳುತ್ತೆ, ನೀನು ಒಂದು ಸರ್ತಿಯೂ ಕತೆ ಹೇಳುತ್ತಿಲ್ಲೆ, ಇದೆಂತ ನಿನ್ನ ಬುದ್ಧಿ?'' ಹೇಳಿ ಪರೆಂಜಿಗೊಂಡಿತ್ತಿದ್ದವು. ಇದು ಎನ್ನ ಮನಸ್ಸಿಂಗೆ ನಾಟಿಹೋಗಿತ್ತು, ಹಾಂಗಾಗಿ 1941ರಲ್ಲಿ ಹೇಳಿ ನೆನಪು – ಹವಿಗನ್ನಡಲ್ಲಿ ಒಂದು ಸಣ್ಣ ಕತೆ ಬರೆದು ಅಜ್ಜಿಗೆ ಓದಿ ಹೇಳಿದೆ. ಅದೇ ''ಕೆಂಪಜ್ಜಿ ಮತ್ತು ಬೆಳಿಯಜ್ಜಿ'' ಕತೆ. ಕೆಲವು ವರ್ಷ ಕಳೆದ ಮೇಲೆ ಇದರ ರಜಾ ತಿದ್ದುಪಡಿ ಮಾಡಿ ಎನ್ನ ''ನನ್ನೂರ ಹಿರಿಯರು'' ಕೃತಿಯಲ್ಲಿ ಸೇರಿಸಿಗೊಂಡೆ. ಆಮೇಲೆ ಆನು ಶುದ್ಧ ಕನ್ನಡಲ್ಲಿ ಕೆಲವು ಕಾದಂಬರಿಗಳನ್ನು ನೂರಾರು ಕತೆಗಳನ್ನೂ ಬರೆದು ಪ್ರಕಟಪಡಿಸಿದ್ದರೂ ಹವಿಗನ್ನಡಲ್ಲಿ ಒಂದೇ ಒಂದು ಕಾದಂಬರಿಯಾಗಲಿ; ಕತೆಯಾಗಲಿ ಬರೆದಿದ್ದೆಲೆ ಕಾರಣ ಬರೆದರೆ ಪ್ರಕಟಿಸುವಂತೋರು ಆರು? ಈಗ ನಮ್ಮ ಜನಂಗೊಕ್ಕೆ ಓದುವ ಅಭ್ಯಾಸವೇ ಕಡಿಮೆ. ಹೀಂಗಿಪ್ಪಾಗ ಪೈಸೆ ಕೊಟ್ಟು ಪುಸ್ತಕ ತೆಕ್ಕೊಂಬೋರು ಆರು? ಹೆಚ್ಚಿನ ಜನಂಗೋ ಈಗಳೂ ಹಳ್ಳಿಗಳಲ್ಲೇ ಇಪ್ಪ ಕಾರಣ ಕೃಷಿ ಇತ್ಯಾದಿ ಒಂದಲ್ಲ ಒಂದು ಚಟುವಟಿಕೆಲಿ ಮುಳುಗಿಪ್ಪಾಗ ಅವಕ್ಕೆ ಓದುಲೆ ಪುರುಸೊತ್ತಾದರೂ ಎಲ್ಲಿದ್ದು? ಹಾಂಗಾಗಿ ಹವಿಗನ್ನಡಲ್ಲಿ ಕೃಷಿ ಮಾಡದಿಪ್ಪಲೆ ಎನಗೆ, ಕೊಂಡು ಓದುವೋರ ಅಭಾವವೇ ಮುಖ್ಯ ಕಾರಣ ಆತು. ಇಂದಿಗೂ ಆರಾದರೂ ಹವಿಗನ್ನಡಲ್ಲಿ ಬರೆದು ಕೊಡಿ, ಆನು ಪ್ರಕಟ ಪಡಿಸುತ್ತೇಳಿ ಹೇಳಿದರೆ ಹದಿನೈದು ದಿನಂಗಳಲ್ಲಿ 100–150 ಪುಟಗಳ ಕಾದಂಬರಿ ಬರೆದು ಹಾಕುವೆ. ಆರಿದ್ದವು ಹೇಳಿ? ಇಂತಹ ಸ್ಥಿತಿಲಿ ಹವಿಗನ್ನಡಲ್ಲಿ ಪುಸ್ತಕ ಹೊರಬಪ್ಪದಾದರೂ ಹೇಂಗೆ? ನಿಂಗಳೇ ಹೇಳಿ.

ಶುರುವಿನ ದಿನಂಗಳಲ್ಲಿ ಪ್ರಕಟವಾದ ಎನ್ನ ''ಉತ್ತರಾಯಣ'' ''ಮಧುರ ಬಂಧನ'' ಮೊದಲಾದ ಕಾದಂಬರಿಗಳಲ್ಲಿ ಹೆಚ್ಚು ಶಬ್ದಂಗೊ ಹವಿಗನ್ನಡ

ಶಬ್ದಂಗಳೇ. ಪ್ರಸಿದ್ಧ ವಿಮರ್ಶಕರಾದ ಶ್ರೀ ಎಸ್.ಎಲ್. ಶೇಷಗಿರಿರಾಯರು ಎನ್ನ ಕಾದಂಬರಿಗಳ ವಿಮರ್ಶೆ ಮಾಡುತ್ತಾ "ಭಟ್ಟರ ಕಾದಂಬರಿಗಳಲ್ಲಿ ಹವ್ಯಕ ಭಾಷೆಯ ಶಬ್ಧಗಳು ವಿಪುಲವಾಗಿ ತುಂಬಿಕೊಂಡಿವೆ. ಕನ್ನಡ ಸಾಹಿತ್ಯ ಪರಿಷತ್ತು ಶಬ್ಧಕೋಶ ತಯಾರಿಸುವಾಗ ಇವುಗಳಿಂದ ಪ್ರಯೋಜನ ಪಡೆದುಕೊಳ್ಳಬಹುದು" ಹೇಳಿ ಬೆಂಗಳೂರಿನ ದೈನಿಕವೊಂದರಲ್ಲಿ ಬರೆದಿದ್ದರು.

ಒಟ್ಟಾರೆ ಹವ್ಯಕರು ಮನಸ್ಸು ಮಾಡಿದರೆ, ಪ್ರೋತ್ಸಾಹ ಕೊಟ್ಟರೆ ಹವಿಗನ್ನಡಲ್ಲಿ ಬೇಕಾದಷ್ಟು ಪುಸ್ತಕಂಗೋ ಹೊರಬಕ್ಕು. ಆದರೆ ಪುಚ್ಚೆಯ ಕೊರಳಿಂಗೆ ಗಂಟೆ ಕಟ್ಟೋರು ಆರು? ಪೈಸೆ ಬಿಟ್ಟೋರು ಎಲ್ಲಿದ್ದವು? "ಬೋದ್ಧಾರೋ ಮತ್ಸರಗ್ರಸ್ತಾಃ ವಿಷಯ ಸ್ಮಯದೂಷಿತಾಃ? ಅಬೋಧೋಽ ಪಹತಾಶ್ಚಾನ್ಯೇ ಜೀರ್ಣಮಂಗೇ ಸುಭಾಷಿತಂ||" ತಿಳಿದವಕ್ಕೆ ಮತ್ಸರ ಬಿಡುತ್ತಿಲ್ಲೆ. ಉಳಿದವಕ್ಕೆ ಏನೂ ಗೊಂತಿಲ್ಲೆ. ಅಂತೂ ಇಂತೂ ಒಳ್ಳೆಯ ಮಾತು ಸಾಹಿತ್ಯ ಹೊರಬರುತ್ತಿಲ್ಲೆ. ಎಷ್ಟು ಸತ್ಯ!

❷ ಹವಿಗನ್ನಡ ಹವ್ಯಕರ ಸಂಸ್ಕೃತಿ ಆಚಾರ ವಿಚಾರ ಬಿಂಬಿಸುವ ಒಂದು ಚೆಂದದ, ಮಧುರವಾದ ಮತ್ತೆ ಮೃದುವಾದ ಭಾಷೆ. ಭಾಷೆ ಮನುಷ್ಯನ ಭಾವನೆ, ಅಭಿಪ್ರಾಯ ತಿಳಿಸುವ ಒಂದು ಸಾಧನ, ಮಾಧ್ಯಮ. ಈ ಮಾಧ್ಯಮ ವ್ಯಕ್ತಿಯ ಸ್ವಭಾವ, ಸಂಸ್ಕಾರವ ಹೊಂಗೊಂಡಿಪ್ಪ ಕಾರಣ ವ್ಯಕ್ತಿಯ ಬದುಕು, ವಾತಾವರಣ, ಸ್ವಭಾವ ಮತ್ತೆ ಸಂಸ್ಕಾರ ಬದಲಾದ ಹಾಂಗೆ ಭಾಷೆಯ ಶೈಲಿ, ಹೊಸ ಹೊಸ ಶಬ್ದಂಗಳ ಸೇರ್ಪಡೆ ಹಳೆ ಶಬ್ದಂಗಳ ಕಣ್ಮರೆ ಇತ್ಯಾದಿ ನಡೆಯುತ್ತಲೇ ಇರುತ್ತು. ಇಂದು ಹವಿಗನ್ನಡದ ಅನೇಕ ಭಾವಪೂರ್ಣ, ಸುಂದರ ಶಬ್ದಂಗೊ ಮಾಯವಾಗಿ ಹೋಯಿದವು. ಈಗ ಅಪ್ಪಚ್ಚಿ (ಚಿಕ್ಕಪ್ಪ) ಅಪ್ಪಚ್ಚಿಯಾಗಿ ಹೋಯಿದ. ಅವನ ಹೆಂಡತ್ತಿ ಚಿಕ್ಕಿ (ಕಿರಿಯಬ್ಬೆ) ಹೊರಟುಹೋಗಿ ಕೆಲವು ದಶಕಗಳೇ ಕಳೆದು ಹೋದವು. ಇದೊಂದು ಸಣ್ಣ ಉದಾಹರಣೆಯಷ್ಟೆ.

ಇನ್ನು, ಒಂದು ಭಾಷೆ ಮಾತಾಡುವೋರ ಸಂಖ್ಯೆ ಕಡಮ್ಮೆ ಆವುತ್ತಾ ಬಂದ ಹಾಂಗೆ, ಅಖೇರಿಗೆ ಆಭಾಷೆಯೇ ಸತ್ತುಹೋವುತ್ತು. ಕರ್ನಾಟಕದ ಮಲೆನಾಡಲ್ಲಿ ಒಂದು ದಿಕ್ಕೆ ಬರೇ 63 ಜನ ಮಾತ್ನಾಡುವ ಒಂದು ಭಾಷೆ ಇದ್ದಡ. ಇನ್ನದಕ್ಕೆ ದೇವರ ಪಾದವೇ ಗತಿ.

ಪ್ರಪಂಚದಲ್ಲಿ ಪ್ರತಿವರ್ಷ ನೂರಾರು ಭಾಷೆಗೊ ಈ ಕಾರಣಂದಲೇ ಸತ್ತು ಹೋವುತ್ತವು. ಇನ್ನೂ ಕೆಲವೇ ವರ್ಷಂಗಳಲ್ಲಿ ನಮ್ಮ ಹವಿಗನ್ನಡಕ್ಕೂ ಇದೇ ಸ್ಥಿತಿ ಬಂದೊದಗಿದರೆ ಬೇಜಾರ ಮಾಡೆಕ್ಕಾಗಿಲ್ಲೆ. ಆಶ್ಚರ್ಯ ಆಯೆಕ್ಕಾಗಿಲ್ಲೆ. ನಮ್ಮ ಹಿರಿಯೋರು ಹಳ್ಳಿಗಳಲ್ಲಿ, ಮಲೆನಾಡುಗಳಲ್ಲಿ ವಾಸಮಾಡಿಕೊಂಡಿದ್ದೋರು. ಇಂದಿಗೂ ತುಂಬಾ ಜನಂಗೊ ಹಳ್ಳಿಗಳಲ್ಲಿಯೇ ಇದ್ದವಲ್ಲದೋ. ಆದರೆ ಉದ್ಯೋಗ, ವ್ಯಾಪಾರ, ಸಂಪರ್ಕ, ಸಂಬಂಧ, ನಗರವಾಸ, ದೇಶಾಂತರ ಕಾರಣಗಳಿಂದ ಹವಿಗನ್ನಡ ಮಾತನಾಡುವೋರ ಸಂಖ್ಯೆ ಭಾರೀ ಕಡಮ್ಮೆ ಆವುತ್ತಾ ಬತ್ತು ಹೇಳ್ಳೆ ತುಂಬಾ ದುಃಖ ಆವುತ್ತು. ಇದೊಂದು ನಮ್ಮ ಮುಂದೆ ಇಪ್ಪ ಗಂಭೀರ ಸಮಸ್ಯೆ. ಚಿಂತನೀಯ ವಿಚಾರ. ನಮ್ಮಲ್ಲಿ ಜಾತಿಯ ಅಭಿಮಾನ (ದುರಹಂಕಾರ ಅಲ್ಲ) ಆತ್ಮಗೌರವ ಪ್ರಜ್ಞೆ ರಜ ಕಡಮ್ಮೆ. ಹತ್ತು ಜನ ಕನ್ನಡಿಗರಿಂಗೋ ಸೇರಿದ್ದಲ್ಲಿ ಇಬ್ರು ಹವ್ಯಕರಿದ್ದರೆ ಆ ಇಬ್ರೂ ಹವಿಗನ್ನಡಲ್ಲಿ ಮಾತಾಡುತ್ತಲ್ಲೆ. ನಾಚಿಕೆ ಆವುತ್ತು. ಆನೊಂದು ಸರ್ತಿ ಹವಿಗನ್ನಡ ಗೊಂತಿಲ್ಲದ ಹತ್ತು ಜನ ಆಢ್ಯಂಗೊ ಸೇರಿಕೊಂಡಿದ್ದ ಒಂದು ಕೂಟದಲ್ಲಿದ್ದ ಎನ್ನ ಒಬ್ಬ ಸಂಬಂಧಿಕನ ಹತ್ತರೆ ಹವಿಗನ್ನಡಲ್ಲಿ ಮಾತಾಡಿದ್ದಕ್ಕೆ ಅವ ಬಳಕೆಯ ಕನ್ನಡಲ್ಲೇ ಮಾತಾಡಿದ. ಅಷ್ಟು ಮಾತ್ರ ಅಲ್ಲ. ಹೆರಬಂದ ಮೇಲೆ 'ನೀನು ಅವರ ಎದ್ರು ನಮ್ಮ ಭಾಷೆಲಿ ಮಾತಾಡಿದ್ದು ಆತಿಲ್ಲೇ'ಳಿಯೂ ಹೇಳಿದ. ಇದು ನಮ್ಮ ನಿರಭಿಮಾನವ ತೋರಿಸುತ್ತಲ್ಲದೋ? ಕೊಂಕಣಿಯೊಬ್ಬ ತನ್ನ ಮುಂದೆ ಆರೇ ಇರಲಿ. ಇನ್ನೊಬ್ಬ ಕೊಂಕಣಿ ಹತ್ತರೆ ಕೊಂಕಣಿ ಭಾಷೆಲೇ ಮಾತಾಡುತ್ತ. ನೋಡಿ ಅವರ ಭಾಷಾಭಿಮಾನ! ನಮ್ಮಲ್ಲಿ ಏಕೆ ಈ ಭಾಷಾಭಿಮಾನ ಇಲ್ಲೆ?

ಬೇರೆ ಪಂಗಡದ ಕೂಸುಗಳ (ಶಿವಳ್ಳಿ ಇತ್ಯಾದಿ) ನಮ್ಮ ಮಾಣಿಯಂಗೋ ಮದುವೆಯಾದರೆ ಅವಕ್ಕೆ ನಮ್ಮ ಭಾಷೆಯ ಕಲಿಶುವ ಬದಲು ಅವರ ಭಾಷೆಯನ್ನೇ ಕಲಿಯುತ್ತವು. ಹಾಂ, ಈಗ ಮುಖ್ಯ ವಿಚಾರಕ್ಕೆ ಬಪ್ಪೊ.

''ಹವಿಗನ್ನಡ ಉಳ್ಸಿ ಬೆಳ್ಸೂಲೆ ಏನ್ಮಾಡಕ್ಕು'' ಹೇಳ್ವದು ನಮ್ಮ ಮುಂದೆ ಇಪ್ಪ ಪ್ರಶ್ನೆ. ಇದಕ್ಕೆ ತುಂಬ ಉಪಾಯಂಗಳ, ದಾರಿಗಳ ತೋರ್ಸಿ ಕೊಡ್ಲಕ್ಕು. ಆದರೆ ಮುಖ್ಯವಾಗಿ 3–4 ದಾರಿಗಳ ಮಾತ್ರ ಇಲ್ಲಿ ತೋರ್ಸಿಕೊಡ್ಲೆ ಪ್ರಯತ್ನಿಸುತ್ತೆ. ಒಂದು: ನಮ್ಮೋರು ನಮ್ಮೋರ ಹತ್ರೆ ಹವಿಗನ್ನಡಲ್ಲೇ ಮಾತಾಡೆಕ್ಕು. ಎಲ್ಲೇ ಇರಲಿ. ಹೇಂಗೆ

ಬೇಕಾದ್ರೂ ಇರಲಿ. ಎರಡು : ಹವಿಗನ್ನಡಲ್ಲಿ 75–80 ಪುಟಂಗಳ ಸುಧಾ, ತರಂಗದ ರೀತಿಲಿ ಒಂದು ವಾರಪತ್ರಿಕೆ ಹೊರಡ್ಸೆಕ್ಕು. ಕಡೇ ಪಕ್ಷ ಮಾಸಿಕವಾಗಿ ಯಾದ್ರೂ ಹೊರಬರ್ಲಿ. ಪ್ರತಿಯೊಂದು ಹವ್ಯಕ ಕುಟುಂಬ ಇದರ ಚಂದಾದಾರ ಆಯೆಕ್ಕು. ನಮ್ಮಲ್ಲಿ ಸಮರ್ಥ ಸಂಪಾದಕರಿಂಗೆ ಕೊರತೆ ಇಲ್ಲೆ. ಪ್ರತಿಭಾ ಸಂಪನ್ನ ರಾದ ಈಶ್ವರದೈತೋಟ, ವಿಶ್ವೇಶ್ವರ ಭಟ್ಟರಂತೋರು ಬೇರೆಯೋರಿಂಗೆ ತಮ್ಮ ಪ್ರತಿಭೆಯ ಧಾರೆ ಎರೆಯುತ್ತಾ ಇದ್ದವು. ರಜಾ ಕಷ್ಟಾದರೂ ದಾನಿಗಳಿಂದ, ಚಂದಾ ದಾರರಿಂದ ಹಣ ಸಂಗ್ರಹಿಸಲಕ್ಕು. ಸುಳ್ಯದಲ್ಲಿ ನಡೆದ ಪ್ರಥಮ ಹವ್ಯಕ ಸಾಹಿತಿಗಳ ಸಮ್ಮೇಳನಲ್ಲಿ (2002) ಆನು ಇದರ ಪ್ರಸ್ತಾಪ ಮಾಡಿದ್ದೆ. ಹತ್ತು ಸಾವಿರ ದೇಣಿಗೆ ಕೂಡ್ಲೆ ಕೊಡುತ್ತೇಳಿ ಹೇಳಿದ್ದೆ. ಆರೂ ಮುಂದೆ ಬಂದವಿಲ್ಲೆ. ಬಹುಶಃ ಪೈಸೆ ಬಿಚ್ಚುಲೆ ನಮ್ಮೋರು ಹಿಂದೆ ಮುಂದೆ ನೋಡುತ್ತವು ಹೇಳುವ ಕಾರಣ ಇಪ್ಪಲೂ ಸಾಕು. ಹೋಗಲಿ ಬಿಡಿ. ಪ್ರಾಯ ಅಡ್ಡ ಬಾರದಿದ್ದರೆ ಆನೇ ಈ ಕೆಲ್ಸ ಮಾಡುತ್ತಿದ್ದೆ. ಈ ಯೋಜನೆಯಿಂದ ಇನ್ನೊಂದು ಪ್ರಯೋಜನ ಹೇಳಿದರೆ ಇಂದು ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹವ್ಯಕರು ಮಾತಾಡುವ ಹವಿಗನ್ನಡಲ್ಲಿಪ್ಪ ವ್ಯತ್ಯಾಸ ಕಡಮೆಯಾಗಿ ಅದಕ್ಕೊಂದು ಏಕರೂಪತೆ ಬಪ್ಪಲೆ ಸಾಧ್ಯ ಇದ್ದು. ಇನ್ನು ಮೂರನೆಯದಾಗಿ ಹವ್ಯಕ ಸಾಹಿತಿಗಳ ಕೃತಿಗಳ ಲಿಂಗ, ಪ್ರಾಯ, ಪ್ರಾಂತಗಳ ತಾರತಮ್ಯ ಇಲ್ಲದೆ ಹವಿಗನ್ನಡಲ್ಲಿ ಪ್ರಕಟಪಡಿಸುಲೆ ಒಂದು ಪ್ರಕಾಶನ ಸಂಸ್ಥೆ ಬೇಕು.

ಇನ್ನು ಕೊನೆಯದಾಗಿ ನಮ್ಮ ಕೂಸುಗೊ, ಮಾಣಿಯಂಗೋ ಬೇರೆ ಜಾತಿಯೋರ ಮದುವೆ ಅಪ್ಪಲೆ ಮನಸ್ಸು ಮಾಡುಲಾಗ. ನಮ್ಮೊಳಗಿನ ಪತ್ರ ವ್ಯವಹಾರ ಇನ್ನು ಮುಂದೆ ಹವಿಗನ್ನಡಲ್ಲೇ ಇರಲಿ.

ಇನ್ನು ಮುಗಿಸುವ ಮೊದಲು, ಇಷ್ಟರ ಮಟ್ಟಿಗೆ ಆರ ಗಮನಕ್ಕೂ ಬಾರದೆ ತನ್ನ ಪಾಡಿಂಗೆ ದುರ್ಬಲವಾಗುತ್ತಾ ಬಪ್ಪ ಹವಿಗನ್ನಡಕ್ಕೊಂದು ಚೇತನ ಶಕ್ತಿ ಕೊಡುತ್ತಿಪ್ಪ ''ಹವ್ಯಕ ಅಧ್ಯಯನ ಕೇಂದ್ರ''ದ ಪ್ರಧಾನ ನಿರ್ದೇಶಕರಾದ ಶ್ರೀ ನಾರಾಯಣ ಶಾನಭಾಗಂಗೊಕ್ಕೆ ಹವ್ಯಕರಾದ ನಾವೆಲ್ಲರೂ ಕೃತಜ್ಞರಾಗಿ ಇರೆಕ್ಕು. ಅವರ ಸಾಹಸಕ್ಕೆ ಶುಭವಾಗಲಿ.

✤ ✤ ✤

ಡಾ। ಸಬಿತಾ ಮರಕಿಣಿ "ಮಾನಸ"
272/15 ಆದರ್ಶನಗರ, ಅರಶಿನ ಕುಂಟೆ
ನೆಲಮಂಗಲ, ಬೆಂಗಳೂರು–562 123
ದೂರವಾಣಿ : 080–7725563
(ಮೂಲತಃ ಬಂಟ್ವಾಳ ತಾಲೂಕಿನ ಮರಕ್ಕಿಣಿ ಗ್ರಾಮದೋರು)
72 ವರ್ಷ. ಪ್ರಕಟಿತ ಕೃತಿ : 5

ಹವಿಗನ್ನಡ ಕೃತಿಗಳು :

1. ಮುಗಿಲು ಬಿರಿಯಿತು : ಕಿರು ಕಾದಂಬರಿಗಳು : 2005 ಪು: 180
2. ಪಾಮಕ್ಕನ ಸಂಸಾರ : ಕಾದಂಬರಿ 2005 ಪು : 184

ಹಿರಿಮೆ : ಪ್ರಪ್ರಥಮ ಹವಿಗನ್ನಡ ಕಾದಂಬರಿ ಕಾರ್ತಿ

❶ ಇದಕ್ಕೆ ಮದಲಾಣ ಕಾರಣ ಆನು ಹವ್ಯಕಳಾಗಿ ಹುಟ್ಟಿದ್ದು. ಹವ್ಯಕ ಭಾಷೆಯೇ ಎನ್ನ ಮಾತೃ ಭಾಷೆ ಆದ ಕಾರಣ ಆನೆಂತಕೆ ಈ ಭಾಷೆಲಿಯೇ ಬರವಣಿಗೆಯ ಸುರುಮಾಡ್ಯಾಗ ಹೇಳಿ ಕಂಡತ್ತು. ಹವ್ಯಕ ಭಾಷೇಲಿ ಅಪಾರ ಶಬ್ದ ಭಂಡಾರ ಇದ್ದು, ಸಾಹಿತ್ಯಕ ಮೌಲ್ಯವೂ ಇದ್ದು, ಉತ್ತಮ ಗಾದೆಗೊ ಉಪಮೆಗೊ, ಉಪಮಾನಂಗಳೂ ಇದ್ದು. ಸುಸಂಸ್ಕೃತ ಆಡು ಭಾಷೆಯಾಗಿಯೇ ಇಷ್ಟರವರೆಗೂ ಮುಂದುವರಿಕ್ಕೊಂಡು ಬಂದು ಒಂದು ಆಶ್ಚರ್ಯದ ಸಂಗತಿಯೇ ಆಯಿದು. ಈ ಭಾಷೆಲಿಯೇ ಬರವಣಿಗೆಯ ತೊಡಗಿದರೆ ಅದೊಂದು ಶ್ರೇಷ್ಠ ಕನ್ನಡದ ಉಪಭಾಷೆಯಕ್ಕು ಹೇಳಿಯೇ ಎನ್ನ ನಂಬಿಕೆ.

ಈ ಹವ್ಯಕ ಭಾಷೆಯ ಬೇರೆ ಬೇರೆ ಸೀಮೆಲಿ ಬೇರೆ ಬೇರೆ ರೀತಿಲಿ ಮಾತಾಡಿದರೂ ಎಲ್ಲಾ ಕಡೆಯ ಭಾಷೆಗೂ ಸಾಮ್ಯತೆ ಕಾಣುತ್ತು. ಉದಾಹರಣೆಗೆ ಕುಂಬ್ಳೆ ಸೀಮೆ ಭಾಷೆಲಿ ಹೇರಳ ಮಲ್ಯಾಳ ಶಬ್ದಂಗೊ ಬೆರಕೆ ಆದರೆ ವಿಟ್ಲ ಸೀಮೆಯ ಭಾಷೆಗೆ ತುಳು ಭಾಷೆಯ ಮಿಶ್ರಣ ಸಾಕಷ್ಟಿದ್ದು. ಹಾಂಗೇ ಪಂಜ ಸೀಮೆ ಭಾಷೆಯೂ ವಿಭಿನ್ನವಾಗಿ ಕಾಣುತ್ತು. ಉತ್ತರದ ಸಾಗರ ಹೊನ್ನಾವರ ಕಡೆಯ ಭಾಷೆಲಿ

ರಜಾ ರಜಾ ಮರಾಠಿ, ಹಾಲಕ್ಕಿ ಗೌಡರ ಭಾಷೆಗಳ ಒತ್ರೂ ಕಾಣುತ್ತು ಹೇಂಗಿದ್ದರೂ ಮೂಲ ಭಾಷೆಯ ಸೊಬಗು ಹಾಂಗೇ ಇದ್ದು. ಹವ್ಯಕರ ಆಚಾರ ವಿಚಾರ, ಸಂಸ್ಕಾರ, ಸಂಸ್ಕೃತಿಗೊಕ್ಕೆ ಸಾಮ್ಯತೆ ತುಂಬಾ ಕಾಣುತ್ತು, ಬರವಣಿಗೆಲಿ ಅಳವಡಿಸಲೆ ಕಷ್ಟ ಆವುತ್ತಿಲ್ಲೆ

ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಲಭ್ಯ ಸಿಕ್ಕಿದ ಮತ್ತೆ ಕೃಷಿಕರಾಗಿದ್ದ ಹವಿಕರು, ಕೆಲಸ ಹುಡುಕ್ಕೊಂಡು ಬೇರೆ ಬೇರೆ ಪ್ರಾಂತ್ಯಕ್ಕೆ ವಲಸೆ ಹೋಪಲೆ ಸುರು ಮಾಡಿದವು, ಅಂತರ್ಜಾತಿಯ ವಿವಾಹವನ್ನು ಆವುತ್ತವು. ಊರ ಭಾಷೆಯನ್ನು ಮರೆಯುತ್ತಾ ಬಂದು ಅವರ ಮಕ್ಕೊ, ಮೊಮ್ಮಕ್ಕೊ ಎಲ್ಲಾ ಹಿಂದಿಯನ್ನೋ, ಮರಾಠಿಯನ್ನೋ, ಗುಜರಾತಿಯನ್ನೋ ಮಾತೃಭಾಷೆ ಆಗಿ ಕಲಿವಲೆ ಸುರುಮಾಡಿದವು. ಇದು ಹೀಂಗೇ ಮುಂದುವರಿದರೆ ಮುಂದೆ 'ಹವಿಗನ್ನಡ' ಹೇಳುವ ಭಾಷೆಯೇ ತನ್ನ ಅಸ್ಥಿತ್ವ ಕಳಕೊಂಬ ಸಾಧ್ಯತೆ ಇದ್ದು.

❷ ನಾವು ಈಗಳೇ ಎಚ್ಚತ್ತು ಹವಿಗನ್ನಡದ ಉಳಿವಿಗಾಗಿ ಬರವಣಿಗೆಗಳ ಕೈಗೆತ್ತಿಕೊಳ್ಳೇಕು; ಕತೆ, ಪದ್ಯ, ಕವನಂಗಳ ಬರವಲೆ ಸುರುಮಾಡೇಕು. ಬರದ್ದರ ಪ್ರಕಟಿಸುವ ವ್ಯವಸ್ಥೆ ಓದುಗರಿಂಗೆ ತಲುರಿಸುವ ವ್ಯವಸ್ಥೆ ಆಯೇಕು

ಅಂಬಾಗಂಬಾಗ 'ಹವಿಗನ್ನಡ'ದ ಚರ್ಚಾಕೂಟರಿಗಳ ಏರ್ಪಡಿಸೇಕು. ಬರವಣಿಗೆಗಳ ವಿಮರ್ಶೆ ಆಯೇಕು ಹವಿಗನ್ನಡದ ಸಂಶೋಧನೆಯೂ ಆಯೇಕು. ಕ್ಲಿಷ್ಟ ಪದಗಳ ಹುಡುಕ್ಕಿ, ಬರವಣಿಗೆಗೆ ಅಳವಡಿಸೇಕು. ಕೆಲವು ಶಬ್ದಂಗಳ ಮೂಲ, ಅಪಭ್ರಂಶವ ಕಂಡು ಹಿಡಿಯೇಕು, ಹೀಂಗೆ ಸಾಧನೆ ಮಾಡಿದರೆ, ಮುಂದೆರಡು ದಶಕಲ್ಲಿ ಹವಿಗನ್ನಡವೂ ಒಂದು ಕನ್ನಡದ ಪ್ರಮುಖ ಉಪ ಭಾಷೆ ಅಕ್ಕು ಹೇಳಿಯೇ ಎನ್ನ ಅಭಿಪ್ರಾಯ.

''ಹವಿಗನ್ನಡ ಸವಿಗನ್ನಡ ಆಗಲಿ
ಎಲ್ಲೋರೂ ಸವಿವ ಹಾಂಗಾಗಲಿ' ಹೇಳಿ ಎನ್ನ ಆಶಯ.

✣ ✣ ✣

ಮಹಾದೇವ ಹೆಗಡೆ ಮತ್ತಳ್ಳಿ
ಅಂಚೆ ಕೋಡಂಬಳೆ ಕುಮಟಾ, ಉತ್ತರ ಕನ್ನಡ–581 444
ದೂರವಾಣಿ : 08386–264523
67 ವರ್ಷ. ಕೃಷಿಕ
ಪ್ರಕಟಿತ ಕೃತಿ : 6

ಹವಿಗನ್ನಡ ಕೃತಿ :

1. ಯೋಚ್ನೆ : ಕವನ ಸಂಕಲನ 1985 ಪು : 44
2. ಹೊತ್ಮೂಡ್ತು ಮೂಡ್ಲಲ್ಲಿ : ಕವನ ಸಂಕಲನ 1987 ಪು:54

❶ ಆಡ್ಮಾತಲ್ಲೇ ಬರೆದ್ರೆ ಭಾವ್ನೆ ವ್ಯಕ್ತ ಮಾಡೂಲೆ ಅನುಕೂಲ ಆಗ್ತು ಕೃತ್ರಿಮ್ತೆ ಇರ್ತಿಲ್ಲೆ ಹೇಳಿ ಕವಿತೆ ಬರ್ದೆ. ನಮ್ಮವ್ಕೋ ಓದೂದ್ಕಷ್ಟ. ತಿಳ್ಕಂಬೂದ್ಕಷ್ಟ. ಇಷ್ಟ ಇದ್ದಾಂಗಿಲ್ಲೆ ಹೇಳಿ ಬರೂದ್ಕಡ್ಮೆ ಮಾಡ್ದೆ. ಬೇರೆ ರೀತಿಲಿ ಬರದ್ರೂ ಅದ್ರಲ್ಲೂ ಹ್ಯೆಗದ ಛಾಪು ಬಂತು. ಅದೂ ಬಿಟ್ಟು ಈಗ ಆರಾಮಿದ್ದೆ ಅಷ್ಟಕ್ಕೂ ನಂದು ಬರ್ಕಂಡಿಪ್ಪ ಬದ್ಕಲ್ಲ.

❷ ಕನ್ನಡ ಹೇಳೂ ಅಡ್ಕೇಲಿ ಹ್ಯೆಗನ್ನಡ ಎಷ್ಟು ಸಣ್ಣ ಚೂರು. ಅದ್ರಲ್ಲೂ ಊರು ಸೀಮೆ ಮಾತ್ನಲ್ಲೆ ಫರಕ್ಕು ಬಹಳಿಪ್ಪಾಗ? ಹಳಗನ್ನಡ ಓದೂದ್ಕಿಂತ ಹ್ಯೆಗನ್ನಡ ಓದೂದ್ಕಷ್ಟ. ಮನೇಲಿದ್ದವ್ಕೆ ಹೆಣ್ಣೇ ಕೊಡೋವ್ರಿಲ್ಲೆ. ವಿದುರರ ರಾಜ್ಯದಲ್ಲಿ ಹುಟ್ರೂ ಮಕ್ಕಳೂ ಇಲ್ಲೆ. ಒಂದೇ ಸಮ ಜನ–ಮನೆ ಸಂಖ್ಯೆ ಕಡ್ಮೆಯಾಗ್ತಿದ್ದು. ಜೀವನಾಂಶಕ್ಕೆ ಬೇರ್ಬೇರೆ ಪಾಂಡಿತ್ಯ ಪಡ್ಕಂಬೂ ಅವಶ್ಯಕತೆ ಬಹಳ ಹೆಚ್ಚಿದ್ದು. ಇನ್ನು ಕೆಲವೇ ವರ್ಷಗಳಲ್ಲಿ ಸವಿಗನ್ನಡ ಅದ್ರಲ್ಲೂ ಹವ್ಯಕರೇ ಅಸ್ತಿತ್ವ ಕಳ್ಕಂಬೂ ವ್ಯವಸ್ಥೆ(ಅವಸ್ಥೆ) ಉದ್ಭವಾಗ್ತಿಪ್ಪ ಸದ್ಯದ ಸನ್ನಿವೇಶ್ದಲ್ಲಿ ಹ್ಯೆಗನ್ನಡವನ್ನೂಳ್ಸೂದು, ಬೆಳ್ಸೋದು ಕಷ್ಟ (ಆದ್ರೂ ಪ್ರಯತ್ನ ಮಾಡೊ) ಅನ್ನಿಸ್ತಾ ಇದ್ದು.

ಇಷ್ಟಕ್ಕೂ ಸ್ವಂತದ್ಪಕ್ಕಕ್ಕಿಟ್ಟು ಹವ್ಯಕ ಭಾಷೆ, ಸಮ್ಮೇಲ್ನ ಅಂತ ಹವ್ಯಕ್ರ ಬಗ್ಗೆ ಕಳ್ಕಳಿ ಇಟ್ಕಂಡು ಕಷ್ಟ ಪಡ್ತಿಪ್ಪೋರ ಬಗ್ಗೆ ನಂಗೆ ತುಂಬಾ ಹೆಮ್ಮೆ ಅನಸ್ತು.

✣ ✣ ✣



ಕಲ್ಲೂರು ಶಂಭು ಅನಂತ
ಪೋಸ್ಟ್ ಮಾಸ್ಟರ ಹೊನ್ನಾಳಿ ಶಿವಮೊಗ್ಗ
ಚರವಾಣಿ : 94494–26965
(ಮೂಲತಃ ಹೊಸನಗರ ತಾಲೂಕಿನ ನಿಟ್ಟೂರಿನೋರು)
52 ವರ್ಷ. ಪ್ರಕಟಿತ ಕೃತಿ :2

ಹವಿಗನ್ನಡ ಕೃತಿ : ಹವ್ಯಕ ಗೀತಾ : ಕವನ ಸಂಕಲನ 1985 ಪು: 40 ಈ ಕೃತೀಲಿದ್ದ ಅನೇಕ ಕವನಗಳ ಧ್ವನಿ ಸುರುಳಿ ಕೂಡಾ ಬಿಡುಗಡೆ ಆಜು.

❶ ನಾ ಎಂತಕ್ಕೆ ಹವಿಗನ್ನಡದಲ್ಲಿ ಬರೀತಾ ಇದ್ದಿ ಅನ್ನೋ ಪ್ರಶ್ನೆಗೆ ಎರಡು ಭಾಗದಲ್ಲಿ ಉತ್ತರ ಹೇಳಕ್ಕಾಗ್ತು. ಮೊದಲ್ನೇದು ನನಗೆ ಬರೆಯೋ ಹವ್ಯಾಸ ಇತ್ತು. ಎರಡ್ನೇದು ನನ್ನ ಮಾತೃಭಾಷೆ ಬಗ್ಗೆ ಅಂದ್ರೆ ನನ್ನ ಆಡುಮಾತಾದ ಹವಿಗನ್ನಡದ ಬಗ್ಗೆ ನನಗೆ ತಿರಸ್ಕಾರ ಇರ್ಲೆ. ಬದಲಿಗೆ ಗೌರವ ಇತ್ತು. ಅದ್ರಿಂದ ಹವಿಗನ್ನಡದಲ್ಲಿ ಕೆಲವನ್ನ ಬರ್ದಿ. ಬರೆಯೋ ಹವ್ಯಾಸ ಇರೋ ವ್ಯಕ್ತಿ ತನ್ನ ಮಾತೃಭಾಷೇಲಿ ಸಹಜವಾಗಿ ಏನನ್ನಾದ್ರೂ ಬರದೇ ಬರೀತ. ಬರಹಗಾರ ತನ್ನ ಮಾತೃಭಾಷೇಲಿ ಏನನ್ನೂ ಬರೀಲೆ ಅಂದ್ರೆ ಅವನಿಗೆ ತನ್ನ ಮಾತೃಭಾಷೆ ಬಗ್ಗೆ ತಿರಸ್ಕಾರ ಇತ್ತು ಅನ್ಲಕ್ಕು. ಇಲ್ಲೆ ಇನ್ನ್ಯಾವ್ದೋ ಬಲವಾದ ಕಾರಣ ಇರಕ್ಕು. ಯಾಕೆ ಬರ್ದಿ ಅನ್ನೋಕೆ ಸರಳವಾಗಿ ಹೇಳೋ ಉತ್ತರ ಇಷ್ಟೆ. ಈ ಸಂದರ್ಭದಾಗೆ ನಾನು ಹವಿಗನ್ನಡದಲ್ಲಿ ಬರೆಯಾಕೆ ಆರಂಭಿಸಿದ ಸನ್ನಿವೇಶದ ಬಗ್ಗೆ ಸ್ವಲ್ಪ ಪ್ರಸ್ತಾಪಿಸೋದು ಪ್ರಸ್ತುತ ಅಂತ ಭಾವಿಸ್ತಿ.

ಸುಮಾರು ಮೂವತ್ತು ವರ್ಷದ ಹಿಂದೆ ಹವ್ಯಕರಲ್ಲಿ ಆತ್ಮಾಭಿಮಾನ, ಆತ್ಮವಿಶ್ವಾಸಗಳ ಕೊರತೆ ತುಂಬಾ ಇತ್ತು. (ಈಗ ಪರಿಸ್ಥಿತಿ ಸ್ವಲ್ಪ ಸುಧಾರಿಸಿದ್ದು ಅನ್ಲಕ್ಕು) ಆಗ ಹವ್ಯಕರು ತಮ್ಮ ಮಾತೃಭಾಷೆ (ಹವಿಗನ್ನಡ) ಬಗ್ಗೆ ತೀರಾ ತಿರಸ್ಕಾರಭಾವ ಹೊಂದಿದ್ದ. ಹವಿಗನ್ನಡದ ಮಾತನ್ನ ಆಡಾಕೆ ಅಸಹ್ಯಪಟ್ತಿದ್ದ. ಏನಿದ್ರೂ ಹಳ್ಳೀಲಿ ತಮ್ಮ ತಮ್ಮ ಮನೇಲಿ ಆಡಾಕೆ ಮಾತ್ರ ಲಾಯಕ್ಕು ಅಂತ ತಿಳಕೊಂಡಿದ್ದ. ಕೆಲವರು ಮನೇಲು ಅದನ್ನ ಆಡೋಕೆ ಹಿಂಜರಿತಿದ್ದ. ಹವ್ಯಕರು ಅದನ್ನ ಒಂದು ಭಾಷೆ ಅಂತ ಒಪ್ತಿರ್ಲೆ. ಅದು ಅನಾಗರಿಕತೆಯ ಸಂಕೇತ. ಹಳ್ಳಿಯ ಗುಗ್ಗುತನದ ಪ್ರತೀಕ ಅನ್ನೋ ಭಾವನೆ ಇತ್ತು. ಅದ್ರಿಂದ ಆಗ ಅದನ್ನ ಹಳ್ಳಿ ಮಾತು

ಅಂತ ಕರೀತಿದ್ವೇ ವಿನಃ ಹವ್ಯಕಭಾಷೆ ಅಂತಾಗ್ಲಿ, ಹವಿಗನ್ನಡ ಅಂತಾಗ್ಲಿ ಕರೀತಿರ್ಲೆ. ಹವ್ಯಕರ ಈ ಹಿಂಜರಿಕೇನ ಕಂಡು ನನಗೆ ವಿಷಾದಾಗ್ತಿತ್ತು. ನನ್ನ ಸುತ್ತಮುತ್ತ ಹವ್ಯಕರಲ್ಲಿದ್ದ ಈ ಮನೋಭಾವನ ಬದಲಾಯಿಸೋದ್ಕೆ ಪ್ರಯತ್ನಪಟ್ಟೆ. ನಮ್ಮ ಭಾಷೆ ಯಾವ ರೀತಿಯಿಂದ್ಲೂ ಕೀಳಲ್ಲ ಭಾಷೇಲಿ ಮೇಲುಕೀಳು ಅನ್ನೋದು ಸರಿಯಲ್ಲ ಅಂತ ನನ್ನ ವಾದ ಮಂಡಿಸ್ದಿ. ಯಾವುದೇ ಸಮಾಜದ ಸಂಘಟನೆಗೆ ಭಾಷೆ ಒಂದು ಪ್ರಬಲ ಅಸ್ತ್ರ ಅಂತ ಹವ್ಯಕರಲ್ಲಿ ಜಾಗೃತಿ ಮೂಡಿಸೋದ್ಕೆ ಎಲ್ಲಾ ಶ್ರಮ ವಹಿಸ್ದಿ. ಹಾಡು, ನಾಟಕ, ಯಕ್ಷಗಾನ ಸಾಹಿತ್ಯ ಬರೆಯೋದು ನನ್ನ ಹವ್ಯಾಸ ಆಗಿತ್ತು. ಸಹಜವಾಗಿ ನನ್ನ ಆಡುಮಾತ್ನಲ್ಲೂ (ಹವಿಗನ್ನಡದಲ್ಲೂ) ನಾಟಕ ಹಾಗೂ ಹಾಡುಗಳನ್ನ ಆವಾಗ್ಲೆ ಬರೆದಿದ್ದಿ. ನಮ್ಮ ಭಾಷೆ ಕೀಳಲ್ಲ. ಅದರಲ್ಲೂ ಸಾಹಿತ್ಯ ಇರೋಕೆ ಸಾಧ್ಯ ಅಂತ ತೋರಿಸೋದ್ಕೆ ನನ್ನ ಸ್ನೇಹಿತರನ್ನ ಸೇರಿಸ್ಕೊಂಡು ನಾಟಕ ಮತ್ತು ಹಾಡುಗಳನ್ನ ವೇದಿಕೆಗೆ ತಂದಿ. ಹವ್ಯಕ ಭಾಷೆಯ ಹಾಡುಗಳನ್ನ ಹವ್ಯಕ ಗೀತೆ ಅಂತ ಪರಿಚಯಿಸ್ದಿ. ನಮ್ಮ ಭಾಷೇನ ಹವ್ಯಕ ಭಾಷೆ ಅಂತ ಕರ್ದಿ. ಹವ್ಯಕ ಸಮಾಜದ ಸಾಮಾನ್ಯ ವರ್ಗದಿಂದ ಒಳ್ಳೆಯ ಪ್ರತಿಕ್ರಿಯೆ ಬಂತು. ಹಾಡೋ ಹವ್ಯಾಸ ಇರೋರಿಂದ ಅಂಥಾ ಹಾಡಿಗೆ ಮೇಲಿಂದ ಮೇಲೆ ಬೇಡಿಕೆ ಬಂತು. ಮತ್ತಷ್ಟು ಹಾಡು ಬರ್ದಿ. ಆದರೆ ಹಾಡು ಕೈ ಬರಹದಿಂದ ಒಬ್ಬರಿಂದ ಒಬ್ಬರಿಗೆ ದಾಟಕ್ಕಿದ್ರೆ ರೂಪಾಂತರ ಆದ್ದು ನನ್ನ ಗಮನಕ್ಕೆ ಬಂತು. ಆಗ ಮಿತ್ರ ಬ.ಲ. ಸುರೇಶರ ಸಲಹೆ ಸಹಕಾರದ ಮೂಲಕ ಹವ್ಯಕಗೀತಾ ಅನ್ನೋ ಕವನಸಂಕಲನಾ ಹೊರತಂದಿ. ಆಗ ನಾನು ಸಾಗರದಲ್ಲಿದ್ದಿ. ಅಲ್ಲಿ ನನ್ನ ಕೆಲ ಮಿತ್ರರ ಜೊತೆ ಸೇರಿ ಗಾನತರಂಗ ಅನ್ನೋ ಹಾಡಿನ ತಂಡ ರೂಪಿಸ್ದಿ. ಹವ್ಯಕ ಹಾಡನ್ನ ಜನಕ್ಕೆ ತಲುಪ್ಸೋದೆ ತಂಡದ ಗುರಿ ಆಗಿತ್ತು. ಮಿತ್ರ ಪ್ರಕಾಶ ಹಳೇ ಇಕ್ಕೇರಿ, ಸೂರ್ಯ ನಾರಾಯಣ ಭಟ್ ಅಮಡೆ, ಶ್ರೀಕಾಂತ ಕಾಳಮಂಜೆ ಮುಂತಾದೋರ ಸಹಕಾರ ದಿಂದ ನೂರಾರು ಗಾಯನ ಕಾರ್ಯಕ್ರಮ ನೀಡಿದ್ದು ಆತು. ಆಕಾಶ ವಾಣೇಲಿ ಹವ್ಯಕ ಹಾಡಿನ ಪ್ರಸಾರಾನು ಆತು. ಭದ್ರಾವತಿ ಆಕಾಶವಾಣಿನಲ್ಲಿ ಹವ್ಯಕಗೀತೆ ಅನ್ನೋ ಒಂದು ವಿಭಾಗನೂ ಆತು. ನಂತರ ಧ್ವನಿ ಸುರುಳೀನೂ ಆತು.

❷ ಇಷ್ಟೆಲ್ಲಾ ಆದ್ರು ಹವ್ಯಕ ಜನಾಂಗದ ಸಾಮಾನ್ಯ ವರ್ಗ ಮಾತ್ರ ಇದನ್ನ

ಪ್ರೋತ್ಸಾಹಿಸ್ತೇ ವಿನಃ ಹವ್ಯಕ ಸಮಾಜದ ಗಣ್ಯರು, ಸಮಾಜದಲ್ಲಿ ಬುದ್ಧಿ ಜೀವಿಗಳು ಅಂತ ಗುರುತಿಸಿಕೊಂಡೋರು, ಪ್ರಮುಖರು ಇದನ್ನ ತೀರಾ ತಾತ್ಸಾರದಿಂದ್ಲೇ ಕಂಡ. ಕೆಲವರಿಗೆ ಬ್ರಾಹ್ಮಣ ಪರವಾಗಿದ್ದದ್ದು ಸಾಹಿತ್ಯಾನೆ ಅಲ್ಲ, ಕಲೆಯೂ ಅಲ್ಲ. ಬ್ರಾಹ್ಮಣರನ್ನ ಬೈದು ಬರದ್ರೆ ಮಾತ್ರ ಅದು ಸಾಹಿತ್ಯ. ಅಂಥಾದ್ರಲ್ಲಿ ಮಾತ್ರ ಮೌಲ್ಯ ಇರ್ತು. ವೈಚಾರಿಕತೆ ಇರ್ತು. ಯಾವ ಪ್ರತಿಭೆ ಇಲ್ಲದಿದ್ದವನೂ ಬ್ರಾಹ್ಮಣರನ್ನ ಟೀಕಿಸೋ ಒಂದು ನಾಟಕದಲ್ಲಿ ಒಂದು ಪಾತ್ರ ಮಾಡಿದ್ರೆ ಸಾಕು ಅವನನ್ನ ಮಹಾನ್ ಸಾಧಕನನ್ನಾಗಿ ಈ ಬ್ರಾಹ್ಮಣ ಸಮಾಜವೇ ಕಾಣ್ತು. ಇನ್ನು ಹೆಚ್ಚಿನ ಹವ್ಯಕ ಸಂಘಟನೆಗಳು ಕೂಡ ಗುರುತಿಸೋದು ಅಮೇರಿಕಾದಲ್ಲೋ ಇಂಗ್ಲೆಂಡಲ್ಲೋ ಇದ್ದೋರನ್ನ, ಇಲ್ಲ ಡಾಕ್ಟರೋ ಇಂಜಿನಿಯರೋ, ಐ.ಎ.ಎಸ್. ಐ.ಪಿ.ಎಸ್ಸೋ ಆಗಿದ್ದೋರನ್ನ ಅಥವಾ ಕನಿಷ್ಠ ಎಂಟೋ ಹತ್ತೋ ಎಕ್ರೆ ತೋಟ ಇದ್ದೋರನ್ನ. ಇದು ಬದಲಾದ್ರೆ ಮಾತ್ರ ಹವ್ಯಕರು ಉದ್ಧಾರ ಆಗ್ತ, ಹವ್ಯಕ (ಹವಿಗನ್ನಡ) ಭಾಷೇನೂ ಉದ್ಧಾರ ಆಗ್ತು. ಹವಿಗನ್ನಡದ ಬರಹಾನೂ ಮತ್ತಷ್ಟು ಬತ್ತು. ಅಂದ್ರೆ ಈಗ ಹವಿಗನ್ನಡದಲ್ಲಿ ಸಾಹಿತ್ಯ ಬತ್ತಾ ಇಲ್ಲೆ ಅಂತಲ್ಲ. ಕೇವಲ ಸಾಹಿತ್ಯ ಬರೋದ್ರಿಂದ ಪ್ರಯೋಜ್ನ ಇಲ್ಲೆ. ಆ ಸಾಹಿತ್ಯಾನ ಜನ ಸ್ವೀಕರಿಸಿದ್ರೆ ಮಾತ್ರ ಪ್ರಯೋಜ್ನ. ಜನ ಸ್ವೀಕರಿಸಿದಷ್ಟೂ ಹೆಚ್ಚು ಹೆಚ್ಚು ಸಾಹಿತ್ಯ ಬತ್ತು.

ನಾನೇನೂ ಹವಿಗನ್ನಡದಲ್ಲಿ ಬರೆಯೋದನ್ನ ನಿಲ್ಸಲ್ಲೆ. ಆದ್ರೆ ಬರೆದದ್ದನ್ನ ಜನರಿಗೆ ತಲುಪಿಸೋ ಚಟುವಟಿಕೆ (ಹಾಡುಗಾರರ ತಂಡದ ವ್ಯವಸ್ಥೆ ಧ್ವನಿಸುರುಳಿ ಬಿಡುಗಡೆ ಮುಂತಾದವು) ಕಡಿಮೆ ಆಯ್ದು ಅಷ್ಟೆ. ಅದಕ್ಕೆ ಕಾರಣ ಬದಲಾದ ಇಂದಿನ ಜನರ ಅಭಿರುಚಿ. ನಾನು ರಚಿಸಿದ ಒಂದು ನಾಟಕಕ್ಕೆ (ಅಚ್ಚ ಕನ್ನಡದ ನಾಟಕ) ವೇದಿಕೆಯಲ್ಲಿ ನಲವತ್ತು ಐವತ್ತು ಪ್ರದರ್ಶನ ಕಂಡಾಗಲೂ ಸಿಗದ ಮೆಚ್ಚಿಗೆ ಒಮ್ಮೆ ಟಿ.ವಿ.ಯಲ್ಲಿ ಪ್ರಸಾರಗೊಂಡಾಗ ಸಿಕ್ತು. ಈಗಿನ ಜನಕ್ಕೆ ಏನಿದ್ರೂ ಟಿ.ವಿ. ಮಾಧ್ಯಮದಲ್ಲೇ ಇರಕ್ಕು. ಉಳಿದ್ಯಾವುದ್ನೂ ಗಮನಿಸೋ ತಾಳ್ಮೆ ಇಲ್ಲೆ. ಹಾಗಾಗಿ ಪುಸ್ತಕ, ಧ್ವನಿಸುರುಳಿ ಮುಂತಾದುವುಗಳ ಬಗ್ಗೆ ಇತ್ತೀಚೆಗೆ ಕೈಹಾಕಲ್ಲೆ ಅಷ್ಟೆ.

✤ ✤ ✤

ಶ್ರೀಮತಿ ಶಾಂತಿ ನಾಯಕ
ಕುಳಿಬೀಡು ಎಸ್‌ಡಿಎಮ್ ಕಾಲೇಜು ಹಿಂದೆ
ಹೊನ್ನಾವರ, ಉತ್ತರಕನ್ನಡ
ದೂರವಾಣಿ : 08387-220474
ನಿವೃತ್ತ ಶಿಕ್ಷಕಿ. ಗೃಹಿಣಿ, ಸಾಹಿತಿ.
63 ವರ್ಷ. ಪ್ರಕಟಿತ ಕೃತಿ : 11

ಹವಿಗನ್ನಡ ಕೃತಿ :

1. ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಜನಪದ ಕತೆಗಳು (63 ಕತೆಗಳ ಸಂಗ್ರಹ) 1982 ಪು: 200
2. ಜಾಣೆ ಕನ್ನಡದ ತಿಳಿದ್ವೇಳೆ : ಒಗಟುಗಳ ಸಂಗ್ರಹ. 3-4 ಉಪಭಾಷೆಯ ಒಗಟುಗಳ ಸಂಗ್ರಹ. ಇದ್ರಲ್ಲಿ ಹವಿಗನ್ನಡ ಒಗಟುಗಳೂ ಇದ್ದು.

❶ ಯಾವ್ದೇ ಭಾಷೆ ತೆಕ್ಕೊಂಡ್ರೂವಾ ಅದ್ರ ಆಡೂ ಭಾಷೆ ಬಾಳಾ ಹಳೆತು. ಈ ಆಡು ಭಾಷೆಲಿ ಸಾವಿರಾರು ವರ್ಷಗಳ ಸಂಸ್ಕೃತಿಯ ಅಂಶಗಳು ತುಂಬ್ಕಂಡಿರ್‍ತೊ, ಅದ್ರಿಂದ್ಲೆ ಆಡು ಭಾಷೆಲಿ ಬಾಳಾ ಸತ್ವಾ ಇರ್‍ತು.

ನಾನು ಹವ್ಯಕ ಭಾಷೆಲಿರೊ ಜನಪದ ಕತೆ ಸಂಗ್ರಹ ಮಾಡ್ವಾಗಾ ಅಂದ್ರೆ 1971-72ರಲ್ಲಿ ಹೊನ್ನಾವರದ ಕವಲಕ್ಕಿ ಗ್ರಾಮದ ಸುತ್ತಲಿನ ಪಂಚಗ್ರಾಮದ ಹವ್ಯಕ ಮಕ್ಕೊ ಜನಪದ ಕತೆಗಳ್ನಾ ತಮತಮ್ ಆಡೂ ಮಾತ್ನಲ್ಲಿ ಹೇಳ್ತಿದ್ದೊ. ಆ ಭಾಷೆಲಿ ಅವುಗಳನ್ನಾ ಕೇಳೂಲೆ ಬಾಳಾ ಕುಶೀ ಆಗ್ತಿತ್ತು. ಈ ಕತೆಗಳ್ನಾ ನಾನು ಮದ್ಲು ಶಿಷ್ಟ ಭಾಷೆಲಿ ಬರ್‍ಕಂಬ್ಲೆ ಶುರು ಮಾಡ್ದೆ. ಆದ್ರೆ ಇದ್ನಾ ಓದಿ ನನಗೆ ಯೇನು ಕುಶಿ ಆಯ್ದಿಲ್ಲೆ ಈ ಕತೆಗೆ ಜೀವಂತಿಕೆ ಇಲ್ಲಾಂಗೆ ಅನಸ್ತು, ಅದಕ್ಕಾಗಿ ಹೀಗೆ ಬೇಡಾ ಆಡೂ ಭಾಷೆಲೇ ಸಂಗ್ರಹ ಮಾಡೊ ಅಂದ್ಕಂಡೆ. ಮುಂದೆ ಅವ್ರ ಆಡೂ ಭಾಷೆಲಿ ನೂರಾರು ಕತೆಗಳನ್ನಾ ಸಂಗ್ರಹ ಮಾಡ್ದೆ.

ಜನಪದ ಸಾಹಿತ್ಯಾನಾ ಆಡೂ ಭಾಷೆಲಿ ಸಂಗ್ರಹ ಮಾಡೂದ್ರಿಂದ ಇನ್ನೂ ಅನೇಕ ಉಪಯೋಗಿದ್ದು, ಈ ಭಾಷೆಯ ಸಂಸ್ಕೃತಿ ತೆಳಿಯೂಲೆ, ಭಾಷಾ ಶಾಸ್ತ್ರೀಯ ಅಧ್ಯಯನ ಮಾಡುಲೆ ಈ ಕ್ರಮ ಅನುಕೂಲ ಆಗ್ತು.

ಈಗ ಬಿಟ್ಟಿದ್ದಿಲ್ಲೆ. ಹವ್ಯಕರ ಗಾದೆ ಒಗಟು ಹಾಡು ಇತ್ಯಾದಿ ಜನಪದ ಸಾಹಿತ್ಯ ಸಂಗ್ರಹ ಮಾಡೂ ಸಂದರ್ಭದಲ್ಲಿ ಹವ್ಯಕರ ಭಾಷೆಲಿ ಅಂದ್ರೆ ನೀವು ತಿಳಿಸಿದ ಹವಿಗನ್ನಡದಲ್ಲಿ ಸಂಗ್ರಹ ಮಾಡ್ತೆ.

❷ ಹಿಂದಿನವರು ತಮ್ಮ ಭಾಷೆಲಿ ನಿರಂತರ ಮಾತಾಡ್ತಿದ್ದೊ. ಹವಿಗನ್ನಡ ಉಳ್ಸೊಲೆ ಇದೊಂದೇ ಕ್ರಮಸಾಕು. ಮನೆಲಿ ಆಡೂಭಾಷೆ ಇರೊ, ಹವ್ಯಕರು ಒಂದ್ಕಡೆ ಇದ್ದಾಗ ಇದೇ ಭಾಷೆಲಿ ಮಾತೊಡೊ ಆದ್ರೆ ಹಳೇ ಭಾಷೇನೇ ಯಾವಾಗ್ಲೂ ಇರ್ತು ಹೇಳೊಲಾಗ್ತಿಲ್ಲೆ. ಇದು ಬದಲಾಗ್ತಾನೇ ಇರ್ತು. ಪ್ರಬುದ್ಧ ವಿಶ್ಯಾ ಮಾತಾಡ್ವಾಗಾ ಬರೆವಾಗಾ ಶಿಷ್ಟ ಭಾಷೆಯ ಶಬ್ದ ತುಂಬ್ಕೊಳ್ತು. ಯಾಕಂದ್ರೆ ಭಾಷೆ ನಿಂತ ನೀರಲ್ಲ. ಅದು ಬದಲಾಗ್ತು ಬದಲಾಗೊ. ಬದಲಾಗದೇ ಇದ್ರೆ ಅದು ಸಾಯ್ತು. ಗ್ರಾಂಥಿಕ ಭಾಷೆ ಬದಲಾಗ್ತಾ ಇದ್ದು. ಆಡೂ ಭಾಷೆ ಬದಲಾಗದೇ ಇರ್ತಾ? ಹಳೇ ಹವ್ಯಕ ಭಾಷೆಗೂ ಈಗ್ನ ಈ ಭಾಷೆಗೂ ಬಾಳಾನೇ ಅಂತ್ರಾ ಇದ್ದು ಅಲ್ದಾ? ಇದ್ನ ನೀವು ಕೂಡಾ ಕಂಡ್ಕಂಡಿರಕ್ಕು. ಈಗಿತ್ಲಾಂಗಂತೂವಾ ಅನೇಕ ಆಡೂ ಭಾಷೆ ಹಾಗೆ ಹವ್ಯಕ ಭಾಷೆ ಬಾಳಾ ಬದಲಾವಣೆ ಆಯ್ದು. ಪಟ್ನದಲ್ಲಿ ಇದು ಎದ್ದು ಕಾಣ್ತು. ಈಗ ಹವ್ಯಕ ಭಾಷೆ ಅದ್ರ ಕ್ರಿಯಾ ಪದಗಳಲ್ಲಿ, ಕೆಲವು ಸರ್ವನಾಮಗಳಲ್ಲಿ, ವಿಭಕ್ತಿ ಪ್ರತ್ಯಯಗಳಲ್ಲಿ ಹೆಚ್ಚು ಉಳ್ಕಳ್ತಾ ಇದ್ದು. ಮಾತಾಡುವಾಗ ಈ ಶಬ್ದಗಳು ಉಳ್ಕಂಡ್ರೂವಾ ಸಾಕು ಅದು ಹವ್ಯಕ ಭಾಷೆ ಅನ್ನಸ್ತು. ಈ ಕೆಲವೇ ಅಂಶ ಕೂಡಾ ಮಾತಾಡುವವರ ನಡುವೆ ಆತ್ಮೀಯತೆನಾ ತತ್ತು. ಇಂತಾ ಆತ್ಮೀಯತೆ ಎಷ್ಟ ದುಡ್ಡು ಕೊಟ್ರೂ ಸಿಗ್ತಿಲ್ಲೆ. ಇದಕ್ಕಾಗಿ ಅಷ್ಟೇ ಅಲ್ಲ ಬೇರೆ ಬೇರೆ ಕಾರಣಗಳಿಗಾಗಿ ಹವ್ಯಕರು ಸಂದರ್ಬಾ ಸಿಕ್ಕಾಗಾ ತಮ್ ತಾಯಿ ಭಾಷೆಲಿ ಮಾತಾಡೊ. ಒಂದು ಭಾಷೆ ಸತ್ರೆ ಈ ಭಾಷೆ ಜನ್ರ ಸಂಸ್ಕೃತಿ ಸಾಯ್ತು. ಭಾಷೆನಾ ಸಾಯ್ಸುದು ಸುಲಬಾ. ಆದ್ರೆ ಅದ್ರನಾ ಮತ್ತೆ ಹುಟ್ಸೂದು ಆಗ್ತಿಲ್ಲೆ. ಕನ್ನಡದ ಶಿಷ್ಟಭಾಷೆಗೂ ಕನ್ನಡದ ಎಲ್ಲಾ ಆಡೂ ಭಾಷೆಗಳಿಗೂ ಒಡಹುಟ್ಟಿನ ಸಂಬಂದಾ ಇದ್ದು. ಕನ್ನಡ ಸಂಸ್ಕೃತಿ ಈ ನೂರಾರು ಆಡು ಭಾಷೆಗಳ ಜನಗಳಲ್ಲಿರುವ ಸಂಸ್ಕೃತಿಯ ಒಟ್ಟೂ ಮೊತ್ತಾಗಿದ್ದು. ಈ ಕಟ್ಟೆ ಕಲ್ಲುಗಳು ಗಟ್ಟಿಯಾಗಿರೊ. ಉಳ್ಕೊಲಾಗಾ. ಆದ್ರೆ ತಮ್ ಆಡೂ ಭಾಷೆ ಬಗ್ಗೆ ದುರಭಿಮಾನಾನೂ ಬೇಡಾ ಕೀಳರಿಮೆನೂ ಬೇಡಾ ಅಲ್ದಾ? ಒಂದು ಊರಿನ ಆಡೂ ಭಾಷೆಗಳು ಒಟ್ಟಿಗೆ ಬಾಳೊ. ಆಗಾ ವೈವಿಧ್ಯತೆಲಿ ಏಕತೆ ಎಂಬ ಮಾತಿಗೆ ಮೌಲ್ಯ ಬತ್ತು.

ನಿವ್ಗೊತ್ತಿದ್ದಿಕ್ಕು; ಇಂತಾ ವಾತಾವರಣ ಉತ್ತರ ಕನ್ನಡ ಜಿಲ್ಲೆಲಿ ಇನ್ನೂ ಜೀವಂತವಾಗಿದ್ದು. ಇಲ್ಲಿ ನಾಲ್ಕಾರು ಆಡೂಭಾಷಾ ಗಟಕಗಳ ಜನಾ ಒಂದ್ಕಡೆ ಕೂತು ಮಾತಾಡೊ ನಮೂನೆ ಬಾಳಾ ಚಂದಾ. ಅದ್ವಿತೀಯ. ಉದಾ : ಒಡ್ಯಾ ಮತ್ತುರಯ್ತಾ ಬೇರೆ ಬೇರೆ ಆಡು ಭಾಷೆ ಮಾತಾಡ್ತೊ, ಆದ್ರೆ ಅವರಿಬ್ರಲ್ಲಿ ಅಸ್ಟೇ ಏಕತೆ ಭಾಷೆ ತಿಳ್ಕಂಬಾಗಾ ಇರ್ತು. ಇವ್ರಿಗೆ ಆಕ್ಷಣದಲ್ಲಿ ತಾವು ಬೇರೆ ಬೇರೆ ಮಾತಾಡ್ತಿದ್ದೊ ಅನ್ನೂದೇ ಇಲ್ಲೆ. ಈ ರೀತಿಯ ವಿಸ್ಮಯ ಹಲವು ಆಡು ಭಾಷೆಗಳ ನಡುವೆ ನಡೆತು.

ಹಳ್ಳಿಗಳಲ್ಲಿ ಹವಿಗನ್ನಡಾ ಜಾತಿ ಚೌಕಟ್ಟಿನಲ್ಲಿ ಆಂತರಿಕ ಭಾಷೆಯಾಗಿ ಜೊತೆಗೆ ಇತರರೊಂದಿಗೆ ಮಾತಾಡುವ ಭಾಷೆಯಾಗಿ ಬಾಳ್ಕಂಡಿದ್ದು. ಆದ್ರೆ ಪಟ್ಣದಲ್ಲಿ ಈ ಪರಿಸ್ತಿತಿ ವಳೀ ಬವ್ದಾ? ತುಳು, ಕೊಂಕಣಿ ಹಾಗೆ ಚೌಕಟ್ಟಿನ ಎಲ್ಲೆ ಮೀರಿ ಬೆಳೆಯುಲೆ ಇದ್ಕೆ ಸಾದ್ಯಾ ಆಗ್ತಾ? ಆಗಬೇಕಾ? ಇಂತಾದ್ದೊಂದು ವಿಸ್ತಾರವಾದ ಜಾತಿ ಎಲ್ಲೆ ಕಟ್ಟಿಗೆ ಮೀರ್ದ ಪ್ರಸರಣಕ್ಕೆ ಈ ಭಾಷೆನಾ ಕೊಂಡೋಗಬೇಕಾ? ಅಂದ್ರೆ ಇತರ ಭಾಷೆ ಜನಾನೂವಾ ಈ ಭಾಷೆಲಿ ಮಾತಾಡುವಸ್ಟರ ಮಟ್ಟಿಗೆ ಇದ್ನಾ ಬೇಳೆಸ್ಬೆಕಾ? ಇದು ಈ ಭಾಷೆನಾ ಕಟ್ಟುವವರ ಗುರಿ, ಶಕ್ತೀ ಮೇಲೆ ಅವಲಂಬಿಸಿಕಂಡಿದ್ದು. ಸದ್ಯಾ ನಾನು ಇದರ್ನಾ ಇಲ್ಲಿ ಚರ್ಚಿಸತ್ನಿಲ್ಲೆ, ಯಾಕೆಂದ್ರೆ ಸಂಘಟಕರು ಇಲ್ಲಿ ಹಾಳೆ (ಪುಟ) ಮಿತಿ ಕೊಟ್ಟಿದ್ರು.

ಆದ್ರೆ ಇನ್ನೊಂದು ವಿಚಾರ ಈ ಭಾಷೆನಾ ಆಂತರಿಕವಾಗಿ ಮೈದುಂಬಿಕೊಂಡು ಬೆಳೆವ ಹಾಗೆ ಪ್ರಯತ್ನಿಸಬವ್ದು. ಈ ಭಾಷೆಯ ಸಾಹಿತ್ಯ ರಚನೆಗೆ ಪ್ರೋತ್ಸಾಹ ಹಾಗೂ ಹವಿಗನ್ನಡ ಭಾಷಾ ಅಧ್ಯಯನ ಕೇಂದ್ರ ತೆರೆದು ಅದರ ಜಾಲಾನಾ ಅನೇಕ ಕಡೆ ವಿಸ್ತರಿಸೂದು ಇತ್ಯಾದಿ ಕಾರ್ಯ ಮಾಡಬವ್ದು. ಆಗಾ ಈ ಭಾಷೆ ಪ್ರಭಾವಾ ಇನ್ನೊಂದು ಭಾಷೆ ಮೇಲೆ ಆಗಿ ಅದ್ರ ಪ್ರಸರಣಾ ತನ್ನ ಎಲ್ಲೆಕಟ್ಟನ್ನು ಮೀರಬವ್ದು.

(ಟಿಪ್ಪಣಿ : ಹವ್ಯಕೇತರರಾಗಿ ಶ್ರೀಮತಿ ಶಾಂತಿ ನಾಯಕರು ವ್ಯಕ್ತಪಡಿಸಿದ ಅಭಿಪ್ರಾಯ, ಕಳಕಳಿ, ಹವ್ಯಕರಲ್ಲಿ ಜಾಗ್ರತಿ ಹುಟ್ಟಸ್ಲಿಹೇಳಿ ಆಶಿಸ್ತೆ – ಸಂಪಾದಕ)

✤ ✤ ✤

ಬ.ಲ. ಸುರೇಶ
ಹುಲಿಮನೆ 160–43–26. 10ನೇ ಕ್ರಾಸ್
ಬೋವಿಪಾಳ್ಯ, ಮಹಾಲಕ್ಷ್ಮಿಪುರಂ,
ಬೆಂಗಳೂರು – 560 086
ದೂರವಾಣಿ : 23593582
(ಮೂಲತಃ ಸಾಗರ ತಾಲೂಕಿನ ಬಂದಗದ್ದೆಯೋರು)

47 ವರ್ಷ. ಸ್ವಯಂ ನಿವೃತ್ತನೌಕರ, ಕಿರುತೆರೆ ಮತ್ತು ಚಲನಚಿತ್ರ ಸಾಹಿತಿ, ಕಿರುತೆರೆ ನಿರ್ದೇಶಕ. ಪ್ರಕಟಿತ ಕೃತಿ : 18

ಹವಿಗನ್ನಡ ಕೃತಿ : ಕಗ್ಗಳ್ಳಿಲೊಂದಿನ ನಾಟಕ 1986 ಪು : 24

❶ ನಿಂಗ್ಳ ಪ್ರಶ್ನೆ ಓದಿ ಸ್ವಲ್ಪ ಹೊತ್ ಸುಮ್ನೆ ಕುಂತು ಯೋಚ್ನೆ ಮಾಡ್ದಿ ಹೌದು ಎಂತಕ್ಕೆ ಹವ್ಯಕ್ದಲ್ಲಿ ಬರ್ದಿ? ಇದು ಎನ್ನ ತಾಯಿ ನುಡಿ ಮೂಲಭಾವನೆ, ಮೊದ್ಲು ಯೋಚ್ನೆ ಇದೆಲ್ಲ ಹೇಳ್ಳಕ್ಕು. ಅದು ಬಿಡಿ. ಆಗ ಎಂಗೆ 16–18 ವರ್ಷ, ಸಿನಿಮಾ ನಾಟ್ಕ ಯಕ್ಷಗಾನ ಅಂದ್ರೆ ಭಾರಿಹುಚ್ಚು. ಜೊತೆಗೆ ಸಾಹಿತ್ಯದ ಬಗ್ಗೆನು. 14–15 ವಯಸ್ನಲ್ಲೇ ಸ್ವಂತ ಹಾಡುಕಟ್ಟಿ ಹಾಡ್ತಿದ್ದಿ. ಅದ್ರಲ್ಲಿ ಹವ್ಯಕ ಭಾಷೆನೇ ಹೆಚ್ಚು ಇರ್ತಿತ್ತು. ಹಾಡಾದೂಂದ್ರೆ ಎಲ್ಲರೆದೂರೂ ಹಾಡ್ತಿರ್ಲೆ ತ್ವಾಟ – ತುಡಿಗೆ, ಬ್ಯಾಣ–ಬೆಟ್ಟದಾಗೆ, ಒಬ್ನೆ ರಸ್ತೇಲಿ ಹೋಪ್ದುಕಾದ್ರೆ ಮನೇಲಿ ಒಬ್ನೆ ಇದ್ದಾಗ, ಕಾನಿಗೆ ಕಟ್ಟಿಗೆ ಚಕ್ಕೆ ತರಕ್ಕೆ ಹೋದಾಗ ಹಾಡ್ಕ್ಯಂಡು ಸಂತೋಷಪಡದಪ. ಇದೇ ಗುಂಗಾಗೆ – ಹುಬ್ಬಿ ಮೈಸೂರೂಂತ ಕೆಲ್ಸಕ್ಕೆ ಓಡಾಡಿ ಆ ಮೇಲೆ ಮಿಲ್ಟ್ರಿ ಸೇರಿದ್ಮೇಲೂ ಬರೆಯದು ಬಿಡ್ಲೆ; ಅಲ್ಲಿಂದ ಡಿಸ್ಚಾರ್ಜ್ ಆಗಿ ಬಂದ್ಮೇಲೂ ಸಾಹಿತ್ಯ ಮುಂದುವರ್ತು ಕರ್ನಾಟಕ ಜಲಮಂಡಳಿಯಲ್ಲಿ ಕೆಲ್ಸಕ್ಕೆ ಸೇರಿದ್ಮೇಲೆ ಯಕ್ಷಗಾನ ತಪ್ಪಿಹೋಗಿ – ನಾಟ್ಕ – ಸಿನಿಮಾಗೆ ಅಂಟ್ಕೊಂಡ್ತು, ಒಂದೆರಡು ಕನ್ನಡ ಪುಸ್ತ್ಕ ಬರ್ದಮೇಲೆ ಹವ್ಯಕ ಭಾಷೇಲಿ ಯಾಕ್ ಬರಿಲಾಗ, ಅದೂ ಒಂದ್ ಪ್ರಾದೇಶಿಕ ಭಾಷೆನೆ ಅಲ್ದಾ ಅನ್ನಿಸ್ತು ಹೀಂಗೆಲ್ಲಾ ಯೋಚ್ನೆ ಬಂದ್‌ಮೇಲೆ ನಾಲ್ಕಾರು ಜನ್ರನ್ನ ವಿಚಾರ್ಸ್‌ದಿ, ಅಂತಾ ಪ್ರೋತ್ಸಾಹ ಸಿಗ್ಲೆ.. ಆದ್ರೂ ಎಂಗೊಂದು ಅಭ್ಯಾಸ

ಮೊದ್ಲಿಂದಲೂ ಇತ್ತು ಹಿಡ್ದು ಕೆಲ್ಸ ಸಾಧ್ಸದು, ಅದು ಒಳ್ಳೆದೋ ಕೆಟ್ಟದ್ದೋ? ಮಾಡ್ತಿಅಂದ್ಮೇಲೆ ಮಾಡದು. ಹೀಂಗೆ ಯೋಚ್ನೆ ಬಂದ್‌ಮೇಲೆ ನಾಟ್ಕ ಬರೆಯದು ಅಂತ ಅನ್ಕಂಡಿ, ಮೊದ್ಲು ''ಕಾದ್ಗೆ ಪಂಚಾಯ್ತಿ'' ಬರೆಯಕ್ಕೂಂತ ಇತ್ತು ಅದ್ಯಾಕೋ ಸರಿಕಾಣ್ಲೆ ಬ್ಯಾಡ ಅಂತ ಬಿಟ್ಟೆ. ಆಮೇಲೆ 'ಕಗ್ಗಳ್ಳಿಲೊಂದಿನ' ನಾಟ್ಕ ಬರ್ದಿ, ಕಥೆ ಇಟ್ಕಂಡು ಪ್ರಕ್ಷುಬ್ಧ ಹೇಳೋ ಕನ್ನಡ ಕಾದಂಬರಿನೂ ಆ ಮೇಲೆ ಬರ್ದಿ. ಅದು ಬೇರೆ ಪ್ರಶ್ನೆ.

ನಮ್ಮ ಭಾಷೇಲಿ ಒಂದು ಪುಸ್ತ್ಕ ಬರೆಯಕ್ಕು, ಅದೊಂದು ದಾಖಲೆಯಾಗಿದ್ರೂ ಪರವಾಗಿಲ್ಲೆ ಅನ್ನ ಆಸೆನೂ ಇತ್ತು. ಈ ನಾಟ್ಕ ಬರ್ದಮೇಲೆ ಆನು ''ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ''ದಲ್ಲಿ ಪಾತ್ರ ಮಾಡಿದ್ದು . ಕಗ್ಗಳಿಲೊಂದಿನ ನಾಟ್ಕನ ಬೆಂಗಳೂರಿನ 'ಕೇಶವಶಿಲ್ಪ' ಸಭಾಂಗಣದಲ್ಲಿ ಮೊದಲು ಆಡ್ಸಿದ್ದಿ. ಆಮೇಲೆ ಮುದ್ರಣ ಮಾಡ್ಸಿದ್ದು ತೀರಾ ಇಕ್ಕಟ್ಟಾಗೆ. ದುಡ್ಡಿಲ್ಲೆ ಕಾಸಿಲ್ಲೆ ಮಾಡ್ಸಕ್ಕು ಅನ್ನ ಆಸೆ, ನಾಟ್ಕ ಚೆನ್ನಾಗಿತ್ತು ಅಂತ ಎಲ್ಲ ಬೆನ್‌ತಟ್ಟಿದೋರೆ, ಮುದ್ರಣಕ್ಕೆ ಆತ್ಗೊಳ್ಳೋರು ಇಲ್ಲೆ; ಆಗ ಆನು 'ಹವ್ಯಕ' ಪತ್ರಿಕೆಲಿ ನಾಟ್ಕ ಪ್ರಕಟ್ಸಕ್ಕೆ ಸಹಾಯ ಮಾಡಿ ಅಂತ ಒಂದ್ ಜಾಹೀರಾತು ಕೊಟ್ಟೆ; ಅದಕ್ಕೆ ಎರಡು ಮೂರು ಜನ ಮಾತ್ರ ಸ್ಪಂದಿಸಿದ. ಹಾರ್ಲೆಎಸ್ಟೇಟ್ ಗಣಪಯ್ಯನೋರು 25 ರೂಪಾಯಿ ಕಳ್ಸಿದ. ''ಎಂಗ್ ಹವ್ಯಕ ಭಾಷೇಲಿ ಮಾತಾಡದಕ್ಕೆ ಸರಿಯಾಗಿ ಬರದಿಲ್ಲೆ ಆದ್ರೂ ನಿನ್ನ ಪ್ರಯತ್ನಕ್ಕೆ ಎನ್ನ ಪ್ರೋತ್ಸಾಹ ಇದ್ದು'' ಅಂತ ಪತ್ರಿಸಿದ. ಅದು ಬಿಟ್ರೆ ಒಬ್ರು 15 ರೂಪಾಯಿ, ಇನ್ನೊಬ್ರು 10 ರೂಪಾಯಿ ಕಳ್ಸಿದ (1984ರಲ್ಲಿ). ಇದು ಬಿಟ್ರೆ ಎಂಗ್ ಬೇರೆ ಕಡೆಯಿಂದ ಸಹಾಯ ಸಿಗ್ಲೆ. ಹವ್ಯಕ ಪತ್ರಿಕೆಲೂ ಫ್ರೀಯಾಗಿ ಜಾಹಿರಾತು ಹಾಕ್ಲೆ. ಅದೂ ದುಡ್ದು ಕೊಟ್ಟು ಹಾಕ್ಸಿದ್ದು. ಪುಸ್ತಕ ಮಾಡ್ಸದೇ ಬ್ಯಾಡ ಅನ್ನಷ್ಟು ಬೇಜಾರು ಆತು. ಆದ್ರೂ ಒಂದ್‌ಸಾರಿ ಜಾಹಿರಾತು ಕೊಟ್ಮೇಲೆ, ಮೂರು ಜನ ಇಷ್ಟಾದ್ರೂ ಸಹಾಯಮಾಡಿದಾಗ ಮುದ್ರಣ ಮಾಡುಸ್ದೆ ಇದ್ರೆ, ಅವ್ರಿಗೆ ಅವಮಾನ ಮಾಡ್ದಾಂಗೆ ಅನ್ಕಂಡು, ಕೈಯಿಂದಲೇ ದುಡ್ದು ಹಾಕಿ ಮುದ್ರಣ ಮಾಡ್ಸಿದಿ. ಪುಸ್ತ್ಕ ಬಂದ್ ಮೇಲೆ ಕೊಂಡ್ ಓದೋರು ಇಲ್ದೆ

ಹೋದ. ಯಾರಿಗೆ ಕೊಡಕ್ಕೆ ಹೋದ್ರು ''ಇದು ನಿನಗೆ ಬೇಕಾಗಿತ್ತನ ಅಪಿ?'' ಅನ್ನೋರೆ. ಇದೆಲ್ಲಾನೋಡಿದ್ಮೇಲೆ, ಇನ್ನು ಇಂತಾ ಸಾಹಸ ಮಾಡದು ಬ್ಯಾಡಾಂತ ಬಿಟ್‌ಬಿಟಿ. ಆವತ್ತೇನಾದ್ರೂ ಎಂಗ್‌ಒಳ್ಳೆ ಪ್ರೋತ್ಸಾಹ ಸಿಕ್ಕಿದ್ರೆ, ಇನ್ನೂ ಹತ್ತಾರು ಪುಸ್ತ್ಕ ಹವ್ಯಕ ಭಾಷೆಲೇ ಬರಿತಿದ್ನೇನೋ, ಅದು ಮಾತ್ರ ಖಂಡಿತ. ಆದ್ರೆ ಎನ್ ಹುಮ್ಮಸ್ಸಿಗೆ ಆಗ ತಣ್ಣೀರು ಬಿತ್ತು. ಹವ್ಯಕ ಭಾಷೇಲಿ ಪುಸ್ತಕ ಬರ್ದು ಪ್ರಕಟಿಸದು ಬಿಟ್ರೂ, ಆಗಾಗ ಕವನ ಲೇಖನ ಪತ್ರಿಕೆಗೆ ಬರಿತಾ ಬಂದಿ; ಅದು ಪ್ರಕಟ ಆಯ್ತು. ಹಾಡು ಕ್ಯಾಸೆಟ್‌ನಲ್ಲೂ ಬೈಂದು. ನಮ್ಮ ಕಲ್ಲೂರು ಶಂಭು ಅನಂತನ ''ಹವ್ಯಕಗೀತಾ'' ಕವನ ಸಂಕಲನನ ನಮ್ಮ ಪ್ರಕಾಶನದ ವತಿಯಿಂದಲೇ ಮುದ್ರಿಸಿಕೊಟ್ಟೆ. ಆನು ನಡಹಳ್ಳಿ ಶ್ರೀಪಾದ ಇಬ್ರೂ ಸೇರಿ ಉದ್ಭವ ಹವ್ಯಾಸೀ ಕಲಾರಂಗದ ವತಿಯಿಂದ ''ನಮ್ಮೆಲ್ಲರ ಬದುಕಿನ ಕಥೆ'' ಅನ್ನ ಹವಿಗನ್ನಡ ನಾಟ್ಕ ಬರ್ದ್ದೂ ಹೆಗ್ಗೋಡು, ಸೊರಬ, ಸಾಗರ ಹೀಂಗೆ ನಾನಾ ಕಡೆ ಆಡ್ಸಿತ್ತ್ಯ. ನಾಟ್ಕಕ್ಕೆ ಒಳ್ಳೆ ಪ್ರೋತ್ಸಾಹ ಸಿಕ್ತು. ಆದ್ರೆ ಪುಸ್ತಕ ಪ್ರಕಟಮಾಡಕ್ಕೆ ಆಗ್ಲೆ. ಮುಂದೆ ಅದ್ನ ಶ್ರೀಪಾದ ಪ್ರಕಟಾನೂ ಮಾಡ್ದ. ಹಾಂಗೆ ನಮ್ಮ ಹಳಿಕ್ಕೇರಿ ಪ್ರಕಾಶನ ಜೊತೆಗೆ ಹವ್ಯಕ ಹಾಡಿನ ಕ್ಯಾಸೆಟ್ಟೂ ಮಾಡ್ದಿ. ಹಳಿಕ್ಕೇರಿ ಪ್ರಕಾಶ ಹವ್ಯಕ ಹಾಡು ಜನಪ್ರಿಯ ಆಗಕ್ಕೆ ತುಂಬಾ ಶ್ರಮಪಟ್ಟಿದ್ದ – ತುಂಬಾ ಚೆನ್ನಾಗಿ ಹಾಡ್ತ; ಅವ್ನಿಗೂ ಅಂತಾ ಪ್ರೋತ್ಸಾಹ ಇಲ್ದೆ – ಎಂಗೂ ಇಲ್ದೆ ಕಡೆಗೆ ಎಲ್ಲಾ ಕುಂಟಪ್ಪನ ಕಥೆ ಆತು. ಈಗ ನಿಂಗಕ್ಕೆ ಗೊತ್ತಾಗಿರಕ್ಕಲ್ಲ ಆನು ಹವ್ಯಕ ಭಾಷೆಯಲ್ಲಿ ಎಂತಕ್ಕೆ ಬರ್ದಿ ಎಂತಕ್ಕೆ ಬಿಟ್ಟೆ ಅಂತ?

❷ ಆನು ಈ ಪ್ರಶ್ನೆಗೆ ನೇರ ಉತ್ರ ಕೊಟ್ಟು ಬಿಡ್ತಿ. ಹವಿಗನ್ನಡ ಉಳ್ಸಿ ಬೆಳ್ಸದು ಕಷ್ಟ ಇಲ್ಲೆ. ಆನು ಯನ್ ಮನೆಯೋರು, ಸಂಬಂಧಿಗ್ಳು, ಸ್ನೇಹಿತ್ರು ಹವ್ಯಕದಲ್ಲೇ ಮಾತಾಡಿದ್ರೆ ಆತು, ಬರ್ದೆ ಇರೋರಿಗೆ ಕಲ್ಸಕ್ಕಪ್ಪ, ಅವ್ರಿಗೆ ಕಲಿಯ ಆಸಕ್ತಿ ಹುಟ್ಸಕ್ಕು, ಹಾಂಗೆ ಹವ್ಯಕದಲ್ಲಿ ಬರೆಯೋರು ಇದ್ರೆ, ಅಂತೋರಿಗೆ ಬರೆಯಕ್ಕೆ ಪ್ರೋತ್ಸಾಹ ಕೊಟ್ಟು, ಹುಮ್ಮಸ್ಸು ತುಂಬಿದ್ರೆ ಆತು. ಜೊತೆಗೆ ಸ್ವಲ್ಪ ಹಣಕಾಸಿನ ಸಹಾಯನ (ಉಳ್ಳವರು) ಮಾಡಿದ್ರಾತು. ಲಕ್ಷಕೋಟಿ ಇರೋರು ಐದೂ ಹತ್ತೋ ಸಾವ್ರ ನಮ್ಮ

ಅಮ್ಮನ ಭಾಷೆಗೆ ಸಹಾಯ ಮಾಡಿದ್ರೆ ದಂಡ ಆಗ್ತಾ? ಇಲ್ಲೆ ತಾಯಿ ಸೇವೆ ಮಾಡ್ದಾಂಗಾಗ್ತು. ನಮ್ಮ ಭಾಷೆ ಬಗ್ಗೆ ನಾವು ಗೌರವ-ಅಭಿಮಾನ ಇಟ್ಗೊಂಡು, ನಮ್ಮ ಭಾಷೆ ಬಗ್ಗೆ ತಿಳಿಹೇಳ ಜ್ಞಾನಸಂಪಾದನೆ ಮಾಡ್ಕ್ಯಂಡ್ರೆ ಸಾಕು, ಇದನ್ನೇ ಗುಣಾತ್ಮಕವಾಗಿ ನಮ್ಮೋರು ಬೆಳಸ್ಗ್ಯಂಡ್ ಬಿಟ್ರೆ ನಮ್ ಭಾಷೆನೂ ಚಿರಕಾಲ ಉಳಿತು. ನಮಗೆ ಕೀಳರಿಮೆ ಜಾಸ್ತಿ.. ಭಾಷೆ ಬೆಳೆಸದಕ್ಕೆ ಉಳಿಸದಕ್ಕೆ ಕ್ರಾಂತಿ ಆಗಕ್ಕೂಂತ ಇಲ್ಲೆ; ಬೇರೆ ಭ್ರಾಂತಿ ಬಿಟ್ಟು ನಮ್ಮ ಭಾಷೆ ನಾವು ಪ್ರೀತಿಸಿ ಮಕ್ಳಿಗೆ ಕಲ್ಸಿದ್ರೆ ಸಾಕು. ಈಗ ಕೊಂಕಣಿ–ತುಳು–ಕೊಡವ–ಲಮಾಣಿ ಈ ಭಾಷೆನೂ ಕನ್ನಡದ ಸೋದರಭಾಷೆ ಅಂತ ಹೇಳ್ಳಕ್ಕು. ಅವ್ರೆಲ್ಲಾ ಭಾಷೆ ಹ್ಯಾಂಗ್ ಬೆಳಸ್ತಿದ್ದ – ಕಲಿಸ್ತಿದ್ದ ನೋಡಿ. ಸಭೆ ಸಮಾರಂಭ ನಡೆಸಿದ್ರೆ ತಮ್ಮ ಭಾಷೆ ಬಿಟ್ಟು ಬೇರೆ ಮಾತಾಡಿಡಲ್ಲೆ, ಆದ್ರೆ ನಾವು...?

ನಮ್ಮ ಹವ್ಯಕ ಮಹಾಸಭೆ ಭಾಷೆ ಬೆಳವಣಿಗೆಗೆ ಪ್ರಮುಖ ಪಾತ್ರವಹಿಸ್ಲಕ್ಕು; ಇದು ಎಲ್ಲಾ ಪ್ರದೇಶದ ಹವ್ಯಕರ ಪ್ರಾತಿನಿಧಿಕ ಸಭೆ. ಹವ್ಯಕ ಮಹಾಸಭೆ ಆರಂಭ ಆಗಿ 63 ವರ್ಷ ಆತು, ಭಾಷೆ ಬೆಳವಣಿಗೆಗೆ ಮಹಾ ಸಭೆ ಏನ್ ಮಾಡಿದ್ದು? ಈಗ ಆತ್ಮಾವಲೋಕನ ಮಾಡ್ಕ್ಯಳ್ಳಕ್ಕು. ಹಾಂಗೆ ಹವ್ಯಕ ಪತ್ರಿಕೆ ಪ್ರಾರಂಭ ಆಗಿ 40 ವರ್ಷ ಆತು. ಇದು ನಮ್ಮ ಹವ್ಯಕ್ರ ಏಕೈಕ ಮುಖವಾಣಿ ಅಂತ ಹೇಳ್ಲಕ್ಕು. ಈ ಪತ್ರಿಕೇಲಿ ಹವ್ಯಕ ಭಾಷೆಕಾಣದಿಲ್ಲೆ(ಈಗೀಗ ಕೆಲವು ಸಲ್ಲು– ಸಾಲುಬರ್ತಾ ಇದ್ದು) ಇಷ್ಟು ವರ್ಷದಿಂದ ಹವ್ಯಕ ಮಹಾಸಭೆಲ್ಲಿ ಸಭೆ ಸಮಾರಂಭ ನಡಿತಾ ಇದ್ದಲ... ಎಷ್ಟು ಸಭೆ ಹವ್ಯಕ ಭಾಷೆಯಲ್ಲೇ ನಡೆದ್ದು? ಸಭೆ – ಸಮಾರಂಭದ ನಡಾವಳಿನ, ಟಿಪ್ಪಣಿನ ಹವೀಕ ಭಾಷೇಲಿ ದಾಖಲೆ ಮಾಡಿದ್ ಉದಾಹರಣೆ ಇದ್ದ? ಇದು ಯಾವುದೂ ಕಾಣದಿಲ್ಲೆ. ಹವ್ಯಕ ಮಹಾಸಭೆ ನಾಲ್ಕಾರು ಸಮ್ಮೇಳನ ಮಾಡಿದ್ದು ಪುತ್ತೂರಲ್ಲಿ ವಿಶ್ವ ಹವ್ಯಕ ಸಮ್ಮೇಳನನೂ ನಡೆಸ್ತು, ಹಾಂಗೆ 2002ರಲ್ಲಿ ಹವ್ಯಕ ಸಾಹಿತ್ಯ ಸಮ್ಮೇಳನನೂ ಮಾಡ್ತು, ಇದು ಯಾವುದ್ರಲ್ಲೂ ಹವ್ಯಕ ಭಾಷೆ ಚೂರು ಇಲ್ಲೆ... ಸಾಹಿತ್ಯ ಸಮ್ಮೇಳನದಲ್ಲಾದ್ರೂ, ಹವ್ಯಕ ಭಾಷೆಲಿಪ್ಪ ಸಾಹಿತ್ಯದ ಬಗ್ಗೆ ಇರಕಾಗಿತ್ತು. ಹೀಂಗೆ ಮಾಡಿದ್ರೆ ಭಾಷೆ ಹ್ಯಾಂಗೆ ಒಳಿತು –

ಬೆಳೆತು? ಹಾಂಗ್ ನೋಡಿದ್ರೆ ನಮ್ಮ ಹವ್ಯಕರಿಗೆ ಎರಡು ಪ್ರಧಾನಮಠ ಇದ್ದು. ನಮ್ಮ ಭಾಷೆ ಬೆಳವಣಿಗೆಗೆ ಮಠಗಳು ಮಾಡಿದ್ದು? ಇದು ಖಂಡಿತಾ ಟೀಕೆ ಅಲ್ಲ, ನಮ್ಮನ್ನೇ ನಾವು ವಿಮರ್ಶೆ ಮಾಡ್ಕ್ಯಳದು ಅನ್ನೊಂಡ್ರೆ ನಮ್ಮ ಸಮಾಜಕ್ಕೆ ಒಳ್ಳೇದು.

ಯನಗೆ ಅನ್ಸ ಪ್ರಕಾರ, ಮೊದಲು ಹವ್ಯಕ ಮಹಾಸಭೆ ಈ ಬಗ್ಗೆ ಗಮನಕೊಡಕ್ಕು. ಸಭೆ ಸಮಾರಂಭದಲ್ಲಿ ಮಾತಾಡಕ್ಕಾದ್ರೆ ಹವ್ಯಕ ಭಾಷೆಯಲ್ಲೇ ಮಾತಾಡಕ್ಕು. ಅದನ್ನ ದಾಖಲಿಸಕ್ಕಾದ್ರೆ ಹವ್ಯಕ ಭಾಷೇಲೀ ದಾಖಲ್ಸಕ್ಕು. ಹವ್ಯಕದಲ್ಲೀ ನಾಲ್ಕಾರು ತರ ಇದ್ದು – ಅವ್ರ ಭಾಷೆ ಇವ್ರಿಗೆ ಅರ್ಥಆಪ್ದಿಲ್ಲೆ, ಇವ್ರುದ್ದು ಅವ್ರಿಗೆ ಅರ್ಥ ಆಪ್ದಿಲ್ಲೆ ಅನ್ನೋ ಮಾತು ಇದ್ದು . ಇದನ್ನ ಒಪಗ್ಯಳನ, ಅದ್ರೆ ಕಲಿಯೋ – ಕಲ್ಸೋ ಮನೋಭಾವ ನಾವು ಇಡ್ಗೊಂಡ್ರೆ ಅವ್ರುದ್ದು ಇವ್ರು – ಇವ್ರುದ್ದು ಅವ್ರು ಕಲಿತ – ಕಲುಸ್ತ ಕೆಲವುದಿನ ಕಷ್ಟ ಆಗ್ಗು.. ಮುಂದೆ ಸರಿ ಹೋಗ್ತು. ಈ ಕೆಲ್ಸ ಬೆಂಗಳೂರಲ್ಲೇ ಆಗಕ್ಕು, ಯಾಕೇಂದ್ರೆ ಇಲ್ಲಿ ಎಲ್ಲಾ ಪ್ರದೇಶದ ಹವ್ಯಕರೂ ಇದ್ದ. ನಮ್ಮ ಭಾಷೆ ಸೊಗಡು ಆಸ್ವಾದಿಸಕ್ಕೆ ಇಲ್ಲಿಗಿಂತ ಒಳ್ಳೆ ಸ್ಥಳ ಸಿಗದಿಲ್ಲೆ; ಅದಕ್ಕೆ ಅವಕಾಶಮಾಡಕ್ಕು ಅಷ್ಟೆ, ಹಾಂಗೆ ಹವ್ಯಕ ಪತ್ರಿಕೆನೂ ಕೆಲ್ಸ ಮಾಡಕ್ಕು. ನಾಲ್ಕು ಪುಟನಾದ್ರೂ ಹವ್ಯಕ ಭಾಷೆಗೆ ಮೀಸಲು ಇಡಕ್ಕು; ಎಲ್ಲಾ ಪ್ರದೇಶದ ಜನರಿಗೂ ಅವಕಾಶಕೊಡಕ್ಕು. ಆರಂಭದಲ್ಲಿ ಗಂಭೀರ ಸಾಹಿತ್ಯ ಬರ್ದೆ ಇರ್ಲು ಆದ್ರೆ ಮುಂದೆ ಅದು ಬೆಳಿತು ಉಳಿತು; ಪತ್ರಿಕೆ ಹವಿಗನ್ನಡಕ್ಕೆ ಪ್ರಾಧಾನ್ಯತೆ ಕೊಡದು ಮುಖ್ಯ.

ಯಾವ್ದೇ ಭಾಷೆ ಇದ್ರೂ, ಅದು ನಾಡು-ನೆಲ-ಜಲ-ಸಂಸ್ಕೃತಿಯ ಜೀವಾಳ; ಅದನ್ನ ಉಳಿಸಿ ಬೆಳೆಸದು ನಮ್ಮ ಕರ್ತವ್ಯ. ನಮ್ಮ ಎರಡೂ ಮಠಗಳೂ ಈ ಕಡೆ ಸ್ವಲ್ಪ ಲಕ್ಷ್ಯವಹಿಸಕ್ಕು. ಈಗ ಸಮಾಧಾನ ಸಂಗ್ತಿ ಅಂದ್ರೆ, ಹವಿಗನ್ನಡ ಸಮ್ಮೇಳನ ಆಗ್ತಿರದು. ನಮ್ಮ ನಾರಾಯಣ ಶಾನಭಾಗ ಅವ್ರು ತುಂಬಾ ಪ್ರಯತ್ನಪಟ್ಟೆ ಹವ್ಯಕ ಅಧ್ಯಯನ ಕೇಂದ್ರ ಮಾಡಿ, ಅದ್ರ ಮೂಲಕ ನಮ್ಮ ಭಾಷೆ ಬೆಳವಣಿಗೆಗೆ ಅನನ್ಯ ಸೇವೆ ಸಲ್ಲಿಸ್ತಿದ್ದ, ಇದು ಅಪ್ರೂಬ್ರ ಕೆಲ್ಸ ಆಗದಲ್ಲ–ಎಲ್ಲರೂ ಅವ್ರ ಕೈಜೋಡ್ಸಕ್ಕು. ಈಗ 20 ವರ್ಷದ ಹಿಂದೆನೇ ಆನು ಈ ಬಗ್ಗೆ ಹವ್ಯಕ ಮಹಾಸಭೆನ

– ಹವ್ಯಕ ಪತ್ರಿಕಾ ಬಳಗನಾ ಕೇಳಿದ್ದಿದ್ದು.. ಪತ್ರಿಕೆನ ಹವ್ಯಕದಲ್ಲೇ ಮಾಡಿ ಅಂತ ಹೇಳಿದ್ದು ಇದ್ದು; ಆದ್ರೆ ಇದಕ್ಕೆಲ್ಲಾ ಆಗ ದನಿ ಇರ್ಲೆ... ಆನೊಬ್ಬ ಯಕಃಶ್ಚಿತ ಆಗ್ಬಿಟ್ಟೆ. ಈ ಸಾಹಿತ್ಯ ಸಮ್ಮೇಳನದಿಂದ್ಲಾದ್ರೂ, ನಮ್ ಭಾಷೆ ಬೆಳವಣಿಗೆಗೆ ಪ್ರಧಾನ ತಿರುವು ಸಿಗ್ಲಿಂತ ನಮ್ಮ ಕುಲದೇವ್ರಲ್ಲಿ ಪ್ರಾರ್ಥಿಸವ, ಹಾಂಗೆ ನಮ್ಮ ಕೈಲಾದ್ದು ಭಾಷಾ ಬೆಳವಣಿಗೆಗೆ ಕೊಡ್ಗೆ ಅಂತ ಕೊಟ್ರೆ ಹವೀಕಭಾಷೆ ಉಳಿತು –ಬೆಳಿತು ಅಲ್ದ?

✣ ✣ ✣

ವಿಶ್ವ ವಿನೋದ ಬನಾರಿ 'ಬನಸಿರಿ'
ದೇಲಂಪಾಡಿ ಅಂಚೆ ಪಂಜಿಕಲ್ಲು,
ಕಾಸರಗೋಡು – 671 543
ದೂರವಾಣಿ :04994–265257

59 ವರ್ಷ. ಕೃಷಿಕ. ಪ್ರಕಟಿತ ಕೃತಿ : 3

ಹವಿಗನ್ನಡ ಕೃತಿ : ದಕ್ಷಾಧ್ವರ, ಯಕ್ಷಗಾನ 1991 ಪು : 8

❶ ಮೊದಲಿಂದಲೇ ಯಕ್ಷಗಾನ ಪದ್ಯರಚನೆ ಮಾಡುವ ಒಂದು ಅಭ್ಯಾಸ ಎನ್ನಲ್ಲಿದ್ದಿತ್ತು, ಎನ್ನ ಅಣ್ಣನ ಅಳಿಯ ವಿತಡ್ಕ ಚಂದ್ರಶೇಖರ ಅವರ ಅಪ್ಪ ವಿತಡ್ಕ ಹರಿಹರ ಭಟ್ ಅವು ಹವ್ಯಕ ಭಾಷೆಲಿ ವಿಚಿತ್ರ ರಸಾಯನ ಹೀಂಗೆ ಬೇರೆ ಬೇರೆ ಹೆಸರಿಲ್ಲಿ ತುಂಬಾ ಬರದ್ದವು. ಹಾಂಗೆ ಸಂಬಂಧಿಕರಾದ ಅವೆಲ್ಲ ಎನಗೆ ಹವ್ಯಕ ಭಾಷೆಲಿ ಪ್ರಸಂಗ ಬರವಲೆ ಪ್ರೇರೇಪಣೆ ಕೊಟ್ಟವು. ಹಾಂಗಾಗಿ ಎರಡು ಮೂರು ಯಕ್ಷಗಾನ ಪ್ರಸಂಗವ ನಮ್ಮ ಭಾಷೆಲಿ ಬರದೆ. ಹಿರಿಯೋರಾದ ಶೇಣಿ ಗೋಪಾಲಕೃಷ್ಣ ಭಟ್ ಅವರ 'ಒಂದು ಒಳ್ಳೆ ಮಾತು' ಹೇಳುವ ಮುನ್ನುಡಿಯ ಪ್ರೋತ್ಸಾಹದ ಹರಕೆ ಎನ್ನ ದಕ್ಷಾಧ್ವರಕ್ಕೆ ಸಿಕ್ಕಿಯಪ್ಪಗ ದೊಡ್ಡ ಉತ್ಸಾಹ ಬಂತು. ಹಾಂಗೆ ''ಜರಾಸಂಧವಧೆ'', ''ಕೃಷ್ಣಾರ್ಜುನ ಕಾಳಗ''ವನ್ನೂ ನಮ್ಮ ಭಾಷೆಲಿ ಬರದೆ. ಎನ್ನ ಅಭಿಪ್ರಾಯಲ್ಲಿ ಕಥೆ, ಕಾದಂಬರಿ, ನಾಟಕ, ಕವಿತೆಗಳಷ್ಟು ಹವ್ಯಕ

ಭಾಷೆಲಿ ಯಕ್ಷಗಾನ ತುಂಬಿ ಕಾಣ ಹೇಳಿ ಕಾಣುತ್ತು, ಅಂತೂ ಒಂದು ವೈವಿಧ್ಯತೆಯ ದೃಷ್ಟಿಂದ ಮಾಡಿದ ಕೆಲಸ ಎನಗೆ ಖಂಡಿತ ತೃಪ್ತಿಕೊಟ್ಟದು.

❷ ನವಗೆ ನಮ್ಮ ಭಾಷೆಯ ಮೇಲೆ ನಮ್ಮ ಸಂಸ್ಕೃತಿಯ ಮೇಲೆ ಇರಬೇಕಾದ ಪ್ರೀತಿ ಗೌರವವೇ ಹವಿಗನ್ನಡವ ಉಳ್ಸಿ ಬೆಳೆಶೆಲೆ ದೊಡ್ಡ ಪ್ರೇರಕ ಶಕ್ತಿ ಹೇಳಿ ಎನ್ನ ಅಭಿಪ್ರಾಯ. ಹಾಂಗಾಗಿ ಆ ನಿಟ್ಟಲ್ಲಿ ಎಲ್ಲಾ ಬಗೆಯ ಲೇಖಕರ ಲೇಖನ ಮೂಲಕದ ಪ್ರಯತ್ನವುದೆ ಹೆಚ್ಚು ಸಾಗೆಕ್ಕು.

✤ ✤ ✤



ಎ.ಬಿ. ಅರ್ತಿಕಜೆ, ನಿವೃತ್ತ ಪ್ರಾಧ್ಯಾಪಕರು
'ಶ್ರೀ ನಿಲಯ' ಶಿವಪೇಟೆ ಪುತ್ತೂರು
ದ.ಕ. –574201
ದೂರವಾಣಿ : 08251 – 231818
ಚರವಾಣಿ : 9341914254

63 ವರ್ಷ ಪ್ರಕಟಿತ ಕೃತಿ : 7 ಮತ್ತು ಪದ್ಯಗಳು : 5
ಹವಿಗನ್ನಡ ಕೃತಿ : ಜೇನಹನಿ, ಚುಟುಕು ಸಂಗ್ರಹ, ಪು : 28

❶ ಹವಿಗನ್ನಡ ಒಂದು ಚೆಂದದ ಭಾಷೆ. ಹವಿಗನ್ನಡಲ್ಲಿ ಬರೆಕ್ಕು, ಜವ್ವನಿಗರು ಬರವಲೆ ಉತ್ತೇಜನ ಕೊಡೆಕ್ಕು ಹೇಳುವ ಉದ್ದೇಶದಿಂದ ಸುರುಮಾಡಿದೆ. ಮಂಗಳೂರಿನಿಂದ ಬಪ್ಪ 'ಕನ್ನಡ ಜನ ಅಂತರಂಗ' ಪತ್ರಿಕೆಲಿ ಸುಮಾರು ಎರಡೂವರೆ ವರ್ಷ 'ಹವ್ಯಕರಂಗ' ಹೇಳುವ ಅಂಕಣ ಬಂತು. ಇದರಿಂದಾಗಿ ಕರಾವಳಿ ಪ್ರದೇಶದ ಮಾಣ್ಯಂಗೊ, ಕೂಸುಗೊ ಹವ್ಯಕಲ್ಲಿ ಪದ್ಯ, ಲೇಖನ, ಚುಟುಕು, ಕಥೆ ಬರವಲೆ ಸ್ಫೂರ್ತಿ ಸಿಕ್ಕಿತ್ತು ಕೆಲವು ಅಂಕಣ ಬರಹಗಳ ಒಟ್ಟಿಂಗೆ ಸೇರ್ಸಿದ ''ಜೇನಹನಿ' ಹೇಳುವ ನಾಲ್ಕು, ಆರು, ಎಂಟು ಸಾಲಿನ ಚುಟುಕಂಗೊ ಪುಸ್ತಕ ರೂಪಲ್ಲಿ ಬಂದು ಜನಮೆಚ್ಚಿಗೆ ಸಿಕ್ಕಿದ್ದು.

ಆದರೆ ಹವ್ಯಕರಿಂದ ಯಾವ ಪ್ರೋತ್ಸಾಹವೂ ಸಿಕ್ಕಿತ್ತಿಲ್ಲೆ. ಹಾಂಗಾಗಿ ಈಗ ಹವಿಗನ್ನಡಲ್ಲಿ ಬರವದು ತುಂಬ ಕಮ್ಮಿ ಮಾಡಿದ್ದೆ.

❷ ಹವಿಗನ್ನಡ ಭಾಷೆಯ ಮೊದಲು ನಾವು ಒಳಿಶೆಕ್ಕು. ಮತ್ತೆ ಅದರ ಬೆಳೆಶೆಕ್ಕು. ಎಂತಕೆ ಹೇಳಿರೆ ನಮ್ಮ ಸಂಸ್ಕೃತಿಯ ಸಾರ ಸರ್ವಸ್ವ ಇಪ್ಪದೇ ಸಾಹಿತ್ಯಲ್ಲಿ. ಜನ ಪದ ಪದ್ಯ, ಕಥೆ, ಗಾದೆಗಳಿಂದ ತೊಡಗಿ ಇತ್ಲಾಗಿ ರಚನೆ ಆದ ಮಹಾಕಾವ್ಯ, ಕವನ, ಸಣ್ಣಕಥೆ, ಹರಟೆ, ನಾಟಕ, ಕಾದಂಬರಿ, ಲೇಖನಂಗಳವರೆಗೆ ಎಲ್ಲ ಬಗೆಯ ಕೃತಿಗಳಲ್ಲಿ ಹವೀಕರ ಆಚಾರ, ವಿಚಾರ, ಶಬ್ದ ಭಂಡಾರ, ಗುಣ ಸಂಪನ್ನತೆ, ವಿಶೇಷತೆಗೊ ಹಾಸುಹೊಕ್ಕಾಗಿ ಇದ್ದು.

ಜಾಗತೀಕರಣದ ಈ ಸನ್ನಿವೇಶಲ್ಲಿ ಹವಿಗನ್ನಡವ ಒಳಿಶಿಗೊಂಬಲೆ, ಬೆಳಶಲೆ ಸಾಧ್ಯವೋ ಹೇಳಿ ನಮ್ಮವು ಕೇಳ್ಲೆ ಸುರುಮಾಡಿದ್ದವು. ಪ್ರಯತ್ನ ಮಾಡಿರೆ ನಿಧಾನಲ್ಲಿ ಆದರೂ ಈ ಕೆಲಸ ಮಾಡ್ಲೆ ಎಡಿಗು. ಕವಿ ಹೇಳುವ ಹಾಂಗೆ

ದೇಶ ಏವದೆ ಇರಲಿ । ವೇಷ ಎಂತದೆ ಬರಲಿ ।
    ಭಾಷೆ ಹವ್ಯಕ ಇದರ ಮರೆವಲಾಗ ।
ಕಾಶಿ ರಾಮೇಶ್ವರವೊ । ಕಾಶ್ಮೀರ ಕೇರಳವೊ।
    ವಾಸ ಬದಲಿರು ಮಾತು ಬೇರೆ ಸಾಗ ॥
ಕನ್ನಡವ ಕಲಿಯೆಕ್ಕು । ಮತ್ತೆ ಹಿಂದಿಯು ಬೇಕು ।
    ಬೆನ್ನಿಂಗೆ ಕಲ್ತೊಂಬೊ ಆಂಗ್ಲ ಭಾಷೆ ।
ಚೆನ್ನೈಲಿ ತಮಿಳಿರಲಿ । ಕಣ್ಣೂರೊ ಮಲೆಯಾಳಿ ।
    ಬನ್ನಿ ಮನೆಯೊಳ ಬಿಡೆಡಿ ಹವಿಕ ಭಾಷೆ ॥

ಮನೆಯ ಒಳ ಹವಿಗನ್ನಡ ಭಾಷೆಯ ಬಿಡ್ಲಾಗ - ಇಂಗ್ಲೆಂಡ್, ಅಮೆರಿಕಕ್ಕೆ ಹೋದರೂ ಕೂಡಾ.

ಇನ್ನು ನಮಗಿಪ್ಪ ಒಳ್ಳೆಯ ಅವಕಾಶ ಹೇಳಿರೆ ಪತ್ರಲೇಖನ. ನಮ್ಮ ಅಣ್ಣ–ತಮ್ಮ –ಅಕ್ಕ –ತಂಗೆ – ಬಂಧುಗೊಕ್ಕೆ ಕಾಗದ ಬರವ ಪ್ರತಿಯೊಂದು ಸಂದರ್ಭಲ್ಲೂ (ಇಮೇಲ್ ಸಂದೇಶಲ್ಲಿ ಕೂಡಾ) ಹವಿಗನ್ನಡ ಉಪಯೋಗ್ಸಿರೆ ಅವಕ್ಕೂ ಕೊಶಿ, ನವಗೂ ಸಂತೋಷ. ಅದೇ ರೀತಿ ಹವ್ಯಕಲ್ಲಿ ಬರೆದ ಪುಸ್ತಕಂಗಳ (ಅಂತಹ ಕೃತಿಗಳ ಸಂಖ್ಯೆ ಹೆಚ್ಚಿಲ್ಲೆ) ತೆಕ್ಕೊಂಬ, ಓದುವ, ಪ್ರಚಾರ ಮಾಡುವ

ಕೆಲಸವ ಎಲ್ಲ ಹವೀಕರೂ ಮಾಡೆಕ್ಕು. ಮದುವೆ, ಉಪನಯನ, ಮನೆ ಒಕ್ಕಲು, ಹುಟ್ಟಿದ ಹಬ್ಬಂಗಳ ಸಂದರ್ಭಲ್ಲಿ ಉಡುಗೊರೆ ಕೊಡ್ಲೆ ಪುಸ್ತಕಂಗಳ ಉಪಯೋಗ ಮಾಡಲಕ್ಕು.

ಅಟ್ಟು ಮಡುಗಿರೆ ಸಾಕೊ ಬಹು ರುಚಿಯ ಖಾದ್ಯ
ಹಶುವಾಗಿ ತಿಂದು ನೋಡಿರೆ ಮಾತ್ರ ವೇದ್ಯ।
ಬರವೊರಿದ್ದರೆ ಸಾಲ ಓದುವ್ವವು ಬೇಕು
ಪುಸ್ತಕವ ಹೆರತಂದು ಕೊಡುವವುದೆ ಬೇಕು ।

ಹವ್ಯಕ ಸಂಘಟನೆ ಅಲ್ಲಲ್ಲಿ ಬೆಳೆತ್ತಾ ಇದ್ದು. ಗ್ರಾಮ ಸೀಮಾ, ವಲಯ, ಹೋಬಳಿ ಪರಿಷತ್ತುಗೊ ಹವ್ಯಕರ ಒಟ್ಟು ಕೂಡ್ಸಲೆ; ಅವರ ಮುಂದೆ ನಡೆಶಲೆ; ಬೇರೆ ಬೇರೆ ಕಾರ್ಯಕ್ರಮಂಗಳ (ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಇತ್ಯಾದಿ) ಹಾಕ್ಯೊಂಬುದು ಕಾಣುತ್ತು. ಆದರೆ ಆರೂ ಕೂಡ ಹವಿಗನ್ನಡ ಭಾಷೆ – ಸಾಹಿತ್ಯದ ಕಡೆಂಗೆ ಲಕ್ಷ ಹರಿಸಿದ್ದವಿಲ್ಲೆ. ಇನ್ನಾದರೂ ಈ ಪರಿಷತ್ತುಗೊ ಭಾಷೆ ಬಗ್ಗೆ ಚಿಂತನೆ ನಡೆಶೆಕ್ಕು. ಅದರ ಒಳಿಶಲೆ, ಬೆಳೆಶಲೆ ತಕ್ಕ ಕಾರ್ಯಕ್ರಮ ಹಾಕ್ಯೊಳ್ಳೆಕ್ಕು. ಸಾಹಿತ್ಯ ಶಿಬಿರ, ಸಭೆ, ಸಮ್ಮೇಳನ, ಚರ್ಚೆ, ಪ್ರಕಾಶನ ಇತ್ಯಾದಿಗಳ ನಡೆಶೆಕ್ಕು. ಅನುಪತ್ಯಂಗಳಲ್ಲಿ(ಜಂಬ್ರಂಗಳಲ್ಲಿ), ವಾರ್ಷಿಕೋತ್ಸವಲ್ಲಿ ಮಕ್ಕೊ, ಜವ್ವನಿಗರು ಭಾಷೆ ಬಗ್ಗೆ ಆಸಕ್ತಿ ತೋರ್ಸುವ ಹಾಂಗೆ ಮಾಡೆಕ್ಕು.

ಅಖಿಲ ಹವ್ಯಕವೂ ಸೇರಿದ ಹಾಂಗೆ ಹವ್ಯಕರ ರಾಜ್ಯಮಟ್ಟದ, ಹೋಬಳಿ ಮಟ್ಟದ, ಸಂಘಟನೆಗೊ ದೊಡ್ಡ ವ್ಯಾಪ್ತಿಯ ಸಮ್ಮೇಳನಂಗಳ ಮಾಡುತ್ತಾ ಇದ್ದವು. ಆದರೆ ಇದುವರೆಗೆ ಹವಿಗನ್ನಡಕ್ಕೆ ಏವದೇ ಸ್ಥಾನ ಸಿಕ್ಕಿದ್ದಿಲ್ಲೆ. ಭಾಷೆ ಒಳಿಶೆಕ್ಕಾದರೆ ಪ್ರತಿಯೊಂದು ಸಮ್ಮೇಳನಲ್ಲೂ ಹವಿಗನ್ನಡ ಬಗ್ಗೆ ಒಂದು ಗೋಷ್ಠಿ ಏರ್ಪಡ್ಸೆಕ್ಕು. ಜತೆಗೆ ಪುಸ್ತಕ ಪ್ರದರ್ಶ–ಮಾರಾಟ, ಕವಿಗಳ ಪರಿಚಯ, ಸ್ಮರಣೆ, ವಿಮರ್ಶೆ ಇತ್ಯಾದಿ ಕಾರ್ಯಕ್ರಮಂಗಳೂ ನಡೆಯೆಕ್ಕು. ವರ್ಷಕ್ಕೆ ಒಂದು ಸರ್ತಿ ಆದರೂ ಹವ್ಯಕ ಸಾಹಿತ್ಯ ಸಮ್ಮೇಳನ ವ್ಯವಸ್ಥೆ ಮಾಡೆಕ್ಕು. ಅದರಲ್ಲಿ ಹವಿಗನ್ನಡಕ್ಕೆ ಸ್ಥಾನ ಇರೆಕ್ಕು. ಹವಿಗನ್ನಡಕ್ಕೆ ಕೊಡುಗೆ ಕೊಟ್ಟ, ಕೊಡುವ ಹೆರಿಯೋರ, ಪ್ರತಿಭಾವಂತರ ಗುರ್ತಿಸಿ ಗೌರವ ಸಲ್ಲಿಸೆಕ್ಕು.

ಹವ್ಯಕ ಮಠಂಗೊ ಕೂಡ ಭಾಷೆಯ ಬಗ್ಗೆ ಆಸಕ್ತಿ ವಹಿಶೆಕ್ಕು. ಧಾರ್ಮಿಕ ಸಮ್ಮೇಳನಕ್ಕೆ

ಪೂರಕವಾಗಿ ಸಾಹಿತ್ಯ ಸಮಾವೇಶ, ಭಾಷಾ ವಿದ್ವಾಂಸರ ಸಮ್ಮಾನ, ಪುಸ್ತಕ ಪ್ರಕಟಣೆ ಇತ್ಯಾದಿ ನಡೆಶೆಕ್ಕು. ಗುರುಮನ್ನಣೆ ಸಿಕ್ಕಿರೆ ಜನಮನ್ನಣೆ ತಾನಾಗಿಯೇ ಬತ್ತು.

ಮಹಾಸಭೆ ''ಹವ್ಯಕ'' ಪತ್ರಿಕೆಗೆ ಭಾಷೆಯ ಬೆಳೆಶುವಲ್ಲಿ ದೊಡ್ಡ ಜವಾಬ್ದಾರಿ ಇದ್ದು. ಎಲ್ಲ ಹವೀಕರಿಂಗೆ ಅರ್ಥ ಅಪ್ಪುಲೆ ಹೇಳಿ ಕನ್ನಡಲ್ಲೇ ಲೇಖನಂಗಳ ಕೊಡುವುದರಿಂದ ಆರೂ ಕೂಡ ಹವಿಗನ್ನಡಕ್ಕೆ ಮರ್ಯಾದಿ ಕೊಡ್ತವಿಲ್ಲೆ. ಈ ಪತ್ರಿಕೆ ಕನಿಷ್ಟ ನಾಲ್ಕು ಪುಟ ಹವಿಗನ್ನಡ (ಅದ್ರಲ್ಲಿ ಎಲ್ಲಾ ಪ್ರದೇಶದ್ದು ಇರಲಿ) ಲೇಖನ, ಪದ್ಯಂಗಳ ಕಡ್ಡಾಯವಾಗಿ ಪ್ರಕಟ್ಸೆಕ್ಕು. ನಿಧಾನವಾಗಿ ಓದುಗರಿಂಗೆ ಹವಿಗನ್ನಡದ ಪ್ರಾದೇಶಿಕ ಪ್ರಭೇದಂಗಳ ಅರ್ಥೈಶಿಗೊಂಬಲೆ ಸಾಧ್ಯ ಆಗ್ತು.

ಇನ್ನಷ್ಟು ಬೆಳೆಶೆಕ್ಕು ಹವ್ಯಕರ ಭಾಷೆ
ಮುಟ್ಟೆಕ್ಕು ಮನೆವರೆಗೆ ಹೇಳಿ ನವಗಾಶೆ।
ಬರಲಿ ಚೆಂದದ ಗದ್ಯ, ತ್ರಿಪದಿ, ಹೊಸವಚನ
ದ್ವಿಪದಿ, ಚೌಪದಿ, ಕಂದ, ಷಟ್ಪದಿಯ ರಚನ।
ನಾಟಕವು, ಹರಟೆ, ಕಥೆ, ಗಾದೆ ರಸಪಾಕ
ಕಾದಂಬರಿಯು, ಹಾಸ್ಯ, ಸಾಂಗತ್ಯ ಚುಟುಕ।

✤ ✤ ✤

ಮ.ರಾ. ಹೆಗಡೆ ಸಂಪ
'ಪೂಜ್ಯಪಾದ ಕೃಷಿಕವನ'
ಅಂಚೆ ಆರಳಗೋಡು ಸಾಗರ – 577 421
ದೂರವಾಣಿ : 08186–243034
46 ವರ್ಷ. ಕೃಷಿಕ. ಪ್ರಕಟಿತ ಕೃತಿ : 2

ಹವಿಗನ್ನಡ ಕೃತಿ : ಕಾವ್ಯತೋರಣ, ಕವನ ಸಂಕಲನ 2002 ಪು: 80 ಇದ್ರಲ್ಲಿಪ್ಪ 62 ಕವನಗಳಲ್ಲಿ 6 ಕವನ ಹವಿಗನ್ನಡದಲ್ಲಿದ್ದು.

❶ ಮದಲ್ನೇದಾಗೀಽಽ ನಮ್ಮ್ ಮನೆ ಮಾತು ಹವ್ಯಕ. 'ಮನೆ' ಅಂದ್ರೆಽಽ ತಾಯಿ –ಗೃಹಿಣಿ. ಈ ತಾಯ್ಯೇ ನಮ್ಮೆಲ್ಲ್ರ ಗುರು ಹೌದಾ! ಅಂದ್ಮ್ಯಾಲೆ ತಾಯಿ

ಕಲ್ಸಿದ ಮಾತೆ ನಮ್ಮ್ ಮಾತೃಭಾಷೆ. ಹೀಂಗಾಗೀ ಯಾರಾದ್ರೂ ''ನಿನ್ನ ಮಾತೃ ಭಾಷೆ ಯಾವ್ದು?'' ಅಂತ್ಕೇಳಿದ್ರೆಽಽ ಥಟ್ ಅಂತ 'ಹವೀಕ್ಭಾಷೆ' ಅಂತ್ಹೇಳಿರ್ಮಾತ್ರ ಪೂರ್ಣ ಸತ್ಯ ಹೇಳ್ದ್ಹಂಗಾಗ್ತು. ಅದ್ಬಿಟ್ಟು 'ಕನ್ನಡ' ಅಂತ್ಹೇಳಿರೆ ನಾವ್ ಅರೋಶಿ (ಅರೆವಾಸಿ) ಸುಳ್ಳ್ ಹೇಳ್ತಾ ಇದ್ದು ಅಂತ್ಲೇ ಲೆಕ್ಕ. ಈ ಅರ್ಥದಲ್ಲಿ ಪೂರ್ತಿ ನಮ್ದಲ್ದೇ ಇದ್ದ ಭಾಷೆಲಿ ಬರ್ದ ಸಾಹಿತ್ಯಕ್ಕಿಂತ ಅಪ್ರಂಜಿಯಂಥಾ ಹವೀಕ್ ಭಾಷೆಲಿ ನಮ್ಮ್ ಮನಸ್ಸಿನ ಭಾವ್ನೆನೆಲ್ಲ ಹ್ವರಗೆಡಗಿದ್ದೇ ಹೌದಾದ್ರೇಽಽ ಅಂಥ ಸಾಹಿತ್ಯ ನಮ್ಮ್ ಮೈಮನ್ಸಿಗೆಲ್ಲಾ ಅಮೃತಾಗ್ಲಕ್ಕು; ಆ ಯೋಗ್ಯತೆ ಇದಕ್ಕಿದ್ದೇ ಇದ್ದು ಅಂತ್ಹೇಳಿ ಯೋಚ್ನೆ ಬಂದಿದ್ದೇ ತಡ –

1) ಬಿತ್ತಿದ್ದನ್ನೇ ಬೆಳೆಯೋದಾದ್ರೆ ಹವ್ಯಕ ಸಂಸ್ಕೃತಿ ಯಾಕ್ ಬಿತ್ಲಾಗ....

2) ಮಲ್ಲಿಗೆ ಹೂವನು ಮುಚ್ಚಿಡ್ಬಕ್ಕು ಪರಿಮಳ ಮುಚ್ಚಿಡಲಾಗ್ತಿಲ್ಲೇ....

– ಇತ್ಯಾದಿತ್ಯಾದಿ ಒಂದೆರಡ್ಮೂರ್ಪದ್ಯ ಗಿಂಪ್ಚಿ ಹಾಕ್ಕ್ಯಂಡು ಯನ್ನೊಳಗೊಳಗೇ ಖುಷಿ ಪಟ್ಟೆ; ಅಷ್ಟಕ್ಕೇ ಬಿಟ್ಟೆದ್ನಿಲ್ಲೇಽಽ; ಹ್ವರಗೂ ಸ್ವಗದ್ಬಿಟ್ಟೆ (ಹಾಡಿದೆ)

ಯೆರಡ್ನೇದಾಗೀಽಽ ಹವೀಕ್ ಭಾಷೆ ಆಡದ್ರಿಂದ ನಾಲ್ಗೆ ತೆಳುವಾಗ್ತು; ಹೀಂಗ್ ಪಳಗಿದ ನಾಲ್ಗೆ ನಮಗ್ಬೇಕಾದ್ಹಾಂಗ್ ತಿರುಗ್ತು; ಶಬ್ದೋಚ್ಚಾರ ಶುದ್ಧಾಗ್ತು; ಬರವಣ್ಗೇಲಿ ಒತ್ತು–ಇಳಿ–ಸ್ವರಭಾರ ಮುಂತಾದ್ನೆಲ್ಲ ಹ್ಯಾಂಗ್ ಬಳಸಕು ಹೇಳದು ಗೊತ್ತಾಗ್ತು; ಇದ್ನೆಲ್ಲ ತಿಳ್ಕಂಬ ಚಿಕಿತ್ಸಕ ಬುದ್ಧಿ ಬೈಳೀತು; ಈಗಿನ ಶ್ರವಣ–ದೃಶ್ಯ –ಲಿಖಿತ ಮಾಧ್ಯಮದಲ್ಲಿ ಮನಸೋ ಇಚ್ಛೆ ಉದುರ್ಸ 'ಅಸಂಬದ್ಧ ಪ್ರಲಾಪ'ದಲ್ಲಿ ವ್ಯಾಕರ್ಣದ 'ಗುಣ' ಎಷ್ಟಿದ್ದು? ಯಂತಿದ್ದು? (ಗುಣ ಹುಡುಕ ಕೆಲ್ಸವೇ ಸೋವಿ ಮತ್ತು ಸಾಧು; ದೋಷ ನಮಗ್ ಬ್ಯಾಡ) ಅಂತೆಲ್ಲ ಹುಡುಕಿ ತಿಳಕಂಬ್ಲಾಗ್ತು. ಇಷ್ಟೆಲ್ಲಾ ವೈನಾದ (ಒಳ್ಳೇ) ಅವಕಾಶ ಇದ್ರಲ್ಲಿದ್ದಿದ್ಯಾಕಿ ಆನು ಹವೀಕ್ ಭಾಷೆ ಬಳಸ್ತಾ ಇದ್ದಿ.

ಮೂರ್ನೇದಾಗೀಽಽ ಹವ್ಯಕ ಯನಗೆ ಆಪ್ತವಾದ ಭಾಷೆ. ಇದ್ರಿಂದ ಯೆನ್ನ್ ಜೀವನ್ದಲ್ಲಿ ಸಾಕಷ್ಟು ಉತ್ಕರ್ಷ ಉಂಟಾಯ್ದು. ಪರಭಾಷಿಕರ ಜ್ವತೇಲಿ ಮಾತಾಡ್ತಾ

ಇದ್ದಾವಗ, ಅವ್ರ ಮುಖಮಂಡಲವೆಂಬ ಕನ್ನಡಿಯಲ್ಲಿ ಹವ್ಯಕ ಭಾಷಾ ಸೊಗಡಿನ ಸತ್ಪರಿಣಾಮ ಏನಾಯ್ದು? ಎಷ್ಟಾಯ್ದು? ಅದು ಹ್ಯಾಂಗ್ ಪ್ರತಿಫಲಿಸ್ತಾ ಇದ್ದು? – ಇಂತ ರಸಾನುಭೂತಿಯನ್ನ ಆನು ಅನೇಕ್ಸಲ ಅನುಭವಿಸಿದ್ದಿ.

ನಾಕ್ನೇದಾಗಿss ಮುಖ್ಯವಾಗಿ ಯಂಗಳ ಮರಗುಡಿ ಸೀಮೆ ಹವೀಕ್ ಭಾಷೆಯನ್ನ ಯಥಾವತ್ತಾಗ್ಗಿ ಉಳಿಸ್ಗ್ಯಳಕು; ಬೆಳಸಕು ಅಂತ್ಹೇಳಿ ತೀವ್ರವಾದ ತುಡಿತ ಯನಗಿದ್ದು.

ಒಟ್ಟ್ರಾಶಿ ಹೇಳಕು ಅಂತಾದ್ರೆ ಹವೀಕ್ ಭಾಷೆಲಿ ಮಾತಾಡದಾದ್ರೆ, ಕಥೆ – ಕವನ ಬರೆಯದಾದ್ರೆ, ಹಾಸ್ಯದ ಹೊಳೆ ಹರಿಸ್ಲಕ್ಕು; ಸಾಕಷ್ಟು ಗಾದೆ ಮಾತ್ಬಳಸ್ಲಕ್ಕು; ಚುಟುಕಾಗಿ –ಮೊನಚಾಗಿ ಹೇಳ್ಳಕ್ಕು; ಒಗಟೊಗಟಾಗಿ ಹೇಳಿದ್ರೂ ಕೌತುಕ ಸ್ವಾರಸ್ಯ – ರಂಜನೆ – ಕುತೂಹಲ ಮೂಡ್ಸಲಕ್ಕು; ಗ್ರಹಿಕರ (ಆಸ್ವಾದಿಸುವವರ) ಮನ್ಸನ್ನು ಸುಲ್ಭದಲ್ಲಿ ಗೆಲ್ಲಲಕ್ಕು; ಜೀವನ ಮಾರ್ಗದ – ಸ್ವಾನುಭವದ ಬೇಕಾದಷ್ಟ್ ಉದಾಹರಣೆ ಕೊಡ್ಲಕ್ಕು; (ನನ್ನ ಪದ್ಯಗಳನ್ನೆಲ್ಲ ಗಮನ್ಸಿ) ಒಗ್ಗಟ್ಟ್ ಸಾಧ್ಸಲಕ್ಕು; ಇಕ್ಕಟ್ಟಿಗೆ ಸಿಕ್ಕಸ್ಲಕ್ಕು, ಬಿಕ್ಕಟ್ಟ್ ತಂದ್ಕಳ್ಳಕ್ಕು ; ಮುಗ್ಗಟ್ಟಿಗ್ ಸಿಕ್ಕ್ಯಳ್ಳಕ್ಕು. ಇನ್ನೊಬ್ರ ಮನ್ಸನ್ನ ಅರಳ್ಸದ್ರಲ್ಲಿ ಇದು 'ಸ್ಮರಬಾಣ' ಹಾಂಗೇ ಕೆರಳ್ಸದ್ರಲ್ಲಿ ಇದೇ 'ರಾಂಬಾಣ'. ಹೌದಾ! ಹ್ಯಾಂಗೇ! ಹೇಳಿ ನಾರಣಣ್ಣ.

ಈ ಮೊದ್ಲಾದ ಕಾರ್ಣಕ್ಕಾಗಿ ಆನು ಹವೀಕ್ ಭಾಷೆಲಿ ಬರೀತಾ ಇದ್ದಿದ್ದು. ಯನ್ನ್ ತಿಳಿವಳಿಕೇಲಿ ಯೆಂತಾರೂ ತಪ್ಪಿದ್ರೆ ಹೇಳ್ರೋ ಮಾರಾಯ್ರಾ! ನಿಮ್ಮ್ ಮಾತಿಗೆ ಬೆಲೆ ಕೊಟ್ಟು ತಿದ್ದ್ಕ್ಯಂಬ್ಲೆ ಆನು ತೈಯಾರಿದ್ದಿ.

❷ ನಮ್ಮ್ ನಾಲ್ಗೆಲಿಪ್ಪ ಇಂಥ 'ಮುತ್ತಂಥ ಮಾತು' ಇವತ್ತು ಪ್ಯಾಟೆ – ಪಟ್ಟದ ಬೈಡಗಿಗೆ ಸಿಕ್ಕಿ 'ಮಸಿಕೆಂಡ' ಆಗ್ತಾ ಇದ್ದು. ಮಾತು ಮಸಿಕೆಂಡ ಆಗ್ದೇ ಮುತ್ತಾಗ್ಯೇ ಇರಕು ಹೇಳೋ ಬದ್ಧತೆ ನಮಗಿದ್ದಿದ್ದೇ ಹೌದಾದ್ರೆ ನಾವ್ ಇವತ್ನಿಂದ್ಲೇ ಹವೀಕ್ ಭಾಷೆ ಉಳ್ಸಕು – ಬೆಳ್ಸಕು – ಬೈಳಸಿ ಬಯಸಿದ್ನೆಲ್ಲಾ ಗಳಸಕು.

ಸಜ್ಜನ್ರ ಮನ್ಸಿಗೆ ಸ್ಮರಬಾಣ–ದುರ್ಜನರ ದುರ್ನಡತೆಗೆ ರಾಂಬಾಣವಾಗಿ ಸಮಯ ಸಂದರ್ಭೋಚಿತವಾಗಿ ಬಳಸಿ, 'ಸರ್ಕಾರ ಕೈಬಿಟ್ಟ ನಮ್ಮ್ ಸಮಾಜ'ದ

ಸ್ವಾಸ್ಥ್ಯ ಕಾಪಾಡ್ಕೆಬೇಕಾದ ಬಾಳಾ ದೊಡ್ಡ ಹೈಣೆ ನಮ್ಮೆಲ್ರಮೇಲೆ ಇದ್ದು.

★ ಹವೀಕ್ರು ಒಟ್ಸೇರೋ ಯಾವ್ದೇ ಜಾಗ ಇರ್ಲಿ, ಸಭಾ ಭವನ ಮತ್ತು ಆವರಣದಲ್ಲೆಲ್ಲಾ ಸೂಚನೆ ಅಥ್ವಾ ನಡವಳಿಕೆ ಫಲಕ ಹವ್ಯಕ ಭಾಷೆಯಲ್ಲಿರಕು.

★ ಹೆಂಗ್ಸ್ರು ಈ ಭಾಷೆ ಹೆಚ್ಚೆಚ್ಚು ಬಳಸಹಂಗೆ ಹುರಿದುಂಬ್ಸ್‌ಲಕ್ಕು. ಆವಾಗ ಗೆಲುವಿನ ಬಾಗಿಲು ತೆರವಾತು ಅಂದ್ಕಳ್ಳಕ್ಕು.

★ ಶಾಲೆ – ಕಾಲೇಜ್‌ಗೆ ಹೋಪ ಮಕ್ಕಳ ಪೈಕಿ ಹವೀಕ್ರ ಹವೀಕ್‌ರೇ ಸೇರ್ದಾವಗ ಪರಸ್ಪರ ಹವೀಕ್‌ಭಾಷೆಲಿ ಮಾತಾಡ ಹಂಗೆ ಮಕ್ಕಿಗೆ ಹೇಳ್ಳಕ್ಕು.

★ ನಮ್ಮ ಮಾತೃಭಾಷೇನ ನಾವೇ ಕೊಲ್ತಾ ಇದ್ದು. ಹ್ಯಾಂಗೇ ಅಂದ್ರೇ.. ಒಂದ್ಸೀಮೆ ಭಾಷೆಗೂ ಮತ್ತೊಂದ್ ಸೀಮೆ ಭಾಷೆಗೂ ಮಧ್ಯೆ ಸಾಕಷ್ಟು ಭಿನ್ನ ಸ್ವರೂಪ ಇದ್ದು. ಇದು ಹೀಂಗಿದ್ರೇ ಚಂದ. ಆದ್ರೆ ಈ ಸೀಮೇಂವ್ನ ಮಾತ್ನ ಆ ಸೀಮೇಂವ ತನಗ್ ಅರ್ಥ ಆಗ್ದೇ (ಅಥವಾ ಅಪಾರ್ಥ ತಿಳ್ಕಂಡು) ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಗೇಲಿ – ವ್ಯಂಗ್ಯ – ಪರಿಹಾಸ್ಯ ಮಾಡೋ ದುಷ್ಪ್ರವೃತ್ತಿಯನ್ನು ಕಡ್ಡಾಯವಾಗಿ ನಿಲ್ಸಕು. ಹವ್ಯಕರಲ್ಲೇ "ಭಾಷಾ ಸಾಮರಸ್ಯ" ಮೂಡ್ಸೋ ಅಗತ್ಯ ಇದ್ದು. ನಮ್ಮ್ ಸೀಮೆ ಭಾಷೆಯೇ 'ಬಾಳಾವ್ಯೆನಾದ್ದು' ಅಂದ ತಿಳ್ಕಂಬ ಬೃಹಸ್ಪತಿಗಳ ಬಗ್ಗೆ ಯನಗೆ ತಾತ್ವಿಕ – ತಾರ್ಕಿಕ ಬೇಸ್ರ ಇದ್ದು. ಅಭಿಮಾನ ಇಪ್ದು ಸರಿ; ಆದ್ರೆ ಭಾಷಾದುರಭಿಮಾನದಿಂದ ಸೃಜನಶೀಲತೆ – ಅಂತರ್ಗತ ಭಾವ್ನೆಗಳು ಕಮರಿ ಹೋಗ್ತಾಗ ಹೇಳದ್ಯೆನ್ನ ಅಭಿಪ್ರಾಯ. 'ಹೆತ್ತಪ್ಪಿಗೆ ಹೆಗ್ಣ ಮುದ್ದು' – 'ಕಾಗೆಗೆ ತನ್ನ ಮರಿ ಹೊನ್ನಮರಿ' – ಇತ್ಯಾದಿ ನೆಲೆಯಲ್ಲಿಯೇ ಅನ್ಯರ ಭಾಷೆ ಬಗ್ಗೆಯೂ ಗೌರವ ಕೊಟ್ರೆ ಯಾವ ಹವ್ಯಕನೂ ಹವೀಕ್ ಭಾಷೆ ಆಡದನ್ನ ಖಂಡಿತಾ ಬಿಡ್ತಿಲ್ಲೆ. ಆವಾಗ್ಲೇ ಭಾಷಾ ಸಮೃದ್ಧಿ ಉಂಟಾಗ್ತು.

★ ಪ್ರಬಂಧ ರಚನೆ : ಹವ್ಯಕರೊಳ್ಗೆ ಸರ್ವವ್ಯಾಪಿ ಆಗ್ಲೇ ಬೇಕಾದ ಒಂದು ವಿಷಯದ ಬಗ್ಗೆ ಕೇಂದ್ರವೇ ಒಂದು ಮುದ್ರಿತ ಸಿದ್ಧ ಪ್ರಬಂಧವನ್ನ ತೈಯಾರ್ ಮಾಡಿ, ಭಾಷಾ ವೈವಿಧ್ಯ ಇಪ್ಪ ಸೀಮೆಯ ಲೆಕ್ಕ ತರ್ಸಿಗ್ಯಂಡು ಆಯಾ ಸೀಮೆಯ ಹವ್ಯಕ ಭಾಷಾ ಲೇಖಕ (ಒಬ್ರು/ಇಬ್ರು) ರಿಗೆಲ್ಲ ಕಳ್ಸಿಕೊಟ್ಟು ಆ ಗ್ರಾಂಥಿಕ ಕನ್ನಡ ಪ್ರಬಂಧವನ್ನ ಹವ್ಯಕ ಭಾಷೆಲಿ ಬರ್ದು ಕಳ್ಸಲೆ ವಿನಂತಿ ಮಾಡ್ಲಕ್ಕು. ಅವ್ರ ಕಲ್ಪನೆ – ಸಾಮರ್ಥ್ಯ – ಸೃಜನಶೀಲತೆಗಳೆಲ್ಲವೂ ಅರಳಿ ನಿಲ್ಲುವ ಹಂಗೆ, ಅದ್ರಲ್ಲಿ ಒಗಟು – ಗಾದೆ – ಉದಾಹರಣೆ – ಇಂಥವ್ನೆಲ್ಲ ಬಳಸಲೆ ಅವಕಾಶ ಕೊಟ್ರೆ, ಗ್ರಾಂಥಿಕ ಸಿದ್ಧ ಪ್ರಬಂಧಕ್ಕೂ, ಈ ಸಾಹಿತಿಗಳು ಕಡೆದಿಟ್ಟ ಪ್ರಬಂಧಕ್ಕೂ ಇರೋ ವ್ಯತ್ಯಾಸ ಗೊತ್ತಾಗ್ತು. ಇದ್ರ ಜ್ವತಿಗೆ ಒಂದೇ ವಿಷ್ಯವನ್ನ ಬೇರೆ ಬೇರೆ ಸೀಮೆ ಭಾಷಿಕ್ರು ಹ್ಯಾಂಗ್ಗ್ ಬರದ್ವ; ಆ ಸೀಮೆಲಿ ಈ ಶಬ್ದಕ್ಕೆ ಯಂತ ಹೇಳ್ತ ಇತ್ಯಾದಿತ್ಯಾದಿ ವಿವರ ಸಿಗ್ತು. ಇದ್ರಿಂದ ಮುಂದೊಂದಿನ ಭಾಷಾ ಅಧ್ಯಯ್ನಕ್ಕೂ ಸಹಾಯ ಆಗ್ತು. ಎಲ್ಲವ್ದಕ್ಕಿಂತ ಮುಖ್ಯವಾಗಿ ಎಲ್ಲಾ ಸೀಮೆಯ ಹವೀಕ್ಭಾಷೆಯೂ ನೀರ್ಕುಡದಷ್ಟು ಸುಲ್ಭದಲ್ಲಿ 'ಗ್ರಂಥಸ್ಥ' ವಾಗ್ಬುಡ್ತು. ಇಷ್ಟೇ ಅಲ್ಲ; ಹವ್ಯಕ ಸಮಾಜ ಅಧ್ಯಯ್ನ ಕೇಂದ್ರಕ್ಕೆ ಇದೊಂದು ಶಾಶ್ವತ ಅತ್ಯಮೂಲ್ಯ ಆಸ್ತಿ ಆಗ್ಲಕ್ಕು.

ಇದರ ಯರಡ್ನೇ ಕಂತಿನಲ್ಲಿ, ಸೀಮೆ ಸಾಹಿತಿಗಳು ತಂತಮ್ಮ್ ಸೀಮೆಲಿಪ್ಪ ಚಾರಿತ್ರಿಕ–ಐತಿಹಾಸಿಕ–ಸಾಂಸ್ಥಾನಿಕ–ಧಾರ್ಮಿಕ–ಸಾಮಾಜಿಕ–ಅಲೌಕಿಕ –(ಪವಾಡ–ದರ್ಶನ ಪಾತ್ರಿ ವಗೈರೆ) ಪ್ರಾಕೃತಿಕ–ಪ್ರಾಸಂಗಿಕ (ಆಯಾ ಸಂದರ್ಭಗಳ) ವಿಷ್ಯಗಳ ಬಗ್ಗೆ ಪ್ರತಿ ಬಾರಿಯೂ ಒಂದೊಂದ್ ವಿಷ್ಯದ ಬಗ್ಗಾಗಿ ಬರ್ದು ಕಳ್ಸಿ, ಅಂತ್ಹೇಳಿ ಮನವಿ ಮಾಡ್ಕ್ಯಂಡ್ರೆ, ಹವ್ಯಕ ನೆಲೆಯ ಎಲ್ಲ ಭಾಗಗಳ ಸಮಗ್ರ ಚಿತ್ರಣ, ಅಪ್ರಂಜಿ ಹವೀಕ್ ಭಾಷೆಲಿ ಲಭ್ಯ ಆಗ್ತು. ಸದಭಿರುಚಿಯ ವಿಷಯಾಸಕ್ತರಿಗೆ ಸಮೃದ್ಧ ಆಹಾರ ಸಿಕ್ತು. ಕೇಂದ್ರ ಈ ಬಗ್ಗೆ ಆಸಕ್ತಿವಹ್ಸಿ ಆವರ್ತನ ಪದ್ಧತಿ ತಂದ್ರಂತೂ (ಪ್ರತಿಯೊಬ್ಬ

ಸಾಹಿತಿಗೂ ಎಲ್ಲಾ ಸೀಮೆಯ ಸಾಹಿತ್ಯದ ನೆರಳಚ್ಚು ಪ್ರತಿ ಕಳ್ಸಿ ಕೊಡುವ ಪದ್ಧತಿ) ಎಲ್ಲ ಸಾಹಿತಿಗಳ ಶೈಲಿ ಹಸ್ತಾಕ್ಷರ– ಭಾಷಾ ವೈವಿಧ್ಯ– ಯೋಚ್ನಾ ಲಹರಿ– ಬರವಣ್ಗೆಯ ದಿಕ್ಕು– ದೆಸೆ ಹೀಂಗೆ ಎಲ್ಲವೂ ಎಲ್ಲರಿಗೂ ಸಿಗ್ತು.

★ ಪತ್ರಕಾಮೇಷ್ಟಿ : ಈ ಯೋಚ್ನೆ ಜಾರಿಗೆ ತಂದ್ರೆ ಪುತ್ರಕಾಮೇಷ್ಟಿಗಿಂತ ಮಹತ್ವಾಕಾಂಕ್ಷೆಯ ಯೋಜ್ನೆ ಆಗ್ಲಕ್ಕು. 'ಕೇಂದ್ರ'ದ ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಪ್ರತಿ ಎರ್ಡೋ ಮೂರೋ ತಿಂಗ್ಳಿಗೊಂದ್ಸಲ ಕಡ್ಡಾಯ್ವಾಗಿ ಹವೀಕ್ ಭಾಷೆಲಿ ಒಂದ್ ಪತ್ರ ಬರ್ದು ಕಳ್ಸದು. ಆಯಾ ಅವಧೀಲಿ ಘಟಿಸಿದ ವಿಷಯಗಳ ವರದಿ ರೂಪ್ದಲ್ಲಿ ಈ ಪತ್ರ ಇದ್ರೆ ಓದಲೆ ಇಷ್ಟ ಆಗ್ತು ಬದುಕಿನ ಸುಖ–ದುಃಖ, ಮದುವೆ–ಮುಂಜಿ, ಗದ್ದೆನಾಟಿ– ಕೊನೆಕೊಯ್ಲು– ಆಲಮನೆ– ಕೋಳಿಪಡೆ ವಿದ್ಯುತ್ ಕಡಿತ– ಕಾಡ್ ಕ್ವಾಣನ ಹಾವಳಿ– ಅಡಿಕೆರೇಟು– ಚಾಲಿಸುಲಿತ– ಕೊಳೆ ಬಾಧೆ– ಮಂಗನ ಲೂಟಿ– ಲೌವ್ವು– ಡೈವೋರ್ಸು– ಆ್ಯಕ್ಸಿಡೆಂಟು – ಹೀಂಗೇ ಎಲ್ಲಾ ವಿಷ್ಯಗಳ್ನೂ ದಾಖ್ಲು ಮಾಡ್ಬೈಕ್ಕು. (ಖಾಸ್ಗಿ ವಿಷ್ಯದ ಹಂಗು ಬ್ಯಾಡ) (ಇದನ್ನೂ ಆವರ್ತನ–ವಿನಿಮಯ ಪದ್ಧತಿಗ್ ತರ್ಲಕ್ಕು). ವರ್ಷದ ಕ್ವನೆಗೆ ಎಲ್ಲರ ಪತ್ರಗಳ ವಜೆಗಟ್ಟು (ಮೌಲ್ಯಮಾಪನ) ನೋಡಿ ಬಹುಮಾನ ನೀಡ್ಬೈಕ್ಕು. ಹೀಂಗ್ಗ್ ಬಹುಮಾನ ನೀಡದ್ರಿಂದ ಪತ್ರ ಬರಿಯಲೆ ಉತ್ಸಾಹ ಉಂಟಾಗ್ತು.

ಕಡೇದಾಗೀಽಽ ಹ್ವನ್ನಾವ್ರದ ಹವ್ಯಕನ್ನಡ ಸಾಹಿತ್ಯ ಸಮ್ಮೇಳನದ ಸಭಾ ಕಲಾಪಗಳೆಲ್ಲವ್ನೂ ಹವೀಕ್ ಭಾಷೆಲೇ ಸಂಪನ್ನಗೊಳ್ಳ ಹಂಗೆ ಮಾಡಿ, ಹವಿಗನ್ನಡ ಉಳ್ಸಿ ಬೆಳ್ಸುವ ದಿಟ್ಟ ಹೆಜ್ಜೆ ಇಡಕು. ಆಮೇಲೆ ದಾರಿ ಸುಗಮ ಆಗ್ತಾ ಇರ್ತು.

ಹವಿಗನ್ನಡ ಉಳೀಲಿ ! ಬೆಳೀಲಿ !! ಎಲ್ಲರ ಬಾಯ್ಗೆಟುಕ್ಲಿ!! ಕೈಲಿ ನಲೀಲಿ!!! ಅಂತ ಹೊಟ್ಟೆ ಕಳ್ಳಿಂದ ಹಂಬಲಿಸ್ತಾ

ಈ ಪತ್ರ ಕಳ್ಸಿಕೊಡ್ತಾ ಇದ್ದಿ ಹರೇರಾಮ್

✣ ✣ ✣

ಪಡಾರು ಮಹಾಬಲೇಶ್ವರ ಭಟ್ಟ ಮಂಚಿ
ಬಂಟವಾಳ, ದಕ್ಷಿಣ ಕನ್ನಡ – 574 323
ದೂರವಾಣಿ :08255–276211
72 ವರ್ಷ. ಕೃಷಿಕ, ಸಾಹಿತಿ
ಪ್ರಕಟಿತ ಕೃತಿ : 14

ಹವಿಗನ್ನಡ ಕೃತಿ : ನಂಬ್ರಂದ ಜೆಂಬ್ರಕ್ಕೆ ನಾಟ್ಕ 1993 ಪುಟ : 48

❶ ಆನು ಸಣ್ಣದಿಪ್ಪಾಗ ಎನ್ನ ಮನೆಲಿ ಎಂಗಳ ನೆಂಟ್ರುಲ್ಲಿ ಹೇಳಿ ಹೆಮ್ಮಕ್ಕೊ ಹೇಳುವ ಹಾಡುಗಳ ಪಳಮೆ ಅಜ್ಜಿ ಕತೆಗಳ ಕೇಳೂದು ಹೇಳಿದರೆ ಎನಗೆ ತುಂಬ ಇಷ್ಟ, ಭಾರಿ ಕೊಶಿ ಕೂಡಾ. ಹಾಂಗೆ ಪುರುಸೊತ್ತು ಸಿಕ್ಕಿಪ್ಪಾಗ ಕೇಳಿದ್ದರ ಬರಕೊಂಬ ಚಟವೂ ಇದ್ದತ್ತು. ಎನ್ನ ಆಸಕ್ತಿ ನೋಡಿ ಕೆಲವು ಸಾಹಿತಿ ಸ್ನೇಹಿತಂಗೊ ಎನ್ನಂದ ಹವೀಕರ ಭಾಷೆಯ ಸಾಹಿತ್ಯಂಗಳ ವಿಷಯಲ್ಲಿ ಲೇಖನಂಗಳ ಬರೆಶಿದವು ; ಭಾಷಣ ಮಾಡಿಸಿದವು. ಅದೆಲ್ಲ ಕನ್ನಡಲ್ಲೆ ನೆಡದತ್ತು. ಎನ್ನ ಮನೆ ಭಾಷೆಲಿಯೇ ಬರೆಯಕ್ಕು ಹೇಳುವ ಮನಸ್ಸಾದ್ದುದು ಸಾಗರದ ಸುಬ್ಬಣ್ಣಂದ. ಅವ 1960ರಲ್ಲಿ ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನವ ಎನ್ನ ಗಮನಕ್ಕೆ ತಂದ ಮೇಲೆ ಹಾಂಗೆ 'ಹವಿಗನ್ನಡ'ಲ್ಲಿ ಬರವಲೆ ತೊಡಗಿದೆ. ಅದುದೆ ಅಪ್ರೂಪಕ್ಕೊಂದರಿ ಬರೆತ್ತಾ ಇದ್ದೆ. ಬರವದರ ಬಿಟ್ಟದಿಲ್ಲೆ.

❷ ಎನ್ನ ಮನೆಮಾತು ವಿಟ್ಲಸೀಮೆ ಹವೀಕರ ಕನ್ನಡ. ಆನು ಸಣ್ಣಾದಿಪ್ಪಾಗ ಅದೊಂದೇ ಹವೀಕರ ಜಗತ್ತು ಹೇಳಿ ಗ್ರೇಶಿಯೊಂಡಿತ್ತಿದ್ದೆ. ಮತ್ತೆ ಎನ್ನ ಅಜ್ಜನ ಮನೆ ಇಪ್ಪ ಕುಂಬಳೆ ಸೀಮೆಗೆ, ಹೆಂಡತ್ತಿ ಅಬ್ಬೆಯ ಮನೆ ಇಪ್ಪ ಪಂಜ ಸೀಮೆಗೆ ಹೋದಲ್ಲಿ ಅಷ್ಟಿಷ್ಟು ವ್ಯತ್ಯಾಸಂಗೊ ಕಂಡುಗೊಂಡಿತ್ತು. ಹಾಂಗೆ ವರ್ಷವೂ ಗೋಕರ್ಣ ಕ್ಷೇತ್ರಂದ ಪುರೋಹಿತ ಶಂಕರಲಿಂಗರು, ಮತ್ತೆ ಅಪ್ರೂಪಕ್ಕೊಂದರಿ ಸಾಗರದ ಪುರಪ್ಪೆಮನೆಂದ ಹತ್ರಣ ನೆಂಟ್ರು ಇನ್ನು ಸಿರ್ಸಿ ಸೀಮೆಯ ಆಪ್ತಸ್ನೇಹಿತ್ರು ಎಂಗಳಲ್ಲಿಗೆ ಬಂದು ಹೋಗ್ಯೊಂಡಿಪ್ಪಾಗ ಅವರೊಟ್ಟಿಂಗೆ ಮಾತುಕತೆ ಮಾಡ್ಯೊಂಡಿಪ್ಪಾಗ ಮತ್ತಷ್ಟು ವ್ಯತ್ಯಾಸಂಗೊ ಕಂಡೊಂಡಿತ್ತು. ಅಲ್ಲದ್ದೆ 1955ರ ಸುಮಾರಿಂಗೆ ಗಟ್ಟದ ಮೇಗಂದ ಶ್ರೀ ಗುರುಗಳ ಸವಾರಿ ಇತ್ಲಾಗಿ ಬಂದೇಡಿಪ್ಪಾಗ

ಅವರೊಟ್ಟಿಂಗಿದ್ದ ಪರಿವಾರ ಜನಂಗೊ ಅವ್ವವು ಮಾತಾಡ್ತೊಂಡಿದ್ದರ ಕೇಳುವಾಗಳೂ ಶಬ್ದ ಸ್ವರೋಚ್ಚಾರಂಗಳಲ್ಲಿ ಇನ್ನಷ್ಟು ವ್ಯತ್ಯಾಸಂಗೊ ಎನಗೆ ಕಂಡೊಂಡಿತ್ತು. ಹೀಗೆಲ್ಲಾ ಇಪ್ಪಾಗ ಹೇಂಗೆಲ್ಲಾ ಬರೆಯಲಿ? ಆರಿಂಗಾಗಿ ಬರೆಯಲಿ? ಎಂತೆಲ್ಲ ಬರೆಯಲಿ? ಹೇಳುವ ಪ್ರಶ್ನೆ. ಸಮಸ್ಯೆಗೊ ಎದ್ದು ಕಾಣುತ್ತಾ ಇದ್ದು. ಆತು ಉಮೇದಿಲಿ ಬರತ್ತು ಹೇಳಿ ತಿಳ್ಕೊಂಬೊ. ಬರದ್ದರ 'ಪ್ರಿಂಟು' ಮಾಡುವೋರು ಬೇಕು. ಪ್ರಕಟ ಮಾಡುವೋರು ಬೇಕು. ಪ್ರಕಟ ಪ್ರಚಾರ ಪ್ರಸಾರ ಮಾಡುವೋರು ಬೇಕು. ಇದಕ್ಕೆಲ್ಲ ಒಂದು ಒಳ್ಳೆಯ ವೇದಿಕೆ ಬೇಕು. ಹಾಂಗಿದ್ದರೆ ಹೇಂಗಾರು ಎಲ್ಲಿಯಾರು 'ಹವಿಗನ್ನಡ'ದ ಒಳಶುಲಕ್ಕು ಬೆಳೆಸುಲಕ್ಕು.

✤ ✤ ✤

ಶಂ. ನಾ. ಖಂಡಿಗೆ "ಶ್ಯಾಮಕೃಪಾ" ನಾಗೋಡಿ
ಅಂಚೆ : ಪೆರ್ಲ, ಕಾಸರಗೋಡು –671 552
ದೂರವಾಣಿ : 04998–225474
40 ವರ್ಷ. ಕೃಷಿಕ, ಸಾಹಿತಿ. ಹವಿಗನ್ನಡ ಅಂಕಣಕಾರ
ಪ್ರಕಟಿತ ಕೃತಿ : 1

ಹವಿಗನ್ನಡ ಕೃತಿ : ಹದಿಮೂರೆಸಳು : ಹವಿಗನ್ನಡ ಅಂಕಣ ಬರಹಗಳ ಸಂಕಲನ : 2002 ಪು :24

❶ ಹವಿಗನ್ನಡ ಮಾತೃಭಾಷೆ ಆಗಿಪ್ಪ ಹವ್ಯಕರೆ ಹವಿಗನ್ನಡಲ್ಲಿ ಮಾತಾಡೊದು ಕಮ್ಮಿ ಮಾಡ್ತಾ ಇದ್ದವು. ಮತ್ತೆ ಹವಿಗನ್ನಡ ಸಾಹಿತ್ಯವೂ ಹಿಂದೆ ಬೀಳುವದು ಕಾಂಬಲೆಡಿಯ. ಏನಾದರೊಂದು ಅಳಿಲ ಸೇವೆ ಆಗಲಿ ಹೇಳಿ ಆನು ಹವಿಗನ್ನಡಲ್ಲಿ ಬರವಲೆ ಶುರುಮಾಡಿದೆ. ಶುರುಮಾಡಿಯಪ್ಪಗ ಸಹೃದಯರಿಂದ ಸಿಕ್ಕಿದ ಪ್ರೋತ್ಸಾಹ ಎನ್ನ ಉತ್ಸಾಹವ ಮತ್ತಷ್ಟು ಹೆಚ್ಚಿಸಿತ್ತು. ಮಂಗಳೂರಿಂದ ಪ್ರಕಾಶಿತ ಅಪ್ಪ ಎ.ಬಿ. ಹೊಸಮನೆ ಅವರ 'ಕಲಾದರ್ಶನ' ಎನ್ನ ಹವಿಗನ್ನಡ ಬರವಣಿಗೆಯ ಮತ್ತಷ್ಟು ಹುಮ್ಮಸ್ಸಿಂದ ಬೆಳವ ಹಾಂಗೆ ಮಾಡಿತ್ತು.

ಇಲ್ಲಿ ಹವಿಕರು ಮಾತಾಡುವ ಭಾಷಾ ಸೊಗಸು, ಸೊಗಡುಗಳ ಬರವಣಿಗೆಲಿ

ತಪ್ಪ ಪ್ರಯತ್ನ ಮಾಡಿದ್ದೆ. ಆಡು ಮಾತಿನ ಸೊಗಸುಗಾರಿಕೆ ಹೆಚ್ಚಿಸುವ ಎಷ್ಟೋ ಶಬ್ಧ ಹವಿಗನ್ನಡಲ್ಲಿ ಇದ್ದು. ಅದು ಒಂದು ಕಳಲ್ಲಿ ಕೂದೂ ನಿಂದು ಮಾತಾಡೊಗ ಸಿಕ್ಕುತ್ತು. ಅದನ್ನೂ ಬರವಣಿಗೆಲಿ ಇಳಿಸಿಯೊಂಬ ಪ್ರಯತ್ನ ಮಾಡಿದೆ. ಅದರ ಇನ್ನುದೆ ಮುಂದುವರಿಸಿಯೊಂಡು ಹೋಯೆಕ್ಕು ಹೇಳಿ ಇದ್ದು.

ಹವಿಗನ್ನಡ ಸಾಹಿತ್ಯ, ಬರವಣಿಗೆ, ಆಡುಮಾತು ನಿಂತ ನೀರಪ್ಪಲಾಗ. ಅದು ತಲೆಮಾರಿಂದ ತಲೆಮಾರಿಂಗೆ ಹರುದು ಬರೆಕ್ಕು. ಹವಿಗನ್ನಡ ಭಾಷೆಯ ಒನಪು, ವಯ್ಯಾರ, ಥಳಕು, ಬಳುಕು ಮುಂದುವರಿಯೆಕ್ಕು, ಸಮೃದ್ದ ಆಯೆಕ್ಕು ಹೇಳುವ ಆಶಯ ಎನ್ನದು. ಈ ಉದ್ದೇಶಂದಲೆ ಆನು ನಿಯತವಾಗಿ ಬರೆತ್ತಾ ಇದ್ದೆ.

❷ ಒಂದು ಭಾಷೆ ಒಳುದರೆ ಒಂದು ಸಂಸ್ಕೃತಿ ಒಳುದ ಹಾಂಗೆ. ಒಂದು ಭಾಷೆ ಚಾಲ್ತಿಲಿದ್ದರೆ ಒಂದು ಸಂಸ್ಕೃತಿ ಚಾಲ್ತಿಲಿ ಇದ್ದ ಹಾಂಗೆ ಹೇಳೊದರ ನಾವು ಅರ್ಥಮಾಡಿಯೊಳೆಕ್ಕು. ನಮ್ಮ ಹವೀಕ ಭಾಷೆಯ ಪರಿಸ್ಥಿತಿಯೂ ಹಾಂಗೆ, ಭಾಷಿಕರಿಂಗೆ ಅದರ ಬಗ್ಗೆ ಪ್ರೀತಿ ಕಮ್ಮಿ ಆದ ಹಾಂಗೆ ಅದು ಚಾಲ್ತಿಂದ ಜಾರಿಯೊಂಡು ಹೋವುತ್ತು, ಹಾಂಗಾದ ಕಾರಣ ನಮ್ಮ ಹವೀಕ ಭಾಷೆಯ ಅದರ ನಡೆಂದ ತಪ್ಪಂದ ಹಾಂಗೆ ಮುತುವರ್ಜಿ ವಹಿಸೆಕ್ಕಾದ ಅಗತ್ಯ ಇದ್ದು. ಆದರೆ ಭಾಷಿಕರಾದ ನಾವೆ ಮಾಡೆಕ್ಕಲ್ಲದೆ ಅನ್ಯರಲ್ಲ.

ಒಂದನೆಯದಾಗಿ ನಮ್ಮ ಸ್ಥಳೀಯ ಹವ್ಯಕ ಸಂಘಟನೆಗೊ ಅವುಗಳ ಸಭೆಲಿ ನಾವು ಹವ್ಯಕ ಭಾಷಿಲಿಯೆ ಮಾತಾಡೆಕ್ಕು. ನಮ್ಮೊಳ ಹಂಚುಲೆ ಇಪ್ಪ ಹೇಳಿಕೆ ಕರಪತ್ರಂಗಳ ಹವ್ಯಕ ಭಾಷೆಲಿಯೆ ಮುದ್ರಣ ಮಾಡೆಕ್ಕು. ಸಭೆಯ ನಿರ್ಣಯಂಗಳೂ ಕೂಡ ಹವ್ಯಕ ಭಾಷೆಲಿಯೆ ಇರಲಿ. ಆದರೆ ಹೆರ ಕೊಡೆಕ್ಕಾದ ಕಾಗದ ಪತ್ರಂಗೆ ಬೇರೆ ಭಾಷೆಲಿದ್ದರೆ ತೊಂದರೆ ಇಲ್ಲೆ. ಗ್ರಾಮ, ಪಂಚಾಯತು, ಸೀಮೆ ಮಟ್ಟದ ಹವ್ಯಕ ಪರಿಷತ್ತುಗಳಲ್ಲಿ ಹೆಚ್ಚಿನ ಕಡೆ ಹವ್ಯಕ ಬಳಕೆ ಇಲ್ಲೆ. ಇದರ ನಾವು ಬದಲಿಸುಲೆ ಪ್ರಯತ್ನ ಮಾಡೆಕ್ಕು.

ಎರಡನೆಯದಾಗಿ ಅಖಿಲ ಹವ್ಯಕ ಮಹಾಸಭಾಲ್ಲಿ ಹವ್ಯಕ ಭಾಷೆಲಿಯ ಎಲ್ಲ ಕಾರ್ಯಕ್ರಮಂಗಳುದೆ ನಡೆಯಕ್ಕು. ಬೇರೆ ಬೇರೆ ಪ್ರಾದೇಶಿಕ ಭಾಷಾ ವೈವಿಧ್ಯ

ಇಲ್ಲಿರುತ್ತು. ಹವ್ಯಕ ಭಾಷೆಯ ವಿಶ್ವರೂಪ ಅಖಿಲ ಹವ್ಯಕ ಮಹಾಸಭಾಲ್ಲಿ ಇರುತ್ತು. ಪರಸ್ಪರ ಅರ್ಥಮಾಡಿಯೊಂಬ ನಿಟ್ಟಲಿ ಕಾರ್ಯಕ್ರಮಂಗಳ ಹವ್ಯಕ ಭಾಷೆಲಿಯ ಸಂಘಟಿಸೊದು ಅತ್ಯಗತ್ಯ. ನಿರ್ಣಯ ಕೈಗೊಂಬದಾಗಲಿ, ಭಾಷಣ ಮಂಡಿಸೊದಾಗಲಿ ಅದು ಹವ್ಯಕಲ್ಲಿಯೆ ಇರಲಿ. ಮಂಗಳೂರು ಹವೀಕ ಪ್ರತಿನಿಧಿ ಅಲ್ಲಿಯಾಣ ಹವೀಕಲ್ಲಿ ಮಾತನಾಡಲಿ, ಕಾಸರಗೋಡಿನವ ಅವನ ಕುಂಬಳೆ ಸೀಮೆ ಹವೀಕದ ಕಂಪು ಬೀರಲಿ, ಪಂಜ, ಉತ್ತರ ಕನ್ನಡದ ಹವೀಕರು ಅವರ ಭಾಷಾ ಸೊಗಡಿನ ಬಿತ್ತರಿಸಲಿ. ಹೀಂಗೆ ಭಾಷಾ ಸೊಗಡು ವಿಶೇಷವಾಗಿ ನಮ್ಮ ಮೈ ಮನಂಗಳಲ್ಲಿ ತುಂಬುಗು.

ಮೂರನೆಯದಾಗಿ ಮಹಾಸಭಾದ ಪತ್ರಿಕೆ 'ಹವ್ಯಕ'ಲ್ಲಿ ಕನಿಷ್ಠ ಪಕ್ಷ ನಾಲ್ಕು ಪುಟಂಗಳನ್ನಾದರೂ ಹವೀಕ ಭಾಷೆಯ ಬರಹಂಗೊಕ್ಕೆ ಮೀಸಲಾಗಿ ಮಡುಗೆಕ್ಕು. ಅದರಲ್ಲಿ ಎಲ್ಲಾ ಪ್ರದೇಶದ ಹವೀಕ ಭಾಷೆಯೂ ಇರಕ್ಕು. ಭಾಷೆಯ ಪ್ರಚಾರದ ದೃಷ್ಟಿಂದ, ಪರಿಚಯದ ಲೆಕ್ಕಂದ ಇದು ತುಂಬ ಅಗತ್ಯ. ಮಂಗಳೂರಿನ 'ಕಲಾದರ್ಶನ' ಮಾಸಪತ್ರಿಕೆ 'ಎಸಳು' ಹೇಳುವ ಅಂಕಣಲ್ಲಿ ಹವೀಕ ಭಾಷೆಯ ಬರೆಹವ ನಿರಂತರವಾಗಿ ಪ್ರಕಟಿಸಿ ಮಾದರಿ ಆಯಿದು.

ನಾಲ್ಕನೆಯದಾಗಿ ನಮ್ಮ ಹವ್ಯಕರ ಮಠಂಗಳಲ್ಲಿ ಅಪ್ಪ ಕಾರ್ಯಕ್ರಮ ಎಲ್ಲ ಹವೀಕ ಭಾಷೆಗೆ ಒತ್ತು ಕೊಡುವ ಹಾಂಗೆ ಇದ್ದರೆ ಒಳ್ಳೆಯದು. ಜಾಗತಿಕ ಮಟ್ಟದ, ರಾಷ್ಟ್ರಮಟ್ಟದ ಕಾರ್ಯಕ್ರಮ ಆದರೆ ಸಾಧು ಆಗ. ಆದರೆ ಹವ್ಯಕರಿಂಗಾಗಿಯೆ ಅಪ್ಪ ಕಾರ್ಯಕ್ರಮಂಗಳ ಹವೀಕ ಭಾಷೆಲಿ ನಡೆಸಿದರೆ ಬಹಳ ಪ್ರಯೋಜನ ಇದ್ದು. ಭಾಷಾ ಉಳಿಕೆ, ಬೆಳವಣಿಗೆಲಿ ಶ್ರೀ ಮಠದ ಪಾತ್ರ ಬಹಳ ದೊಡ್ಡದು. ಹವೀಕ ಸಾಹಿತಿ, ಬರಹಗಾರರಿಂಗೆ ಪ್ರೋತ್ಸಾಹ ಕೊಡಲಾದರಿಂದ ಹಿಡಿದು ಸಾಹಿತ್ಯ ಸಮೃದ್ಧಿಗೊಳಿಸುವಲ್ಲಿವರೇಗೆ ಅದು ಮಹತ್ತರ ಪಾತ್ರ ವಹಿಸುಲಾವುತ್ತು. ಮಠಲ್ಲಿಯೆ ಹವೀಕ ಭಾಷೆಗೆ ಒತ್ತು ಸಿಕ್ಕಿತ್ತು ಕಂಡ್ರೆ, ಒಳುದ ಕಡೆ ಅದರ ಅನುಸರಿಸುಲೆ ಶುರುಮಾಡುತ್ತವು. ಹೀಂಗೆ ಅದು ಸರ್ವವ್ಯಾಪಿ ಆವುತ್ತು.

ಹೀಂಗೆ ಭಾಷೆಯ ಒಳುಶುಲೆ, ಬೆಳೆಶುಲೆ ತನ್ಮೂಲಕ ಹವ್ಯಕ ಸಂಸ್ಕೃತಿಯ

ಕಾಪಾಡಿಯೊಂಡು ಬಪ್ಪಲೆ ನಾವೆಲ್ಲ ಕುಂಡೆಚ್ಚಂಗೊ ಆಯೆಕ್ಕು. ಇನ್ನೊಬ್ಬ ಬೆರಳು ತೋರಿಸಿ ನೆಗೆ ಮಾಡುಗು ಹೇಳಿ ತಿಳಿಯೆಕ್ಕಾದ ಅಗತ್ಯ ಇಲ್ಲೆ. ನಮ್ಮ ಮಾತೃಭಾಷೆಯ ಎಲ್ಲಿ ಬೇಕಾದರೂ ಮಾತಾಡುಲಕ್ಕು. ಅದಕ್ಕೆ ಕೀಳರಿಮೆ ತುಂಬಿಯೊಂಬದು ಬೇಡ.

ಹವಿಗನ್ನಡ ಬರೆದರೆ ಅಂತವನ ತಾತ್ಸಾರ ಮಾಡುವ ಹವಿಗನ್ನಡ ಮಾತೃಭಾಷೆ ಆಗಿಪ್ಪ ಹವ್ಯಕರೆ ನಮ್ಮ ಸಮಾಜಲ್ಲಿದ್ದವು ಇಂತಹ ಮನೋಭಾವನೆ ಅಳಿಯೆಕ್ಕು.

✻ ✻ ✻

ನಾ.ಸು. ಭರತನಹಳ್ಳಿ (ನಾರಾಯಣ ಸುಬ್ರಾಯ ಹೆಗಡೆ)
ಕುಂದರಗಿ ಯಲ್ಲಾಪುರ ವಾಯಾ ಸಿರ್ಸಿ
ಉತ್ತರ ಕನ್ನಡ –581 402
ದೂರವಾಣಿ : 08419–255636
70 ವರ್ಷ. ಕೃಷಿಕ, ಸಾಹಿತಿ, ಪತ್ರಿಕೋದ್ಯಮಿ

ಪ್ರಕಟಿತ ಕೃತಿ : 13
ಹವಿಗನ್ನಡ ಕೃತಿ : ಭೂಮಿಕೆ ಕಾದಂಬರಿ 1994 ಪು. 127 ಭಾಗಶಃ ಸಂಭಾಷಣೆ ಹವಿಗನ್ನಡದಲ್ಲಿದ್ದು

❶ ಯಾನು ಒಬ್ಬ ಸಾಹಿತ್ಯಿಕ ಬರಹಗಾರ. ಅದರಲ್ಲಿ ಸೃಜನಾತ್ಮಕ, ಸೃಜನೇತರ ಹೇಳಿ ಎರಡ್ನಮೂನಿ ಇದ್ದು; ಸೃಜನೇತರ ಬರಹ ಗ್ರಾಂಥಿಕ ಭಾಷೆಲ್ಲೇ ಪೂರಾ ಇಪ್ಪುದು ಸಂಪ್ರದಾಯ. ಸೃಜನಾತ್ಮಕ – ಕಥೆ, ಕಾದಂಬರಿಯಲ್ಲಷ್ಟೆ ಪ್ರಾದೇಶಿಕ ಭಾಷೆ ಬಳಸೋದು ರೂಢಿಯಲ್ಲಿದ್ದು. ಕೃತಿಕಾರ ಅದಲ್ಲಿರೊ ಕಥಾನಕಕ್ಕೆ ಕಲ್ಪಿಸಿಕೊಂಬೊ ಪ್ರದೇಶ ಮತ್ತು ಕಾಲಕ್ಕೆ ತಕ್ಕ ಪಾತ್ರಗಳ ಸೃಷ್ಟಿ ಮಾಡ್ತ್ಯತ್ತ

ಯಾನು, ಭೂಮಿಕೆ 'ಕಾದಂಬರಿ' ಬರಿಯಾಕಾರೆ ಇಟ್ಗಂಡಿದ್ದು– ಮಲೆನಾಡ ಪ್ರದೇಶ. ಈ ಮಲ್ನಾಡ ಪ್ರದೇಶದಲ್ಲಿ ಹವೀಕರು, ಶಿದ್ದಿ, ಕುಣಬಿ ಹೀಂಗೆಲ್ಲಾ ಸಮಾಜ ಇದ್ದು.

ಬ್ಯಾರೆ ಬ್ಯಾರೆ ಪ್ರದೇಶದ ಕಥಾ ವಸ್ತೂನಲ್ಲಿ ಅಂದ್ರೆ, ಬೆಂಗಳೂರು, ಗುಲ್ಬರ್ಗಾ, ಧಾರವಾಡ ಹೀಂಗೆಲ್ಲ ಪ್ರದೇಶಾವ ಇಟ್ಗಂಡು ಕಥೆ, ಕಾದಂಬರಿ

ಬರ್ದ್ಬೋವು ಅದರಲ್ಲಿ ಆ ಆ ದೇಶ – ಕಾಲದ ಜನಾಂಗದ ಆಡೋಭಾಷೇನೇ ಉಪಯೋಗ್ಶಿದ್ದ. ಹೀಂಗೆ ಭಾಷೆ ಬಳ್ಕಕ್ಯಂಬೋದು ಯಾವಾಗ್ಲೂ ಇಡೀ ಕೃತಿಯಲ್ಲಿರ್ತಿಲ್ಲೆ. ಬರೀ ಪಾತ್ರ – ಪಾತ್ರಗಳಲ್ಲಿ ಕಾಣ್ಸಕ್ಯಂಬೋ ಮಾತುಕತೆ ಅಂದ್ರೆ ಸಂಭಾಷಣೆಲ್ಲಿ ಮಾತ್ರ ಆಡೋ ಭಾಷೆ ಇರ್ತು.

ಯಾನು ಭೂಮಿಕೆ ಕಾದಂಬರಿ ಬರೆದ ಪ್ರದೇಶದಲ್ಲಿ ಹವ್ಯಕರು ಹೆಚ್ಚೆ ಇದ್ದ. ಅವರೆಲ್ಲರ್ದ್ಹಾಂಗೆ ಯಾನೂ ಇಲ್ಲೀ ಜನಾಂಗದ ಭಾಷೇನೆ ಎಂತಕ್ಕೆ ಬಳ್ಸಗಳ್ದಾಗ? ಅನಿಶ್ತು. ಒಂದು ಪ್ರಯೋಗ ಮಾಡ್ವ ಹೇಳಿ ಕಾದಂಬರಿ ಒಳ್ಗಣ ಪಾತ್ರದಲ್ಲೀ ಸಂಭಾಷಣೇನೆಲ್ಲಾ ಹವಿಗನ್ನಡ ಭಾಷೆಲೇ ಬರ್ದೆ. ಹೀಂಗೆ ಪ್ರಾದೇಶಿಕ ಆಡು ಭಾಷೆಯ ಸಂಭಾಷಣೆಯಲ್ಲಿರ್ಸೋದ್ರಿಂದ ಅದಕ್ಕೊಂದು ಸೊಗಡು, ಅದಕ್ಕೊಂದು ವಿಶೇಷತೆ ಗಾಂಭೀರ್ಯ ಬರ್ತು ಅನ್ನೋದು ಬರವಣ್ಗೆ ತಂತ್ರ ಅಷ್ಟೆ.

ಹೀಂಗೆ – ಯಾನು, ಹವ್ಯಕ – ಭಾಷೆ ಬಳ್ಸಿದ್ದರಿಂದಲೇ ಯನ್ನ ಭೂಮಿಕೆ ಕಾದಂಬರಿ ವಿಮರ್ಶಕರಿಂದ ವಿಶೇಷ ಪ್ರಶಂಸೆಗೆ ಒಳಗಾಗಿದ್ದು ಯನಗೆ ಖುಶೀ ಕೊಟ್ಟಿದ್ದು.

'ಭೂಮಿಕೆ' ಕಾದಂಬರಿ ಬರ್ದಾದ ಮೇಲೆ ಮಾತ್ಯಾವುದ್ರಲ್ಲೂ ಹವಿಗನ್ನಡ ಬಳಕೆ ಮಾಡೋ ಸಂದರ್ಭ, ಪ್ರಮೇಯ ಒದಗಿ ಬಂಯ್ದೇ ಇಲ್ಲೆ. ('ಬಞಾಜೇ ಇಲ್ಲೆ' ಪದಬಳಕೆ– ಶಿರ್ಶಿಕಡೆ) ಎಂತಕ್ಕೇಂದ್ರೆ – ಕಡಿಗೆ ಮುಂದೆ ಯಾನು ಬರ್ದಿದ್ದೆಲ್ಲಾ ವೈಚಾರಿಕ – ಪ್ರಬಂಧ, ಕವನ, ಚರಿತ್ರೆ ಕೃತಿಗಳು. ಅದ್ರಲ್ಲಿ ಆಡು ಭಾಷೆ ಬಳಕೆ ಪ್ರಸ್ತುತ ಅನಿಸ್ತಿಲ್ಲೆ. ಔಚಿತ್ಯವೂ ಆಗ್ತಿಲ್ಲೆ. ಇಡೀ ಕೃತಿಯನ್ನೂ ಹವ್ಯಕ ಭಾಷೆಲ್ಲೇ ಬರಿಯೋ ಆಲೋಚ್ನೆ ಇಲ್ಲೆ. ಹಾಂಗೆ ಬರ್ದ್ರೆ ಅದಕ್ಕೊಂದು ಸಾರ್ವತ್ರಿಕತೆ ತಂದು ಕೊಡೋದೆ ಆಗ್ತಿಲ್ಲೆ. ಕಷ್ಟ.

❷ ಮೊದ್ಲ್ನೇದಾಗಿ ಇಬ್ಬರು ಹವೀಕರು ಭೆಟ್ಟಿ ಆದಾಗ ಎಂಥ ಸಂದರ್ಭ - ಸನ್ನಿವೇಶ ಇರ್ಲಿ, ಸಾರ್ವಜನಿಕರ ಎದ್ರೇ ಆಗಿರ್ಲಿ - ಅವರು ಪರಸ್ಪರ ಮಾತಾಡ್ಕ್ಯಂಬಾಗ ಎಂತಾದೂ ಮುಜುಗರ, ಮುಲಾಜೂ ಸಂಕೋಚಾನೂ ತಂದ್‌ಕಳ್ದೆ ತಮ್ಮ - ತಮ್ಮಲ್ಲಿ ಹವೀಕರ ಮಾತ್ನಲ್ಲೇ ಮಾತಾಡೋ ಪರಿಪಾಠ ಇಟ್ಕಳವು. ತುಳು, ಕೊಂಕಣಿ, ಕೊಡಗು ಭಾಷ್ಯಲ್ಲಿ ತಮ್ ತಮ್ದೇ ಭಾಷೆಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವ ರಂಗದಮ್ಯಾಲೆ ತರ್ತ ಅಂದ್ರಿಂದ ಅವ್ರವ್ರ ಭಾಷಾ ಅಸ್ತಿತ್ವ ಜನಮಾನಸದಲ್ಲಿ ಕುಂತ್ಕತ್ತು. ಹಾಂಗೇ

ನಂಮ್ ಹವೀಕ - ಭಾಷೇದೇ ಸಾಂಸ್ಕೃತಿಕ - ಕಾರ್ಯಕ್ರಮ ಇಟ್ಗಳ. ಹಾಂಗೆ ರಂಗದ ಮೇಲೆ ತರ್ವಂಥ ಕಥೆ, ಹಾಡು, ನಾಟಕ ಬರ್ದ ಕೊಡೋ ಪ್ರತಿಭಾವಂತರು ಹವೀಕ - ಸಮಾಜದಲ್ಲಿ ಇದ್ದೇ ಇದ್ದS.

ನನ್ನಂಥ ಸಾಹಿತ್ಯ ಕೃತಿ ರಚಿಸೋ ಆಸಕ್ತರು ತಾವಾಗೇ ಹವಿಗನ್ನಡದಲ್ಲಿ ಕೃತಿ ಬರೀತಾ ಇಲ್ಲೆ. ಎಂತಕ್ಕೇಂದ್ರೆ ಅದನ್ನ ಪ್ರಕಟ ಮಾಡೋ ಪ್ರಕಾಶಕರು ಸಿಗೋದು, ಅವನ್ನ ಮಾರಾಟ ಮಾಡೋದು ಕಷ್ಟ. ಸಾರ್ವತ್ರಿಕತೆ ಲಭಿಸದ್‌ರಿಂದ ಆಸಕ್ತಿಯಿದ್ದ ಸಮಾಜದ ಜನರನ್ನೇ ಹುಡ್ಕ್ಯಾಕಾಗ್ತು. ಅದಕ್ಕಾಗಿ ಹವಿಗನ್ನಡ ಕೃತಿಗಳನ್ನು ಪ್ರಕಟಿಸಿ ಮಾರಾಟ ಮಾಡೋ ಪ್ರಯತ್ನವನ್ನ್ ಹವ್ಯಕ-ಸಂಘಟನೆಗಳವ್ರು ಕೈಗೆತ್ತಿಕೊಂಡ್ರೆ ಮಾತ್ರ ಈ ಉದ್ದೇಶ ಈಡೇರ್ತು. ಭಾಳಾ ಮುಖ್ಯ ಅಂದ್ರೆ ಹವೀಕ - ಕುಟುಂಬದವು ವಿಶೇಷವಾಗಿ ಪಟ್ಟಣದಲ್ಲಿದ್ದೋವ್ರು ತಂಮ್ ಮಕ್ಳಸಂಗಡ ಕಡ್ಡಾಯವಾಗಿ ಹವೀಕ - ಭಾಷೇಲೆ ಮಾತಾಡೋದ್ನ ಕಡ್ಡಾಯವಾಗಿಟ್ಕಳೊ. ಹಳ್ಳಲ್ಲಿ ಇಂಥ ಸಂದರ್ಭನೇ ಇಲ್ಲೆ. ಅಂದ್ರೇ ತಂತಾನೇ ಅಂಥ ವಾತಾವರಣ ಮನ್ಸೇಲಿ ಇದ್ದು ಇರ್ತು.

ನಂಮ್ ಭಾಷೆ ಬಗ್ಗೆ ಇದು ಹಳ್ಳೀ ಭಾಷೆ ಎಂಬ ಕೀಳರಿಮೆ ಮೊದ್ಲು ಹೋಗವು.

ಹವೀಕ್‌ರು ಇದ್ದಲ್ಲಿ ಯಲ್ಲೆಲ್ಲಿ ಹವೀಕ ಸಂಘ ಇದ್ದೋS ಅಲ್ಲಲ್ಲೆಲ್ಲಾ ಆ ಸಂಘದವ್ರು ನಡ್ಸೋ ಸಭೆ, ಸಮಾರಂಭ, ಕಾರ್ಯಕ್ರಮ ಇಂತಾದ್ನೆಲ್ಲಾ ಪೂರಾ ಪೂರಾ ಹವಿಗನ್ನಡ್‌ದಲ್ಲೇ ಕಾರ್ಯ ಕಲಾಪ ನಡಸೋದ್ನ ಇಟ್ಗಳೋ ಅಗತ್ಯ ಇದ್ದು.

ಹವ್ಯಕ ಮಹಾಸಭೆ ಇಲ್ಲಿವರ್ಗೆ ನಡೆಸ್ದ ಸಮ್ಮೇಲನ್ದಲ್ಲಿ ಹವಿಗನ್ನಡ ಬಳ್ಕನೇ ಮಾಡಿದ್ದಿಲ್ಲೆ. ಹೀಂಗೆ ಮುಂದುವರೆಯಾಲಾಗ. ತಾಯ್ನುಡಿ ರಕ್ಷಣೆಲಿ ಮಹಾಸಭೆದು ದೊಡ್ಡ ಜವಾಬ್ದಾರಿ ಇದ್ದು. ಮಹಾಸಭೆ ತನ್ನ ಕಾರ್ಯಕಲಾಪ ಹವಿಗನ್ನಡ್ದಲ್ಲಿ ನಡೆಸೊ. ಅಲ್ಲಿ ಹವಿಗನ್ನಡ ಸಂಗಮ ಇದ್ದು.

ಹವಿಗನ್ನಡ ಉಳ್ಸಿ ಬೆಳ್ಸೂಲೆ ಒಳ್ಳೇ ಮಾಧ್ಯಮ ಅಂದ್ರೆ ಹವ್ಯಕ ಮಾಸಪತ್ರಿಕೆ. ಅದರಲ್ಲಿ ಎಲ್ಲಾ ಭಾಗದ ಹವಿಗನ್ನಡ ಲೇಖ್ನ ಪ್ರಕಟ ಮಾಡೊ. ವಿವಿಧತೆಯಲ್ಲಿ ಏಕತೆ ತಪ್ಸಲೆ ಸಾಧ್ಯ ಇದ್ದು. ಇಲ್ಲೀವರೆಗೆ ಆಗಿದ್ದರ ಬಗ್ಗೆ ಚರ್ಚೆ ಬೇಡ. ಮುಂದಾದ್ರೂ ಹವ್ಯಕ ಪತ್ರಿಕೆಲಿ ಕನಿಷ್ಠ ನಾಲ್ಕೈದು ಪುಟ ಹವಿಗನ್ನಡಕ್ಕೆ ಹೇಳಿ ಮೀಸಲಿಡೊ. ನಂಭಾಷೆಗೆ ನಮ್ದೇ ಮಹಾಸಭೆ, ಪತ್ರಿಕೆ ಹೆಚ್ಚೆಚ್ಚೆ ಪ್ರೋತ್ಸಾಹ ನೀಡೋ.

ಈಗ ಕಲ್ತ ಹವ್ಯಕರಲ್ಲಿ ಭಾಷೆ ಬಗ್ಗೆ ಒಂದ್ ರೀತಿ ಗೊಂದ್ಲದ ಭಾವನೆ ಇದ್ದು. ನಾವು ಅನ್ಯ ಭಾಷಿಕರು, ಅಥವಾ ಕನ್ನಡದ ಅನ್ಯ ಪ್ರಕಾರದ ಕನ್ನಡ ಮಾತಾಡೋರ್ ಮಧ್ಯೆ ನಾವ್ ನಮ್ಮ ಭಾಷೆಲ್ಲಿ ಮಾತಾಡಲ್ ಹತ್ತಿದ್ರೆ ಔಚಿತ್ಯ ಆಗ್ತಿಲ್ಲೆ. ಸಮಾಜದಲ್ಲಿ ಅಸಹ್ಯ ಕಾಣ್ತು ಎನ್ನೋವ್ರಿದ್ದ. ಸಮಾ ಯೋಚ್ನೆ ಮಾಡಿದ್ರೆ ಅಂತವರ ಭಾವನೆ ತಪ್ಪುಗ್ರಹಿಕೇದು. ಕನ್ನಡದಲ್ಲೆ ಪ್ರಾದೇಶಿಕ ಭಿನ್ನತೆಯಿದ್ದ ಆಡು ನುಡಿ ಶೈಲಿ ಇದ್ದು. ಬಿಜಾಪುರದ ಕಡೇವ್ರ್‌ದ್ದೇ ಒಂದ್‌ನಮೂನಿ ಶಬ್ದ ಶೈಲಿ. ಗುಲ್ಬರ್ಗಾಬದೀದೇ ಒಂದ್ನಮೂನಿ, ಮೈಸೂರು ಬೆಂಗಳೂರು ಕಡೇವ್ರದ್ದೇ ಒಂದ್ನಮೂನಿ. ಮಂಗಳೂರು – ಉಡುಪಿ ಕಡ್ಯೇವ್ರದ್ದೇ ಒಂದ್‌ತರಾ. ಒಂದೇ ನಮ್ನಿ ಮಾತಾಡೋವು ಹೇಳಿ ಅವ್ರೇನು ಗ್ರಾಂಥಿಕ – ಕನ್ನಡ ಮಾತಾಡ್ತ್ವಿಲ್ಲೆ. ತಂವ್–ತಂವ್ ಬದೀಗೆ ಹ್ಯಾಂಗಿದ್ದೋ ಹಾಂಗೆ ಮಾತಾಡ್ತೋ. ಅವಕ್ಕೆ ಔಚಿತ್ಯಭಂಗ ಅನಿಸದ್ದು ಹವೀಕರಿಕೇ ಎಂತಕ್ಕನಿಸೋ? ಹಾಂಗೆ ಇರೋ ತಪ್ಪು ಭಾವನೆ ಅಥವಾ ಕೀಳರಿಮೆ ಹೋಗ್ಲಾಡಿಸೋ ಹಾಂಗೆ ಪ್ರಚೋದಕ – ಪ್ರಚಾರನೇ ಮಾಡೋ ಕಾಯ್ದು.

ಹವಿಗನ್ನಡ ಕೇವಲ ಭಾಷೆ ಅಲ್ಲ. ಅದೂ ಒಂದು ಸಂಸ್ಕೃತಿಯ ಕಣಜ. ಮನೆತಾಯಿಯ ಸಮಾಜದ ಮಧ್ಯೆ ನಿಂತಾಗ ಅಬ್ಬೆ, ಅಮ್ಮ, ಆಯಿ, ಅವ್ವ – ಹೀಂಗೆ ಸಹಜ ನುಡೀಲಿ ಹೇಳ್ದೆ ಯಾರಾದ್ರೂ 'ಬನ್ನಿ ಮೇಡಂ' ಅಥವಾ 'ಬನ್ನಿ ತಾಯಿ'ಯಂದು 'ಕಾಮನ್' ಗೊಳ್ಸಿ ಮಾತಾಡಿದ್ರೆ ಸಂಬಂಧದ ಭಾವ್ನೇನೆ ಹೇಂಗೆ ಅಸಹ್ಯ ಆಗ್ತೋ ಹಾಂಗೇ ಭಾಷೆನೂ ಆಗ್ತು. ಮನೆ ಮಾತು ಅಂದ್ರೆ ನಮ್ಮ ತಾಯಿ ಇದ್ದಾಗೇಯಾ. ಅದನ್ನು ಹ್ಯಾಂಗಿದ್ದೋ ಹಾಂಗೆ, ಮನೇಲಿ ಮಾತಾಡ್ಕ್ಯಂಡಾಂಗೆ ಎಲ್ಲಿ ಯಾವಸ್ಥಳದಲ್ಲಿದ್ರೂ ತಾಯೀನ ಕಂಡ್ಹಾಂಗೇ ಕಂಡು ಬಳಕೆ ಮಾಡೋ ಅವಶ್ಯಕತೆ ಬಗ್ಗೆ ಜಾಗೃತಿ ಹುಟ್ಸೋ ಕೆಲಸ ಭಾಷೆ ಉಳ್ಕಕಂಬೋದ್ರಲ್ಲಿ ಮಹತ್ವದ ಹೆಜ್ಜೆ.

ನಾಟಕ, ಲೇಖನ, ಕಥೆ, ಕವನ, ಗ್ರಂಥ ರಚನೆ ಇಂತಾದ್ರಲ್ಲೂ ಹವಿಗನ್ನಡದ ರಚನೆ ಮಾಡ್ವಂತ ಒಂದು ಆಂದೋಲನ, ಪ್ರಚಾರ ಕೈಕೊಂಡ್ರೆ, ಭವಿಷ್ಯತ್ತಿನ ದೃಷ್ಟಿಯಿಂದ ಭಾಷೆ ಉಳಿವಿಗೆ ಭಾಳ ದೊಡ್ಡ ಕಾರ್ಯ ಆಗ್ತು. ಎಂತಕ್ಕೆಂದ್ರೆ

ಈಗಿನ ಕಲಬೆರಕೆಯಲ್ಲಿ ಹವೀಕ – ಭಾಷೆ ಅಳಿವಿನ ಅಂಚಿನಲ್ಲಿದ್ದು. ಭಾಷೆಯ ಸ್ವರೂಪ, ಆ ಶಬ್ದ ಭಂಡಾರ, ಅದರ ದನಿ–ಬನಿ ವಿನ್ಯಾಸದ ಪುನರ್ಜಾಗೃತಿಗೆ ಸಾಹಿತ್ಯಕೃತಿ ಹಾಂಗೇ ವೇದಿಕೆ ಮೇಲಿನ ಸಾಂಸ್ಕೃತಿಕ ಕಾರ್ಯಕ್ರಮ ಈ ಎರಡೂ ಉತ್ತಮ ಬಂಧ ಕ್ರಿಯೆ. ಇವಿಷ್ಟು ಉಪಾಯ ಹವಿಗನ್ನಡಾವ ಉಳ್‌ಶಕಂಬಲ್ಲೆ ಅಗತ್ಯಯಿದ್ದು ಹೇಳ್ತಿ

'ಹವಿಗನ್ನಡ' ನಂವ್ ಆಡು ನುಡೀನ ಉಳ್‌ಶ್ಯಗಂಬ್ಲೆ ಇಷ್ಟೇ ಸಾಕು ಹೇಳಲ್ಲಾಗ್ತಿಲ್ಲೆ; ಹಾಂಗೆ ಹೇಳಲ್ಲೂ ಆಗ. ಎಂತೆಂತಾ ಸಂದು ಸಂದು ಇದ್ದೋ ಅಲ್ಲೆಲ್ಲಾ ಈ ಭಾಷೇನ್ ಪ್ರತಿಧ್ವನಿಸೋ ಹಾಂಗೆ ಮಾಡಾಕಾಗ್ತು:–

ಅಲಕ್ಷಿತವಾದ ಆದ್ರೆ ಮಾಡ್ಲೇ ಬೇಕಾದ ಎರಡು ಕೋನದ ಬಗ್ಗೆ ಗಮನ ಸೆಳ್ಯೋದಾದ್ರೆ – ಒಂದು ಸಾಮಾನ್ಯವಾಗಿ ಹವೀಕರ ಮನ್ಯೆಲ್ಲಿ ವಿಶೇಷ ವೈದಿಕ ಕಾರ್ಯ ಆಗ್ತಾ ಇರ್ತು, ಅದ್ರಲ್ಲಿ ಪುರೋಹಿತ ಭಟ್ರಾಗಲೀ, ಅಲ್ಲಿ ಬಂದಿದ್ದವ್ರಲ್ಲಿ ಇದ್ದ ವಿದ್ವಾಂಸರ್ ಕೈಯಲ್ಲಾಗ್ಲೀ – ಶ್ರೇಯೋಪ್ರಾಪ್ತಿವಚನ ಮಂತ್ರಾಕ್ಷತೆ ಹೊತ್ತೀಗೆ ಹೇಳ್ಸೋ ಪದ್ದತಿ ಇದ್ದೇ ಇದ್ದು. ಆದ್ರೆ ಅದನ್ನೆಲ್ಲಾ ಭಟ್ರು ಗ್ರಾಂಥಿಕ ಕನ್ನಡದಲ್ಲೇ ಹೇಳೋದು ರೂಢಿ ಅಕ್ಕಂಡಿದ್ದು. ಅದಗತ್ಯಿಲ್ಲೆ. ಆ ಸಭೆಲ್ಲಿದ್ದೋವ್ರೆಲ್ಲಾ ಬರೀ ಹವೀಕ್ರಾಗಿರ್ತ ಆಡು ಭಾಷೆಲ್ಲಿ ಆಶೀರ್ವಚನ ಹೇಳೋದು ಚಾಲ್ತಿಗೆ ತಪ್ಪೆ ಯಾವ ಆತಂಕಾನೂ ಇರ್ತಿಲ್ಲೆ. ಹಾಂಗೆ ಹವಿಗನ್ನಡದಲ್ಲೇ ವಚನ ನೀಡಿದ್ರೆ ಜನರ ಮನಸ್ಸಲ್ಲಿ ತಮ್ಮ ಮನೆ ಮಾತಿನ ಬಗ್ಗೆ ಅವ್ಯಕ್ತ ರೀತಿಯ ಹೊಸ ಅಭಿಮಾನ, ಹೆಮ್ಮೆ ಹುರುಪು ಚಿಗ್ರಿ, ಭಾಷೆ ಬಳಕೆ ಹೆಚ್ಚಪ್ಲೆ ಪುಷ್ಠಿ ಒದಗ್ತು. ಬೇರೆ ಆಡು ಭಾಷಿಕ್ರಲ್ಲಿ ಈ ಚಾಲ್ತಿ ಇದ್ದು.

ಹವೀಕರಿಗೆ ಈಗ ಪ್ರಧಾನವಾಗಿ ಎರಡೇ ಮಠ. ಶ್ರೀ ರಾಮಚಂದ್ರಾಪುರ, ಮತ್ತೆ ಸ್ವರ್ಣವಲ್ಲೀ. ಈ ಎರಡೂ ಮಠದ ಈಗಿನ ಸ್ವಾಮಿಗಳು – ಹವೀಕರಲ್ಲಿ ಪರಸ್ಪರ ಮಾತಾಡಾಕಾದ್ರೆ ಹವ್ಯಕ ಭಾಷೆಲ್ಲೇ ಮಾತಾಡ್ತಾ ಇರ್ತ. (ಹಿಂದೆ ಇಷ್ಟೂ ಇತ್ತಿಲ್ಲೆ) ಆದ್ರೆ ಸಾಕಾಗ. ಭಾಷೆ ಬಗ್ಗೆ ಪುಷ್ಟಿ ಪ್ರೇರಣೆ ಚಾಲನೆ ದೊರೆಯಲ್ಲೆ ನಮ್ಮ ಮಠದ ಗುರುಗಳೂ ಸಹ – ಸಾರ್ವಜನಿಕ ರೂಪದ ಅಂದ್ರೆ ಅನ್ಯ ಸಮಾಜದವರೂ ಇದ್ದ– ಸಭೆಗಳನ್ ಬಿಟ್ಟು ಉಳ್ಕೀ ಸಭೆಯಲ್ಲಿ ಬರೀ ಹವೀಕರ

ಸಭೆಲ್ಲಿ ಹಾಂಗೇ ಶಿಷ್ಯರ ಮನೆ ಮನೆಯಲ್ಲಿ ನಡ್ಸೊ ಕಾರ್ಯ ಕ್ರಮದಲ್ಲಿ ಆಶೀರ್ವಚನ ನೀಡಕಾದ್ರೆ – ಶುದ್ಧ ಪಕ್ಕಾ ಹವೀಕ ಭಾಷೆಲ್ಲೇ ಅದು ಹಳ್ಳೀಲ್ಯಾಗ್ಲೀ, ಪೇಟೆಲ್ಯಾಗ್ಲೀ – ಹೇಳಿದ್ರೆ ಜನರಲ್ಲೂ ಗುರುಗಳೇ ನಂಮ್ ಭಾಷೆಲ್ಲಿ ಮಾತಾಡ್ತ್ರ "ಹೇಳೋ ಭಾವನೆ ಉಂಟಾಗಿ ಮಾತಿನ ಬಳಕೆ ಬಗ್ಗೆ ಗಟ್ಟೀತನ ಉಂಟಾಗ್ತು" – ಇಂಥ ವಾತಾವರಣದ ಸೃಷ್ಟಿ ಈಗ ಅವಶ್ಯಕ.

ಟಿಪ್ಪಣಿ : 1) ಯಾನಿಲ್ಲಿ ಬಳಿಶಿದ್ದ ಪದ ಪ್ರಯೋಗ ಭರತನಹಳ್ಳಿ ಸೀಮೇದು. ಪಕ್ಕದ ತೋಟದ ಸೀಮೆ–ಸಿರಸಿ ಸೀಮೆ – ಪದ ಪ್ರಯೋಗ ಫರಕ್ ಇದ್ದು. ಯಲ್ಲಾಪುರದ್ದು ಫರಕ್. ಇದೂ ಅಧ್ಯಯನ ವಿಷಯ. ಶಿರ್ಶಿಕಡೆ : ಆನು ಎಂದ್ರೆ ಇಲ್ಲಿ ಯಾನು ಪದ. ಹಾಂಗೇ ಬಞಜಿ– ಬಂಯ್ದೆ ಹೋಯ್‌ಜು– ಹೋಯ್‌ದು. ಆನ್ ಮಾಡಿಕಿದಿ–ಯಾನು ಮಾಡಿಬಿಡ್ದೆ; ಹೀಂಗೆ ಪಟ್ಟಿ ಮಾಡಲ್ಲಾಗ್ತು ಈಗಿತ್ಲಾಗಿ ಎಲ್ಲಾ ಒಂದಕ್ಕೊಂದು ಮಿಶ್ರ ಆಗ್ತಾ ಇದ್ದು. 2) ಹವೀಕರು ಮೊದ್ಲಿಂದ್ಲೂ ಸು–ಸಂಸ್ಕೃತರು. ಹಾಂಗಾಗಿ ಭಾಷೆಲೂ ಸಂಸ್ಕೃತದ ಪದ, ತದ್ಭವ ಪದ, ಹಳೆಗನ್ನಡ ಪದ ಪುಷ್ಕಳವಾಗಿ ಸೇರ್‍ಕ್ಯಂಡ್ದು. ಒಂದರ್ಥದಲ್ಲಿ ಶಿಷ್ಟ ಭಾಷೆಗೆ ಹತ್ರ. ಕ್ರಿಯಾಪದದಲ್ಲೇ ಆ ಆಡುಭಾಷೆ ಸೊಗಡು. ಮುಖ್ಯವಾಗಿ ಭಾಷಾ ಬನಿ ಇರೋದೇ ಉಚ್ಚಾರ ಕ್ರಮದಲ್ಲಿ.

✣ ✣ ✣

ವಿಜಯಾ ಸುಬ್ರಹ್ಮಣ್ಯ
'ಕಾರ್ತಿಕೇಯ'' , ನಾರಾಯಣ ಮಂಗಲ
ಕುಂಬಳೆ ಕಾಸರಗೋಡು –671 321
ದೂರವಾಣಿ : 04998–214125

57 ವರ್ಷ. ಗೃಹಿಣಿ. ನಿವೃತ್ತ ಶಿಕ್ಷಕಿ, ಗ್ರಂಥ ಪಾಲಕಿ ಶ್ರೀ ಭಾರತೀ ಸಂಸ್ಕೃತ ವಿದ್ಯಾಲಯ ಮುಜುಂಗಾವು ಕುಂಬಳೆ

ಪ್ರಕಟಿತ ಕೃತಿ : 6 ಹವಿಗನ್ನಡ ಕೃತಿ : ಹತ್ತೆಸಳು, 2006, ಪು. ... ಕೊಡಗಿನ ಗೌರಮ್ಮ ಕಥಾ ಸ್ಪರ್ಧೆಲಿ ಪುರಸ್ಕೃತ 10 ಹವಿಗನ್ನಡ ಕಥೆಗಳ ಸಂಕಲನದ ಸಂಪಾದಕಿ. ಇದ್ರಲ್ಲಿ ಸಂಪಾದಕಿಯ ಕಥೆಗಳೂ ಇದ್ದು.

❶ ಕನ್ನಡದ ಒಂದು ಉಪಭಾಷೆಯೇ ಹವಿಗನ್ನಡ ಭಾಷೆ. ಕನ್ನಡ ಬೇರೆ ಅಲ್ಲ, ಹವಿಗನ್ನಡ ಬೇರೆ ಅಲ್ಲ. ಎನ್ನ ಮಾತೃಭಾಷೆ ಹವಿಗನ್ನಡ. ಎನಗೆ ಸಾಹಿತ್ಯಲ್ಲಿ ಅಭಿರುಚಿ ಜಾಸ್ತಿ. ಆನು ಪ್ರಥಮತಃ ಕತೆ ಬರದ್ದದೂ ಹವಿಗನ್ನಡಲ್ಲಿಯೇ. ಆನು ಹೈಸ್ಕೂಲಿಂಗೆ (1964, 65,66) ಹೋಗಿಂಡಿಪ್ಪಗ ಒಂದು ಮಿನಿಕತೆ ಹವಿಗನ್ನಡಲ್ಲಿ ಬರದ್ದೆ. ಆ ಸಮಯದಲ್ಲಿ ಹವಿಗನ್ನಡ ಮಾತಾಡುವದು ಬಿಟ್ಟರೆ ಬರವದಾಗಲೀ ಸಾಹಿತ್ಯ ರಚನೆಯಾಗಲೀ ಮಾಡಿಕೊಂಡಿತ್ತಿದ್ದವಿಲ್ಲೆ. ಎಂಗಳ ದೊಡ್ಡ ರಜೆ ಸಂದರ್ಭಂಗಳಲ್ಲಿ ಎನ್ನ ಆತ್ಮೀಯ ಗೆಳತಿ ಕಾನತ್ತಿಲ ಶಾರದೆಯೂ ಆನು ಪರಸ್ಪರ ಹವಿಗನ್ನಡಲ್ಲಿ ಕಾಗದ ಬರಕ್ಕೊಂಡಿದ್ದಿದ್ದೆಯೊಂ. ಹಿಂದಿನ ಆ ಬರವಣಿಗೆಯ ಹಿನ್ನೆಲೆ ಈಗಲೂ ಬರವಲೆ ಬೆನ್ನುತಟ್ಟುವ ಕೆಲಸ ಮಾಡುತ್ತಾ ಇದ್ದು.

ಮನಸ್ಸು ಬಿಚ್ಚಿ ಹೇಳ್ಲೆ, ಬರವಲೆ, ಇನ್ನೊಬ್ಬಂಗೆ ವ್ಯಕ್ತಪಡಿಸಲೆ ನಮ್ಮ ಆಡುಮಾತಿಲ್ಲಿ ಸುಲಭ ಅವುತ್ತು. ನಮ್ಮ ಅಂತರಂಗದ ತುಮುಲ, ಕಷ್ಟ, ಸುಖ, ದುಃಖ, ದುಮ್ಮಾನ ಹೀಂಗಿದ್ದ ಹೃದಯದ ಸೂಕ್ಷ್ಮ ಸಂವೇದನಂಗಳ ಸಾಹಿತ್ಯಕ್ಕೆ ರೂಪು ಕೊಡ್ಲೆ ನಾವು ಮಾತಾಡುವ ಭಾಷೆಲಿ ಬೇಗನೆ ಎಡಿತ್ತು ಹೇಳಿ ಎನ್ನ ಅನುಭವ. ಮಾತೃಭಾಷೆಯ ವ್ಯಾಮೋಹ, ಅದರ ಸೆಳೆತ್ತ ಹೇಳಿರೆ ಅದೊಂದು ರೀತಿಯ ಪುಳಕ. ಹೀಂಗಿದ್ದ ಮೌಲ್ಯಂಗೊ ಎನ್ನ ಬರವಲೆ ಪ್ರೇರೇಪಿಸುತ್ತಾ ಇದ್ದು.

ಕೆಲವಾರು ವರ್ಷ ಹಿಂದೆ ಹವಿಗನ್ನಡಲ್ಲಿ ಬರವವು ಕಮ್ಮಿ ಇದ್ದರೂ ಇತ್ತೀಚೆಗೆ ಅದೊಂದು ಸಾಹಿತ್ಯ ಭಾಷೆಯಾಗಿ ರೂಪುಗೊಳ್ತಾ ಇಪ್ಪದು ಸಂತೋಷದ ವಿಚಾರ. ಈ ರೀತಿಯ ಬೆಳವಣಿಗೆಗೆ ಅದರ ರೂಪುರೇಶೆಗೆ ಬೆಂಗಳೂರಿಲ್ಲಿ ಅಖಿಲ ಹವ್ಯಕ ಮಹಾಸಭೆಲಿ ಹವ್ಯಕ ಅಧ್ಯಯನ ಕೇಂದ್ರ ಇದ್ದು. ಇದರ ಪ್ರಧಾನ ನಿರ್ದೇಶಕ ನಾರಾಯಣ ಶಾನಭಾಗ, ಹವಿಗನ್ನಡ ಪ್ರತಿಷ್ಠಾನದ ಅಧ್ಯಕ್ಷ ಡಾ। ಹರಿಕೃಷ್ಣ ಭರಣ್ಯ ಇವೆಲ್ಲ ಹವಿಗನ್ನಡಲ್ಲಿ ಬರವದರ ನಿಲ್ಲುಸಲೆ ಅವಕಾಶವೇ ಕೊಡದ್ದೆ ಪ್ರೋತ್ಸಾಹಿಸುತ್ತಾ ಇದ್ದವು. ಈ ಕಾರಣವೂ ಬರವಲೆ ಉತ್ತೇಜನಕಾರಿ ಅವುತ್ತು

ಎನಗೆ ಮದಾಲು ಪ್ರಶಸ್ತಿ, ಸನ್ಮಾನ ಸಿಕ್ಕಿದ್ದದೂ ಹವಿಗನ್ನಡ ಸಾಹಿತ್ಯಕ್ಕೆ. ಇದೊಂದು ಮುಖ್ಯ ಕಾರಣ ಹೇಳಿಯೂ ಹೇಳ್ಲಕ್ಕು. ದಿ। ಕೊಡಗಿನ ಗೌರಮ್ಮ ದತ್ತಿನಿಧಿ ಕಥಾಸ್ಪರ್ಧೆ ಹೇಳಿ ಹವಿಗನ್ನಡ ಕಥೆಗಾರ್ತಿಯಕ್ಕೊಗೆ ಅಖಿಲ ಭಾರತ

ಮಟ್ಟಲ್ಲಿಸಣ್ಣಕಥಾ ಸ್ಪರ್ಧೆ ವರ್ಷಂ ಪ್ರತಿ ನಡೆದು ಬತ್ತಾ ಇದ್ದು. ಇದರ ಹುಟ್ಟು ಹಾಕಿದವು ಶ್ರೀಯುತ ಕೇಶವ ಭಟ್ಟ ಪಿತಡ್ಕ, ಚಂದ್ರಶೇಖರ ಪಿತಡ್ಕ, ಡಾ। ವೈ. ಕೃಷ್ಣಮೂರ್ತಿ ಇವೆಲ್ಲ. ಈ ಸ್ಪರ್ಧಾ ವೇದಿಕೆಲಿ 1998ರಲ್ಲಿ ಎನಗೆ ಎರಡನೆ ಬಹುಮಾನ ಬಂದರೆ; 1999ರಲ್ಲಿ ಪ್ರಥಮ (ಪ್ರಶಸ್ತಿ) ಬಹುಮಾನ ಬಂತು. ಇದೆನಗೆ ಸಾಹಿತ್ಯ ಕ್ಷೇತ್ರಲ್ಲೊಂದು ಸೋಪಾನದ ಹಾಂಗಾತು. ಹಾಂಗೇ ಮೈಸೂರಿನ ಹವೀಕ ಸಂಘದವು 2 ವರ್ಷಕ್ಕೊಂದಾರಿ ಕೊಡಮಾಡುವ 'ಗಂಗೊಳ್ಳಿ ದತ್ತಿ ಪುರಸ್ಕಾರ' ಎನ್ನ ಹವ್ಯಕ ಭಾಷೆ ಲೇಖನ (ಹಳ್ಳಿಲಿ ಹವ್ಯಕ ಹೆಮ್ಮಕ್ಕೊ)ಕ್ಕೆ ಸಿಕ್ಕಿತ್ತು 2001ರಿಂದ ಕೊಡಗಿನ ಗೌರಮ್ಮ ಕಥಾಸ್ಪರ್ಧೆಯ ಸಂಚಾಲಕಿಯಾಗಿ ಸೇವೆ ಮಾಡುತ್ತಾ ಇದ್ದೆ. ಈ ಮುಖೇನ ಹವಿಗನ್ನಡ ಭಾಷೆಯ ಅಪ್ಪಿಗೊಂಡಿದೆ. ಸಂಪರ್ಕ ಮತ್ತೂ ಗಟ್ಟಿ ಆತು.

ಆನು ಹವಿಗನ್ನಡಲ್ಲಿ ಬರವದು ಬಿಟ್ಟಿದಿಲ್ಲೆ ಹೇಳಿ ಮೇಲೆ ಹೇಳಿದೆ ಉಲ್ಲೇಖಂದಲೇ ಗೊಂತಾವುತ್ತನ್ನೆ! 1996ರಲ್ಲಿ ಸುರುವಾದ ಕೊಡಗಿನ ಗೌರಮ್ಮ ಕಥಾಸ್ಪರ್ಧೆಗೆ 'ಪರಿಹಾರ', 'ಮಿಣುಕುಹುಳು', 'ಕರಿಮೋಡ ಕರಗಿತ್ತು', 'ಅತ್ತೇ ಗೌರತ್ತೇ' ಇವಿಷ್ಟು ಕೊಡಗಿನ ಗೌರಮ್ಮ ಕಥಾಸ್ಪರ್ಧಾ ವೇದಿಕೆಗೆ ಆನು ಬರದ ಕತಗೊ. ಅದರಲ್ಲಿ 'ಕರಿಮೋಡ ಕರಗಿತ್ತು' ಕತೆಗೆ ದ್ವಿತೀಯ ಬಹುಮಾನವೂ 'ಅತ್ತೇ ಗೌರತ್ತೇ' ಕತೆಗೆ ಪ್ರಥಮ ಬಹುಮಾನವೂ ಬಂತು. ಪ್ರಥಮ ಬಹುಮಾನ ಸಿಕ್ಕಿದ ಮೇಲೆ ಆ ವೇದಿಕೆಲಿ ಭಾಗವಹಿಸುವ ಅವಕಾಶ ಇಲ್ಲೆ. ಮತ್ತೆ ಎನ್ನ ಸಂಚಾಲಕಿಯಾಗಿ ಮಾಡಿದವು. ಇದಲ್ಲದ್ದೆ ಕೆಲವಾರು ಹವಿಗನ್ನಡ ಕತೆಗೊ, ಕವನಂಗೊ, ಜಾನಪದೀಯ ಸಂಗ್ರಹ ಹೀಂಗೆಲ್ಲ ಬರದ್ದೆ. ಹೆಚ್ಚಿನವು ಮಂಗಳೂರಿಂದ ಪ್ರಕಟ ಅಪ್ಪ 'ಹವ್ಯಕ ವಾರ್ತೆ' ಮಾಸಿಕ ಪತ್ರಿಕೆಲಿ ಪ್ರಕಟ ಆಯಿದು.

ಹವಿಗನ್ನಡ ಸಾಹಿತ್ಯವ ಉಪೇಕ್ಷೆ ಮಾಡುವವು ಬೇರೆಯವರಿಂದ ಹೆಚ್ಚಾಗಿ ಹವ್ಯಕರೇ ಹೇಳಿ ಬೇಜಾರಲ್ಲಿ ಹೇಳೆಕ್ಕಾವುತ್ತು, ''ಕನ್ನಡಲ್ಲಿ ಬರವೆ ಆದರೆ ಹವಿಗನ್ನಡಲ್ಲಿ ಬರವಲೆಡಿಯ'' – ಈ ಮಾತು ಕೊಡಗಿನ ಗೌರಮ್ಮ ಕಥಾಸ್ಪರ್ಧೆಗೆ ಬರವಲೆ ಹೇಳುವಗ ಕೆಲವು ಹೆಮ್ಮಕ್ಕಳ ಬಾಯಿಂದ ಬಪ್ಪ ಪ್ರತಿಕ್ರಿಯೆ. ಅದೇನೋ ಒಂದು ರೀತಿಯ ಕೀಳರಿಮೆ. ಒಂದಿಷ್ಟು ತಾತ್ಸಾರ ಭಾವ. ಹಾಂಗೆಯೇ

ಒಂದೆರಡು ಸರ್ತಿ ಕತೆ ಬರದವು. ''ಬಹುಮಾನ ಬತ್ತೇ ಇಲ್ಲೆ ಹೇಳಿ ಬರವದನ್ನೇ ಬಿಟ್ಟಿದೆ.'' ಹೇಳ್ತಾ ಇರ್ತವು. ಕೇವಲ ಬಹುಮಾನ ದೃಷ್ಟಿಂದ ಮಾತ್ರ ಬರವವು ಲೇಖಕರೇ ಅಲ್ಲ ಹೇಳಿ ಎನ್ನ ಅಭಿಪ್ರಾಯ.

❷ ಹವಿಗನ್ನಡಲಿಪ್ಪ ನುಡಿಸಂಸ್ಕೃತಿಯ ವ್ಯಾಪ್ತಿ ವಿಶಾಲವಾಗಿದ್ದು. ಒಳ್ಳೆ ಆಚಾರ – ವಿಚಾರಂಗೊ, ಸಂಸ್ಕಾರಂಗೊ, ಸತ್ಸಂಪ್ರದಾಯಂಗೊ ನಮ್ಮಲ್ಲಿದ್ದು. ಇದರೆಲ್ಲ ಒಳಿಶಿ, ಬೆಳೆಶುವ ಕೆಲಸ ನಮ್ಮಿಂದಲೇ ಆಯೆಕ್ಕು. ನಮ್ಮದರ ರಕ್ಷಣೆ ಮಾಡಿ, ವಿಸ್ತಾರ ಮಾಡುವ ಕೆಲಸ ನಮ್ಮಿಂದಲೇ ಆಯೆಕ್ಕಾವುತ್ತು ನಾವೇ ಒಳಿಶದ್ರೆ ಇನ್ನಾರು ಬಕ್ಕು?. ''ಮಕ್ಕೊಗೆ ಬೇಡದ್ದ ಅಬ್ಬೆ ಪಕ್ಕದವಕ್ಕೆಂತಕೆ?'' ಹೇಳಿ ಒಂದು ಗಾದೆ ಇದ್ದು. ಹಾಂಗೆ ಹವಿಗನ್ನಡವ ಹವ್ಯಕರೇ ಉಪೇಕ್ಷೆ ಮಾಡಿದರೆ ಹವ್ಯಕೇತರರು ಅಪೇಕ್ಷೆ ಪಡ್ಳಿದ್ದೊ? ನಮ್ಮ ಅಬ್ಬೆಯ ಸಾಂಕುವದು ರಕ್ಷಣೆ ಮಾಡುವದು ಇದೆಲ್ಲಾ ನಮ್ಮಲ್ಲೋರ ಕರ್ತವ್ಯ. ನಮ್ಮ ಮಾತೃಭಾಷೆಯ ಮೇಗೆ ಗೌರವ, ಪ್ರೀತಿ, ರಕ್ಷಣೆ ಇದೆಲ್ಲ ನಮ್ಮ ಹೊಣೆ.

ಮದಾಲು ನಮ್ಮಬ್ಬೆಯ ನಾವೇ ಪ್ರೀತ್ಯಾದರಂದ ಕಾಣೆಕ್ಕು. ಆದರೆ ಈಗೀಗ ಅಪ್ಪದೇ ವಿಪರ್ಯಾಸ. ಮಕ್ಕೊಗೆ ತೊದಲು ಮಾತು ಸುರುವಪ್ಪಗಳೇ ಮನೆ ಒಳ ಮಾತಾಡ್ಲೆ ಕಲಿಶುವದೇ ಇಂಗ್ಲೀಷ್. ಈಗ ಪ್ರತಿಯೊಬ್ಬರಿಂಗೂ ''ಎನ್ನ ಮಗ ಇಂಜಿನಿಯರಾಯೆಕ್ಕು ಅಥವಾ ಡಾಕ್ಟ್ರ ಆಯೆಕ್ಕು. ಹಾಂಗಾಯೆಕ್ಕಾರೆ ಸುರುವಿಂದಲೇ ಇಂಗ್ಲಿಷ್ ಮಾತಾಡೆಕ್ಕು'' ಈ ಭ್ರಮೆ ಸರ್ವತ್ರ ಪಸರಿಸಿದ್ದು. ಇದರಿಂದಾಗಿ ಹವಿಗನ್ನಡ ಒಳಿಶಲೆ ಕಷ್ಟ ಆಯಿದು. ಇಂಗ್ಲೀಷಿನ ಮುಂದೆ ಮತ್ತೆ ಯಾವುದೇ ಭಾಷೆ ನಗಣ್ಯ ಹೇಳುವ ಭಾವನೆ ಬೆಳೆತ್ತಾ ಇದ್ದು. ಇದೊಂದು ನಮ್ಮ ಭಾಷೆಗೆ ಬಂದ ದುರಂತವೇ ಸರಿ. ಹೀಂಗಿಪ್ಪಲಾಗ ಹೇಳ್ವದು ನಮ್ಮೆಲ್ಲರ ಅಂತರಂಗದೊಳ ಮೂಡಿ ಬಹಿರ್ಮುಖ ಮೊರೆ ಆಯೆಕ್ಕು. ಹವ್ಯಕರು ಹಳ್ಳಿವಾಸಿ ಆಗಿರಲಿ, ಪೇಟೆ, ನಗರ ವಾಸಿಗಳೇ ಆಗಿರಲಿ. ಮನೆ ಒಳ ಬೇರೆ ಭಾಷೆಗೆ ಅವಕಾಶ ಕೊಡದ್ದೆ ನಮ್ಮ ಮಾತೃಭಾಷೆ ಮಾತಾಡೆಕ್ಕು. ಮಕ್ಕಳಲ್ಲಿ ನಮ್ಮ ಭಾಷೆ ಮೇಗೆ ಪ್ರೀತಿ ಹುಟ್ಸೆಕ್ಕು,. ಸಸಾರ ಬೀಜ ಬಿತ್ತಲಾಗ.

ಹವ್ಯಕರಲ್ಲಿ ಅದೆಷ್ಟೋ ಸಂಪನ್ಮೂಲ ಇದ್ದು. ಅಮೂಲ್ಯ ನಿಧಿ ಸಂಪತ್ತು ಬತ್ತದೊರತ್ತೆಯ ಹಾಂಗೆ ಅನುಭವ ತಿಳುವಳಿಕೆಗಳ ಬುತ್ತಿ ಇದ್ದು. ಅದೆಷ್ಟೋ ಮನೆ

ಮದ್ದು ಗಿಡಮೂಲಿಕೆಗೊ, ಜಾನಪದ ಹಾಡುಗೊ ಹಳ್ಳಿಲಿಪ್ಪ ಹೆಮ್ಮಕ್ಕಳಲ್ಲಿದ್ದು. ಹಿಂದಿನಕಾಲದ ಅಜ್ಜಿಯಕ್ಕೊಗೆ ಅಕ್ಷರಾಭ್ಯಾಸ ಇಲ್ಲದ್ರೂ ಕೂದಲ್ಲೇ ಹಾಡುಗಳ ರಚನೆಮಾಡಿ ಹೇಳುವ ಪ್ರತಿಭೆ ಇತ್ತಿದ್ದು. ಹೀಂಗಿದ್ದೆಲ್ಲ ಅಳಿಯದ್ದೆ ಮುಂದಣ ತಲೆಮಾರಿಂಗೆ ಸಿಕ್ಕೇಕ್ಕಾರೆ ಸಾಹಿತ್ಯ ರಚನೆ ಮಾಂತ್ರ ಸಾಧ್ಯ. ಅಜ್ಜಿಯಕ್ಕಳ ಮಾತು ಈಗಾಣವಕ್ಕೆ ಕೆಲವು ಸರ್ತಿ ಪಿರಿ ಪಿರಿ ಹೇಳಿ ಕಾಂಗು. ಆದರೂ ಅದರಲ್ಲಿ ಪರಿಪರಿ ಅನುಭವಂಗೊ, ಉಪದೇಶಂಗೊ, ನೀತಿಗೊ ಇಕ್ಕು. ಅಜ್ಜಿಯಕ್ಕಳ ಪಿರಿಪಿರಿಗೆ ಬೇರಾರೂ ಎದುರುತ್ತರ ಕೊಡದ್ರೆ ಅದು ಮನೆ ಒಳ ಒಂದುಸುತ್ತು ಬಪ್ಪಗ ತನ್ನಿಂತಾನೇ ತಣ್ಣಂಗಕ್ಕು. ಇದೆಲ್ಲಸಾಹಿತ್ಯ ರೂಪಕ್ಕೆ ಬರೆಕು ಹೇಳ್ತಾ ಇಲ್ಲಿ ಉಲ್ಲೇಖ ಮಾಡಿದ್ದೆ.

ಸ್ಥಳೀಯ ಸಂಘ ಸಂಸ್ಥೆಗೊ ಹವಿಗನ್ನಡ ಉಳಿಸಿ ಬೆಳೆಶಲೆ ಪ್ರಯತ್ನ ಮಾಡೆಕ್ಕು. ಎನ್ನ ಗಮನಕ್ಕೆ ಬಂದಹಾಂಗೆ ಕಾಸರಗೋಡು ಜಿಲ್ಲಾ ಹೈವ ಬ್ರಾಹ್ಮಣ ಯುವ ವೇದಿಕೆ, ಬೆಂಗಳೂರು ಹವ್ಯಕ ಅಧ್ಯಯನ ಕೇಂದ್ರ, ಮೈಸೂರು ಹವೀಕ ಸಂಸ್ಥೆ ಹೀಂಗೆಲ್ಲ ರಜ ರಜ ಪ್ರಯತ್ನ ಮಾಡ್ತಾ ಇದ್ದವು. ಹವಿಗನ್ನಡ ಸಾಹಿತ್ಯ ರಚನೆ ಮಾಡುವವು ಹವ್ಯಕರೇ ಆಯೆಕ್ಕಾಗಿಲ್ಲೆ. ಹವ್ಯಕೇತರರೂ ಹವಿಗನ್ನಡ ಸುಲಲಿತವಾಗಿ ಮಾತಾಡ್ತವು. ಈ ಸಂದರ್ಭಲ್ಲಿ ನರ್ಕಳ ಮಾರಪ್ಪ ಶೆಟ್ಟರು 1930ರಲ್ಲೆ 'ಕೂಸಕ್ಕನ ಮದುವೆ' ಹೇಳಿ ನಾಟಕವನ್ನು ರಚಿಸಿದ್ದರ ನೆಂಪು ಮಾಡೆಕ್ಕಾವುತ್ತು. ಕೊಡಗಿನ ಗೌರಮ್ಮ ಕಥಾ ಸ್ಪರ್ಧೆಯ ದಶಮಾನೋತ್ಸವ ಹೋದ ಮಾರ್ಚ (2006)ಲಿ ಕಳಾತು. ಹತ್ತು ವರ್ಷದ ಪ್ರಶಸ್ತಿ ವಿಜೇತರ ಹತ್ತು ಕತೆಗಳ ಸಂಕಲನ 'ಹತ್ತೆಸಳು' ಪ್ರಕಟಾಗಿ ಬಿಡುಗಡೆ ಆತು. ಈ ಸಂಕಲನದ ಪ್ರಧಾನ ಸಂಪಾದಕಿಯಾಗಿ ಆನು ಸೇವೆ ಸಲ್ಲಿಸಿದ್ದೆ. ಹೆಮ್ಮಕ್ಕಳ ಬೇನೆ – ಬೇಗುತಿ ಸಾಮಾನ್ಯವಾಗಿ ಹೆರಬಪ್ಪದು ಅಪರೂಪ. ಸಾಹಿತ್ಯ ರೂಪಲ್ಲಿಯಾದರೆ ಅದು ನಾಗರಿಕವಾಗಿ ಪ್ರಕಟ ಅಪ್ಪಲೆ ಸಾಧ್ಯತೆ ಹೆಚ್ಚು. ಈ ಕಾರಣಕ್ಕಾಗಿ ಹೆಮ್ಮಕ್ಕೊ ಹೆಚ್ಚು ಹೆಚ್ಚಾಗಿ ಸಾಹಿತ್ಯಲ್ಲಿ ತೊಡಗಿಸಿಕೊಂಡರೆ ಒಳ್ಳೆದು. ಹೆಮ್ಮಕ್ಕಳ ಸಮಿತಿಯೇ ಇದ್ದು. ಉದಾ: ಶ್ರೀರಾಮಚಂದ್ರಾಪುರ ಮಠಕ್ಕೆ ಸಂಬಂಧಪಟ್ಟ ಹಾಂಗೆ ಗ್ರಾಮ, ಸೀಮೆ, ಹೋಬಳಿ ಹೇಳಿ ಶ್ರೀಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಪರಿಷತ್ತು ರಚನೆ ಮಾಡಿದ್ದವು. ಈ ಮಹಿಳಾ ಅಥವಾ ಮಹನೀಯರ ಪರಿಷತ್ತು

ಹವಿಗನ್ನಡ ಸಾಹಿತ್ಯ ಗೋಷ್ಠಿಗಳ ತೊಡಗಿಸಿಕೊಳ್ಳೆಕ್ಕು.

ಬೆಂಗಳೂರಿನ ಮಲ್ಲೇಶ್ವರಲ್ಲಿದ್ದ ಹವ್ಯಕ ಮಹಾಸಭೆಲಿ ಕಾರ್ಯಕ್ರಮಂಗಳನ್ನೂ ಕಾರ್ಯ ಚಟುವಟಿಕೆಗಳನ್ನೂ ಹವಿಗನ್ನಡಲ್ಲೆ ತೊಡಗಿಸಿಕೊಳ್ಳೆಕ್ಕು. ಹವ್ಯಕಲ್ಲೇ ಮಾತಾಡಿದರೆ ಅದು ಬೆಳದು ಬತ್ತು, ದಕ್ಷಿಣ ಕನ್ನಡ ಅಥವಾ ಕುಂಬಳೆ, ಕಾಸರಗೋಡಿನವಕ್ಕೆ, ಪುತ್ತೂರು, ವಿಟ್ಲ ಇವಕ್ಕೆಲ್ಲ ಉತ್ತರ ಕನ್ನಡ ಭಾಷೆಯೂ ಅಲ್ಲಿಯವಕ್ಕೆ ದಕ್ಷಿಣ ಕನ್ನಡ ಭಾಷೆಯೂ ಸರಿಯಾಗಿ ಮಾತಾಡ್ಲೆ ಬರೆಕು. ಹವ್ಯಕ ಮಹಾಸಭೆ ಬೆಂಗಳೂರಿಂದ "ಹವ್ಯಕ" ಹಾಂಗೇ ಮಂಗಳೂರಿಂದ ಬಿಡುಗಡೆ ಅಪ್ಪ ಮಾಸಪತ್ರಿಕೆ "ಹವ್ಯಕ ವಾರ್ತೆ" ಇದರಲ್ಲೆಲ್ಲ ಹವಿಗನ್ನಡಕ್ಕೆ ಪ್ರಾಧಾನ್ಯತೆ ಕೊಟ್ಟದು ಸಾಲ. ಇನ್ನು ಮುಂದೆ ಹವಿಗನ್ನಡಕ್ಕಾಗಿಯೇ ಮೇಲಿನ ಮಾಸಪತ್ರಿಕೆಗಳಲ್ಲಿ ಮೀಸಲಿರಿಸೆಕ್ಕು ನಾಲ್ಕಾರು ಪುಟಂಗಳ.

ನಮ್ಮ ಶ್ರೀ ರಾಮಚಂದ್ರಾಪುರ ಮಠವೂ ಹವಿಗನ್ನಡಕ್ಕೆ ಪ್ರೋತ್ಸಾಹ ಕೊಡೆಕು. ಈಗಾಗಲೇ ಹೋಬಳಿ ಮಟ್ಟಲ್ಲಿ ಮಹಿಳೆಯರಿಂಗೆ ಕೆಲವಾರು ಸ್ಪರ್ಧೆಗೊ ಏರ್ಪಾಟಾಯಿದು. ಆದರೆ ಅದು ಹವಿಗನ್ನಡಲ್ಲಿ ಅಲ್ಲ. ಇನ್ನು ಮುಂದೆ ಸಾಹಿತ್ಯ ಗೋಷ್ಠಿ ಮತ್ತೆ ಸ್ಪರ್ಧೆಗೊ ಹವಿಗನ್ನಡಲ್ಲಿ ಆಯೆಕ್ಕು.

ಈ ರೀತಿ ಸಂಘ ಸಂಸ್ಥೆಗೊ, ಹವ್ಯಕ ಅಧ್ಯಯನ ಕೇಂದ್ರ, ಸಭೆಗೊ, ಪತ್ರಿಕೆಗೊ, ಸಮಾಜ, ಶ್ರೀ ಮಠ ಎಲ್ಲರೂ ಹವಿಗನ್ನಡ ಭಾಷೆಯ ಉಳಿಶಿ, ಬೆಳೆಶಲೆ ಪ್ರಯತ್ನ ಮಾಡಿದಲ್ಲಿ ಸಂಶಯವಿಲ್ಲದ್ದೆ ಉದ್ಧಾರ ಆಗಿಯೇ ಆವುತ್ತು ॥ ಹವಿಗನ್ನಡಂ ಗೆಲ್ಗೆ॥ ಹವಿಗನ್ನಡ ಗೆಲ್ಲಲಿ, ಬೆಳೆಯಲಿ, ಬಾಳಲಿ, ಬೆಳಗಲಿ.

✤ ✤ ✤

ವಾಗ್ದೇವಿ ನೂಜಿ
'ನೂಜಿ ಹೌಸ್' ವಿಟ್ಲ ಮುಡ್ನೂರು
ಬಂಟವಾಳ ದಕ್ಷಿಣ ಕನ್ನಡ – 574 243
ದೂರವಾಣಿ : 08255–239680
66 ವರ್ಷ ಗೃಹಿಣಿ. ಪ್ರಕಟಿತ ಕೃತಿ : 2
ಹವಿಗನ್ನಡ ಕೃತಿ : ಹವ್ಯಕದ ಹನಿಗೊ. ಕವನ ಸಂಕಲನ –2006 ಪುಟ : 24

❶ ನಮ್ಮ ಭಾಷೆ ಹವೀಕ ಭಾಷೆ. ನಮ್ಮ ಹಿರಿಯರಿಂದಲೇ ಮದಲಿಂದಲೇ ಬಂದ ಭಾಷೆ ಇದುವೆ. ಇದರ ಉದ್ದಿ ಒರಸಿ ಹೊಸತ್ತು ಮಾಡ್ತೊದು ಚೆಂದವೂ ಅಲ್ಲ ಒಳ್ಳೆದೂ ಅಲ್ಲ. ಭೂಷಣವೂ ಅಲ್ಲ ಎನಗೆ 'ನಮ್ಮ ಭಾಷೆ' ಹೇಳಿ ಹವಿಗನ್ನಡ ಭಾಷೆಲಿ ತುಂಬ ಅಭಿಮಾನ. ಆನು ಮೊದಲಿಂದಲೇ ಮಕ್ಕೊಗೆ ಸಂಬಂಧಿಕರಿಂಗೆ ಕಾಗದ ಬರೆತ್ತರೆ ಅದು ನಮ್ಮ ಭಾಷೆಲಿಯೆ. ಅವರವರ ಭಾಷೆ ಅವಕ್ಕವಕ್ಕೆ ಚೆಂದ. ಅದು ಎಷ್ಟು ಹಳತ್ತಾದರೂ ಅದುವೇ ಚೆಂದ. ನಮ್ಮ ಅಬ್ಬೆ ಹೇಂಗಿದ್ದರೂ ನಮಗೆ ಚೆಂದ. ಸಮಯ ಮುಂದೆ ಹೋದ ಹಾಂಗೆ ನಾವು ಅಬ್ಬೆಯ ಬದಲುಸುತ್ತೋ? ಹಾಂಗೆ ಬರವಗಳು ನಮ್ಮ ಭಾಷೆಯನ್ನೇ ಉಪಯೋಗಿಸಿದರೆ ಚೆಂದ ಹೇಳಿ ಎನ್ನ ಅಭಿಪ್ರಾಯ ನಮ್ಮ ಭಾಷೆಲಿ ಬರದ ಕಾಗದದ ಓದುವಗ ನಾವು ನಾವು ಮುಖತಾ ಕಂಡ ಹಾಂಗೇ ಅಪ್ಪದೊಂದು ವಿಶೇಷವೆ. ನಾವು ಮಾತಾಡಿದ ಹಾಂಗೆ ಕವನ ಬರವಗ ಓದುವಗ ಮನಸ್ಸಿಂಗೆ ತುಂಬಾ ಖುಶಿ ಕೊಡ್ತು. ಕೆಲಸ ಮಾಡ್ತಾ ಮಾಡ್ತಾ ಬಾಯಿಲಿ ಗುಣುಗುಣುಸುಲೆ ಒಳ್ಳೆದಾವ್ತು. ಹವೀಕ ಭಾಷೆ ನಮ್ಮ ಹವ್ಯಕರಿಂಗೆ ಒಂದು ಅತ್ಯಮೂಲ್ಯ ಸಂಪತ್ತೇ ಸರಿ. ''ಅಬ್ಬೇ'' ಹೇಳುವ ಎರಡು ಅಕ್ಷರ ಮನಸ್ಸಿನ ತುಂಬಿ ತುಳುಕುಸುತ್ತು. ನಮ್ಮ ಹವೀಕ ಭಾಷೆಲಿ ಎನಗೆ ತುಂಬಾ ಪ್ರೀತಿ. ಈ ಎಲ್ಲ ಕಾರಣಕ್ಕಾಗಿ ಆನು ಹವೀಕ ಭಾಷೆಲಿ ಬರೆತ್ತಾ ಇದ್ದೆ.

❷ ಅತೀ ಹಿಂದಾಣ ಕಾಲಲ್ಲಿ ಹೆಮ್ಮಕ್ಕೊಗೆ ವಿದ್ಯಾಭ್ಯಾಸವೇ ಇತ್ತಿಲ್ಲೆ. ಆದರು ಕೂಡ ಎಲ್ಲಾ ಹೆಮ್ಮಕ್ಕಳೂ ಒಬ್ಬಂದೊಬ್ಬ ಹೇಳುವೊದರ ಕೇಳಿಯೇ ಹಾಡುಗಳ ಕಲ್ತು ಮದುವೆ, ಉಪನಯನ, ಪೂಜೆ, ಹೋಮ, ಬಾರ್ಸ ಹೀಂಗಿಪ್ಪ ಶುಭ ಸಮಾರಂಭಲ್ಲಿ ಎಲ್ಲ ರಾಗವತ್ತಾಗಿ ಹೇಳ್ಯೊಂಡಿತ್ತಿದ್ದವು. ಎಲ್ಲ ಜೆಂಬ್ರಂಗೊಕ್ಕೆ ಸಾಹಿತ್ಯ ಮಾಡಿ ಕೊಡಗು. ಅದೇ ಅವರ ವಿದ್ಯೆ. (ಈಗಾಣ ಹಾಂಗೆ ಅಂಬಗ ಪರಿಕರ್ಮಿ ಕಡಮ್ಮೆ) ಎಲ್ಲಾದಕ್ಕೂ ಮನೆ ಹೆಮ್ಮಕ್ಕಳೆ. ಗೆಂಡು ಮಕ್ಕೊಗೆ ಒಂದ್ರಜಾ ಬರವಲೆ ಕಲಿಶುಗು. ಅಂಬಗಾಣ ಬರಹ ಕಲಿವ ಕ್ರಮವೇ ಬೇರೆ. ನೆಲಲ್ಲಿ ಹ್ಯೊಗೆ ಹಾಕಿ ಬೆರಳಿಲ್ಲಿ ಬರೆಶುವೊದಡ . (ಎನ್ನ ಅಜ್ಜಿ ಹೇಳಿಗೊಂಡಿತ್ತಿದ್ದವು) ಮಾಣ್ಯಂಗೊಕ್ಕೆ ವೇದ ಪಾಠ ಕಲಿಶುಗಡ. ಹೀಂಗೆ. ಈಗ ಕಾಲ ಮುಂದರ್ದು ಮನುಷ್ಯರೂ ಮುಂದರ್ದವು. ಈಗ ಪ್ರತಿಯೊಬ್ಬನೂ 3ನೇ ವರ್ಷಲ್ಲಿ ಶಾಲೆಗೆ ಹೋವಲೆ ಸುರುಮಾಡ್ತವು. ಕಲ್ತು ಏನಾರೊಂದು ಉದ್ಯೋಗ ಹಿಡಿತ್ತವು.

ಅವಕ್ಕೆಲ್ಲ ಮದಲಾಣ ಹಾಡು, ವೇದ ಕಲವಲೆ ಸಮಯವೇ ಇಲ್ಲೆ. ಆದರೆ ಎನ್ನ ಅಭಿಪ್ರಾಯ ಪ್ರಕಾರ ನಮಗೆ ನಮ್ಮ ಹಿರಿಯೋರಿಂದ ಬಂದದ ನಮ್ಮ ಮಕ್ಕೊಂಗೆ ಕಲಿಶಿಯೇ ಕಲಿಶೆಕ್ಕು. ನಾವು ಮಾಡಿದ್ದರ ಅವುದೇ ಮಾಡ್ತವು. ಅವು ಅವರ ಮಕ್ಕೊಗೆ ಕಲಿಶೆಕ್ಕು. ನಮ್ಮ ಭಾಷೆ, ಸಂಸ್ಕೃತಿಯ ನಮ್ಮ ಒಟ್ಟಿಂಗೆ ದಿನಾ ಆಳವಡಿಸೆಕ್ಕು. ಶಾಲೆಲಿ ಮಕ್ಕೊಗೆ ಬೇರೆ ಬೇರೆ ಭಾಷೆಗಳ ಕಲಿಶುತ್ತವು. ಮಕ್ಕೊ ಕಲಿಯಲಿ. ಕಲಿಯೆಕ್ಕು. ಆದರೆ ಮನೆಲಿ ಅಬ್ಬೆ ಅಪ್ಪ ಮಕ್ಕಳ ಕೈಲಿ ಇಂಗ್ಲೀಷ್ ಮಾತಾಡ್ಲಾಗ. ''ನಮ್ಮ ಭಾಷೆ ಕೊಳಕ್ಕು'' ಹೇಳ್ತೋರು ಕೆಲಾವು ಜೆನ ಇರ್ತವು. ಹಾಂಗೇಳಿ ಭಾಷೆಯನ್ನೇ ಬದಲುಸುಲಾಗ. ನಮ್ಮ ಮಾತೃಭಾಷೆ ಹೇಂಗಿದ್ದರೂ ನಮಗೆ ಚೆಂದವೆ. ನಮ್ಮ ಅಬ್ಬೆ ಪ್ರಾಯಪ್ಪಗ ಚೆಂದ ಇಲ್ಲೆ ಹೇಳಿ ನಾವು ಅಬ್ಬೆಯ ಬಿಡ್ತಕ್ಕೊ. ನಾವು ಕಲ್ತು ಉದ್ಯೋಗಲ್ಲಿ ಯಾವ ದೇಶಕ್ಕೇ ಹೋದರೂ ಎಲ್ಲೇ ಇದ್ದರೂ ನಮ್ಮ ಮನೆಲಿ ಮಾಂತ್ರ ನಮ್ಮ ಭಾಷೆ, ಆಚಾರಂಗಳ ಬಿಡ್ಲಾಗ. ಇದು ಪ್ರತಿಯೊಬ್ಬ ಹವ್ಯಕನೂ ನೆನಪಿಲ್ಲಿ ಮಾಡುಗೆಕ್ಕಾದ್ದು. ಮತ್ತೆ ನಮ್ಮ ಹವ್ಯಕರ ಸಭೆ, ಸಮಾರಂಭಂಗಳಲ್ಲಿ ಹವ್ಯಕ ಭಾಷೆಲೇ ಮಾತಾಡೆಕ್ಕು (ಭಾಷಣ). ಇನ್ನೊಂದು ವಿಷಯ : ಈಗ ಅಲ್ಲೊಬ್ಬ ಇಲ್ಲೊಬ್ಬ ಹವಿಗನ್ನಡಲ್ಲಿ ಬರದ ಲೇಖನಂಗಳ (ಪದ್ಯ, ಕಥೆ, ತಮಾಶೆ) ಓದಿ ಪ್ರತಿಯೊಬ್ಬನೂ ಬರವವಂಗೆ ಪ್ರೋತ್ಸಾಹ ಕೊಡೆಕ್ಕು. ''ಇದ ಆನೊಂದು ಹವಿಗನ್ನಡಲ್ಲಿ ಹನಿಗಳ ಬರದ್ದೆ'' ಹೇಳಿ ಪುಸ್ತಕವ ಕೈನೀಡಿ ಕೊಟ್ಟರು ಕೂಡ ''ಆನದರ ಓದುತ್ತಿಲ್ಲೆ ಎಂತು ಇದ್ದು ಅದರಲ್ಲಿ?'' ಹೇಳ್ತೊರೇ ಈಗ ಜಾಸ್ತಿ. ಹಾಂಗೆ ಮಾಡದ್ದೆ ಅವ್ವಾಗಿಯೇ ಕೇಳಿ ಪುಸ್ತಕ ಓದಿ, ತಾನೂ ಎಡಿಗಾರೆ ಬರವಲೆ ಪ್ರಯತ್ನ ಪಡೆಕ್ಕು. ಇಲ್ಲದ್ರೆ ಬರವವರ ಹುರಿದುಂಬಿಸಿ ಹೆಚ್ಚು ಹೆಚ್ಚು ಬರವಲೆ ಪ್ರೋತ್ಸಾಹ ಕೊಡೆಕ್ಕು. ನಾವು ನಮ್ಮ ಸಂಸ್ಕೃತಿಯ ಮುಂದೆಯೂ ಪಾಲಿಸಿಗೊಂಡು ಬರೆಕ್ಕಾರೆ ನಮ್ಮ ಹಿರಿಯೋರ ನಾವು ಅನುಸರಿಸೆಕ್ಕು. ನಾವು ಕಿರಿಯೋರಿಂಗೆ ಮಾರ್ಗದರ್ಶಕರಾಗಿರೆಕ್ಕು. ಹವ್ಯಕನಾದ ಪ್ರತಿಯೊಬ್ಬನೂ ಈ ಕೆಲಸ ಮಾಡಿದರೆ ಖಂಡಿತಾ ಎಡಿಗು. ಶಾಲೆಲಿ ಕನ್ನಡ ಕಲಶಿಯೇ ಕಲಿಶುತ್ತವು. (ಕನ್ನಡ ಶಾಲೆಲಿ) ಪರದೇಶಂಗಳಲ್ಲಿ ಇಲ್ಲದ್ರೆ ಅಬ್ಬೆ ಅಪ್ಪ ಮಕ್ಕೊಗೆ ಕಲಶೆಕ್ಕು. ನಾವು, ನಮ್ಮ ಅಬ್ಬೆ ನಮ್ಮ ಅಪ್ಪ, ನಮ್ಮ ಮಕ್ಕೊ, ನಮ್ಮ ಭಾಷೆ ಎಲ್ಲದರಲ್ಲೂ ಪ್ರೀತಿ ಮಡುಗಿ ಮನಸಾರೆ ಮುಂದಿನ ಪೀಳಿಗೆಯ ಹವೀಕ ಮಕ್ಕಳನ್ನಾಗಿ ಮಾಡ್ತೆ ಛಲ ತೊಡೆಕ್ಕು. ಖಂಡಿತಾ

ನಮ್ಮ ಹವೀಕರೆಲ್ಲರೂ ಎಲ್ಲದರಲ್ಲೂ ಮುಂದೆ ನಿಂಬಲೆ ಎಡಿಗು ಹೇಳಿ ಎನ್ನ ಅಭಿಪ್ರಾಯ ಮತ್ತು ಆಶಯ.

✣ ✣ ✣



ವಿಚಿತ್ರ ಏತಡ್ಕ (ವಾಯ್.ಎಸ್. ಹರಿಹರ ಭಟ್ಟ)
'ಸ್ಫೂರ್ತಿ ನಿಕೇತನ' ಏತಡ್ಕ ಕಾಸರಗೋಡು –671 551
ದೂರವಾಣಿ : 04998–260231
81 ವರ್ಷ. ಕೃಷಿಕ. ಸಾಹಿತಿ, ಪ್ರಕಟಿತ ಕೃತಿ : 9
ಹವಿಗನ್ನಡ ಕೃತಿ : ಅವಿಲು ಕವನ ಸಂಕಲನ 1992 ಪು : 24

❶ ಭಾಷೆ ಒಳಿಶಲು. ಎನಗೆ ಕವನದಲ್ಲಿ ಹೆಚ್ಚು ಪ್ರೀತಿ. ಗದ್ಯಕ್ಕಿಂತ ಕವನ ಹೆಚ್ಚು ಪ್ರೀತಿ. ಗದ್ಯಕ್ಕಿಂತ ಕವನ ಹೆಚ್ಚು ಜನರನ್ನು ತಲುಪುತ್ತು, ಮಕ್ಕಳ್ಲಿ ಭಾಷೆ ಮೇಲಿನ ಪ್ರೀತಿ, ಅಭಿಮಾನ ಅನುರುಣಿಸಲು ಅವರ ಹೃದಯದ ಮೂಲಕ ನಾಲಗೆ ಮೇಲೆ ನಲಿದಾಡೆಕ್ಕು. ಆಗ ಕಾವ್ಯ ಮಾಧ್ಯಮವೇ ಉತ್ತಮ. ಆಮೇಲೆ ಗದ್ಯ ನೋಡೆಕ್ಕು.

❷ ಮುಂದಿನ ಜನಾಂಗಕ್ಕೆ ಭಾಷೆ – ಸಂಸ್ಕೃತಿಯ ಕೆನೆ ಸವಿಯುಲೆ, ಭಾಷೆ ಒಳಿಶಲೆ ನಾವು ಪ್ರಯೋಗ ಶೀಲರಾಗೆಕ್ಕು. ಹವಿಗನ್ನಡ ಕವಿತಾ ರಚನೆ, ಶೋಭಾನೆ ಹಾಡು, ಪದಬಂಧಂಗಳ ಸ್ಪರ್ದೆ ನಡೆಶೆಕ್ಕು. ಹವ್ಯಕ ಪದಕೋಶ ತಯಾರಾಗೆಕ್ಕು. ಮುಖ್ಯವಾಗಿ ಪೇಟೆಲಿಪ್ಪ ಹವ್ಯಕ ಮಕ್ಕೊ ಹವ್ಯಕ ಪರಿಸರದಿಂದ ದೂರಾಗಿ ಭಾಷೆ ಮಹತ್ವ ಗೊಂತಾಗ್ದೆ ಬೇರೆ ಭಾಷೆ ಅವಲಂಬನೆ ಮಾಡ್ತೊ, ಮನೆಮಂದಿ ಪ್ರಜ್ಞಾಪೂರ್ವಕವಾಗಿ ಹವೀಕ ಭಾಷೆಲಿ ಮಾತಾಡಿದರೆ ಅದರ ಒಳಿಶಲಕ್ಕು. ಉದಾ: ಕೇರಳದ ಪಾಲ್ಘಾಟಲಿ ಸುಮಾರು 300 ಹವ್ಯಕ ಮನೆ ಈಗ್ಲೂ ಭಿನ್ನ ಪರಿಸರ ಸಂಸ್ಕೃತಿಲಿ ಇದ್ರೂ ಹವೀಕ ಭಾಷೆ ಬಿಟ್ಟಿದವಿಲ್ಲೆ, ಒಳಿಶಿಗೊಂಡಿದ್ದೊ ಇದು ಎಲ್ಲೋರಿಂಗು ಆದರ್ಶ.

✣ ✣ ✣

ನಡಹಳ್ಳಿ ಶ್ರೀಪಾದರಾವ್
303, 'ಎ' ಬ್ಲಾಕ್, ಕಸ್ತೂರಿಧಾಮ ಅಪಾರ್ಟ್‌ಮೆಂಟ್
9ನೇ ಕ್ರಾಸ್, 8ನೇ ಮುಖ್ಯರಸ್ತೆ, ಮಲ್ಲೇಶ್ವರಂ
ಬೆಂಗಳೂರು–560 003
ಫೋನ್ : 23378787
ಪ್ರಕಟಿತ ಕೃತಿ : 2
(ಮೂಲತಃ ಸೊರಬ ತಾಲ್ಲೂಕಿನ ನಡಹಳ್ಳಿ ಗ್ರಾಮದೋರು)
ಹವಿಗನ್ನಡ ಕೃತಿ : ನಮ್ಮೆಲ್ಲರ ಬಜುಕಿನ ಕಥೆ, ನಾಟ್ಕ, 1986 ಪು. 48

❶ ತಾಯ್ನುಡಿ ಮೇಲೆ ಇದ್ದ ಅಭಿಮಾನ, ಪ್ರೀತಿ ಕಾರಣದಿಂದ ಹವಿಗನ್ನಡದಲ್ಲಿ ಬರ್ದಿ

❷ ನಮ್ಮಮ್ಮೆ ತಾಯ್ನುಡಿ ಮೇಲೆ ಅಭಿಮಾನ ಬೆಳೆಯೋ ಮನ್ಯಲ್ಲಿ ತಾಯ್ನುಡೀಲೇ ಮಾತಾಡೋ. ಪ್ರಭಾವೀ ಮಾಧ್ಯಮ ಅಂದ್ರೆ ಪತ್ರಿಕೆ, ಆಕಾಶವಾಣಿ, ಸಿನೆಮಾ, ಧಾರಾವಾಹಿ ಇದ್ರಲ್ಲೆಲ್ಲಾ ಹವಿಗನ್ನಡ ಹೆಚ್ಗೆ ಬಪ್ಪಾಂಗೆ ಪ್ರಯತ್ನ ಮಾಡೊ.

✣ ✣ ✣

ಪಿ.ಎಂ. ಹೆಗಡೆ, ಎಂ.ಎ., ನಿವೃತ್ತ ಪ್ರಾಧ್ಯಾಪಕರು
'ಪೂರ್ಣಿಮಾ' ಹೊಸಪೇಟೆ ರಸ್ತೆ, ಸಿರ್ಸಿ
ಉತ್ತರ ಕನ್ನಡ–581 401
ದೂರವಾಣಿ : 08384–227626
ಪ್ರಕಟಿತ ಕೃತಿ : 2
ಹವಿಗನ್ನಡ ಕೃತಿ : ಯಂಗ್ಳೂ ಪ್ಯಾಟಗೆ ಹೋಗಿದ್ಯ ನಾಟ್ಕ 2002 ಪು. 16

❶ ತಾಯ್ನುಡಿ ಮೇಲಿನ ಅಭಿಮಾನದಿಂದ ಬರದ್ದಿ

❷ ಹವ್ಯಕರೇ ಪ್ರೋತ್ಸಾಹಿಸವು.

✣ ✣ ✣



ವಿಶ್ವೇಶ್ವರ ವಿ.ಕೆ. (ವಿಶ್ವ ಮರಕ್ಕಿಣಿ)
'ಶಾಂತಿ ಸದನ', ಮರಕ್ಕಿಣಿ, ಅಡ್ಯನಡ್ಕ
ಬಂಟವಾಳ, ದ.ಕ.–574 260
ದೂರವಾಣಿ : 08255–270202
34 ವರ್ಷ. ವೈದ್ಯ. ಸಾಹಿತಿ, ಪ್ರಕಟಿತ ಕೃತಿ : 1

ಹವಿಗನ್ನಡ ಕೃತಿ : ಹೂಗು ತೈಂದೆ. ಸಂಪಾದಿತ ಕವನ ಸಂಕಲನ 2003 ಪು : 42

❶ ಯಥಾರ್ಥಕ್ಕೆ ಹೇಳಿಕ್ಕೊಳಿ ಆದರೆ ಒಂದು ವಿಶೇಷವಾದ ಕುತೂಹಲಂದಾಗಿ ಹವಿಗನ್ನಡಲ್ಲಿ ಬರವಲೆ ಸುರು ಮಾಡಿದ್ದಾನು. ಕನ್ನಡ ಬಾಶೆಲಿ ಚೂರು ಚೂರು ಬರತ್ತಾ ಇಪ್ಪಗ, ನಮ್ಮ ಬಾಶೆಲಿ, 'ಕನ್ನಡ ಜನ ಅಂತರಂಗ' ಪೇಪರಲಿ ದೊಡ್ಡಮಾವ° (ವಿ.ಬಿ. ಅರ್ತಿಕಜೆ) 'ಹವ್ಯಕರಂಗ' ಅಂಕಣ ನಡೆಶುತ್ತಾ ಇತ್ತಿದ್ದವು. ''ನಮ್ಮ ಬಾಶೆಲಿಯೇ ಬರೆಯೋ°'' ಹೇಳುವ ಅವರ ಪ್ರೀತಿಯ ಒತ್ತಾಯವೇ ಆನು ಹವಿಗನ್ನಡಲಿ ಬರವಲೆ ಮೂಲ ಪ್ರೇರಣೆ ಹೇಳುದರ ಇಲ್ಲಿ ದಾಖಲೆ ಮಾಡೆಕ್ಕು. ಇನ್ನೊಂದು, ನಮ್ಮ ಬಾಶೆಲಿ ಬರವದು ಗ್ರಂಥಸ್ಥ ಬಾಶೆ ಕನ್ನಡಲ್ಲಿ ಬರವಷ್ಟು ಸುಲಭ ಅಲ್ಲ ಹೇಳುವ ಚಾಲೆಂಜ್‌ದೆ ಇತ್ತು ಅಂಬಗ. ಕನ್ನಡಲ್ಲಿ ತುಂಬ ಹೆಸರು ಪಡದ ಹವ್ಯಕ ಸಾಹಿತಿಗಳುದೆ ಈ ಮಾತಿನ ಒಪ್ಪಿಕೊಂಡಿದವು. ಸದ್ಯ ನಮ್ಮ ಬಾಶೆಲಿ ಆನು ಬರವದು ಕಮ್ಮಿ ಆಯಿದು. ಎಂತಗೆ ಹೇಳಿದರೆ 'ಹವ್ಯಕರಂಗ'ದ ಹಾಂಗಿಪ್ಪ, ಹೆಚ್ಚು ಜೆನಕ್ಕೆ ಸುಲಾಬಲ್ಲಿ ಮುಟ್ಟುವಂಥ ಅಂಕಣ ಇಲ್ಲೆ ಈಗ! ಹಾಂಗಾಗಿ ಅಷ್ಟು ಮಟ್ಟಿಂಗೆ ಬರವಲೆ ಒತ್ತಾಸೆ ಇಲ್ಲೆ ಹೇಳುದು ಒಂದು ಕಾರಣ! ಮತ್ತೆ 'ಉದಾಸನ' ಹೇಳಿಯೂ ತಿಳ್ಕೊಂಬಲಕ್ಕು. ಆನು ಹವಿಗನ್ನಡಲ್ಲಿ ಕೆಲವೇ ಕೆಲವು ಪದ್ಯಂಗಳ ಬರದ್ದೆ ಅಷ್ಟೆ ಹೇಳೂದರ ಒಪ್ಪಿಕೊಳ್ತಾ, ಬರೆದ್ದದರ ಜೆನಂಗೊಕ್ಕೆ ತಲುಪುಸುವ ದಾರಿ ಕಾಣದ್ದೆ ಈಗ ತೊಂದರೆ ಇದ್ದು ಹೇಳುವ ಅಂಶವ ಸ್ಪಷ್ಟ ಮಾಡ್ತೆ. ಉದಾಹರಣೆಗೆ ಹೇಳ್ತರೆ, ಸದ್ಯ ಆನು ನಮ್ಮ ಬಾಶೆಲಿ ಬರದ್ದದು ಹೇಳಿದರೆ ಎಂಗಳ ಆತ್ಮೀಯ ಬಂಧು–ಬಳಗದವರ ಮದುವೆಲಿ, ಅಲ್ಲಿಯೇ ಕಟ್ಟಿ ಹೇಳುವ ಚೂರ್ಣಿಕೆ/ಪದ್ಯಂಗಳ ಮಾಂತ್ರ!

❷ ಕನ್ನಡವ ಒಳ್ಶಿ ಬೆಳೆಶುಲೆ ಎಂತ ಮಾಡೆಕ್ಕು?

ಬಾಶೆಯ ಉಪಯೋಗ ಮಾಡಿರೆ ಮಾಂತ್ರ ಅದು ಒಳ್ಗಿತ್ತಷ್ಟೆ. ಉದಾಹರಣೆಗೆ ಶ್ರೀಕೃಷ್ಣ ಅರ್ತಿಕಜೆಯವರ 'ನುಡಿ–ಸಂಸ್ಕೃತಿ' (ಹವ್ಯಕ ಪಡೆನುಡಿ ಕೋಶ) ಓದಿರೆ ಗೊಂತಾವುತ್ತು– ಅದರಲ್ಲಿಪ್ಪ ಎಷ್ಟೋ ಪಡೆನುಡಿಗಳ ನಾವು ದಿನಾ ಮಾತಾಡುವಗ ಉಪಯೋಗ್ಸುತ್ತೇ ಇಲ್ಲೆ ಹೇಳಿ. ಹಾಂಗಾಗಿ ಅವುಗಳೊಟ್ಟಿಂಗೆ ನಮ್ಮ ಹವ್ಯಕ ಸಂಸ್ಕೃತಿಯ ವಿಶೇಷ ಸ್ವಭಾವಂಗಳುದೆ, ಕ್ರಮಂಗಳುದೆ ನಿಧಾನವಾಗಿ ಮರದು ಹೋವುತ್ತಾ ಇದ್ದು. ಅಂತಹ ಪುಸ್ತಕಂಗಳ ತೆಕ್ಕೊಂಡು ಓದಿ ಮತ್ತೆ ದಿನಾ 'ನಮ್ಮ ಬಾಶೆಲಿ ಬದ್ಕುವ' ಗುಣ ಹವ್ಯಕರಿಂಗೆ ಬರೆಕ್ಕು.

ಹವಿಗನ್ನಡ ಸಾಹಿತ್ಯದ ಪ್ರೋತ್ಸಾಹಕ್ಕೆ ಹೇಳಿಯೇ ಒಂದು ಅಕಾಡೆಮಿ ಸ್ಥಾಪನೆ ಆದರೆ ನಮ್ಮ ಬಾಶೆಯ ಬೆಳವಣಿಗೆಗೆ ಒಂದು ಒಳ್ಳೆಯ ರೂಪ ಕೊಡ್ಲಕ್ಕು ಹೇಳಿ ಕಾಣ್ತು. ಹವ್ಯಕ ಮಹಾಸಭೆ ಆಗಲಿ, ಹವ್ಯಕ ಮಠಂಗೊ ಆಗಲಿ ನಮ್ಮ ಬಾಶೆಯ ಅಭಿವೃದ್ಧಿಗೆ ಇನ್ನಷ್ಟು ಉತ್ತೇಜನ ಕೊಡೆಕ್ಕಾದ, ಆ ದಿಕ್ಕಿಲಿ ಹೆಚ್ಚು ಜಬೋದಾರಿ ತೆಕ್ಕೊಳೆಕ್ಕಾದ ಅಗತ್ಯ ಇದ್ದು. ಎಂತಗೆ ಹೇಳಿರೆ ಹವ್ಯಕ ಸಮಾಜ–ಸಂಸ್ಕೃತಿ ಒಳಿಯಕ್ಕಾದರೆ ಬಾಶೆ ಒಳಿಯಕ್ಕಾದ್ದು ಅನಿವಾರ್ಯ. 'ಹವ್ಯಕ' ಪತ್ರಿಕೆ ಪೂರ್ತಿಯಾಗಿ ಹವಿಗನ್ನಡಲ್ಲಿ ಬಾರದಿದ್ದರೆ ಬೇಡ, ಅರೆವಾಶಿಯಾದರೂ ನಮ್ಮ ಬಾಶೆಲಿಯೇ ವ್ಯವಹಾರ ಮಾಡುವ ಹಾಂಗೆ ಆಯೆಕ್ಕು. ಇದಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿಂದಾಗಿ ವಿಶೇಷ ತೊಂದರೆ ಕಂಡಿತಾ ಆಗ – ಎಲ್ಲ ಪ್ರದೇಶಂಗೊಕ್ಕೂ ಅವಕಾಶ ಸಿಕ್ಕುವ ಹಾಂಗೆ ನೋಡಿಕೊಂಡರೆ ಆತು. ಸೀಮಾ ಸಮಿತಿಗಳ ಸಭೆಗಳುದೆ ನಮ್ಮ ಬಾಶೆಲೇ ನಡೆಯಲಿ. ಜಾಗತೀಕರಣ, ದೇಶೀ ಸಂಸ್ಕೃತಿಗಳ ಮೇಲೆ ದಾಳಿ ಮಾಡುವ ಅಪಾಯಂಗಳ ಬಗ್ಗೆ ನಾವು ಎಚ್ಚರಿಕೆಲಿ ಇದ್ದಷ್ಟೂ ಹವಿಗನ್ನಡವ ಒಳ್ಶೆಕ್ಕಾದ ಅಗತ್ಯವೂ ಗೊಂತಾವ್ತು; ಅದಕ್ಕೆ ದಾರಿಗಳೂ ಕಾಣ್ತು.

✤ ✤ ✤



ಪರಮೇಶ್ವರ ರಾಮಭಟ್ಟ ನಿವೃತ್ತ ಶಿಕ್ಷಕ
ವಸಂತ ನಿಲಯ, ಅಂಚೆ : ಕತಗಾಲ, ಕುಮಟಾ
ಉತ್ತರ ಕನ್ನಡ–581 444
ದೂರವಾಣಿ : 08386–264648
63 ವರ್ಷ. ಕೃಷಿಕ. ಪ್ರಕಟಿತ ಕೃತಿ : 1

ಹವಿಗನ್ನಡ ಕೃತಿ : 1. ಕಾಶೀಯಾತ್ರೆ. ನಾಟಕ. 2. ಲಗ್ನ ಆದ ಹಾಂಗೆಯಾ ನಾಟಕ. ಎರಡೂ ರಂಗಪ್ರಯೋಗ ಆಜು. ಆದರೆ ಇನ್ನೂ ಅಪ್ರಕಟಿತ.

❶ ಹ್ಯಾಸ್ಕೂಲಲ್ಲಿ ಶಿಕ್ಷಕ ಆಗಿಪ್ಪಾಗ ನಾಟಕ ಬರ್ದು ಹುಡುಗರ ಹತ್ರ ರಂಗಪ್ರಯೋಗ ಮಾಡ್ಸತ್ತಿದ್ದೆ. ಆಡೂ ಮಾತ್ನಲ್ಲೇ ಬರದ್ರೆ ಇನ್ನೂ ಭಲೋ ಆಗ್ತು ಹೇಳಿ ಕಂಡ್ತು. ಹಾಂಗಾಗಿ ಎರಡು ಹವಿಗನ್ನಡ ನಾಟ್ಕ ಬರ್ದೆ. ರಂಗದ ಮೇಲೆ ತುಂಬಾ ಯಶಸ್ವಿ ಆತು.

ನಾವು ನಮ್ಮ ಆಡುವ ಮಾತ್ನಲ್ಲೆ ಬರದಾಗ ಬರಹಕ್ಕೆ ವಂದ್ ತೂಕ ಬತ್ತು. ನಮ್ಮ ಹವಿಗನ್ನಡದ ರುಚಿ ಬೇರೆಯವಕೆ ಉಣಬಡಿಸಿದಾಂಗೆ ಆಗ್ತು. ನಾವೇ ನಮ್ಮ ಆಡುಮಾತ್ನ ಬಗ್ಗೆ ತಾತ್ಸಾರ ಮಾಡುಲಾಗ ಅದರಲ್ಲಿಪ್ಪ ವೈಶಿಷ್ಟ್ಯ ಪ್ರಚಾರ ಆಗೋ ಹೇಳ್ವಂತಾ ಒಳಮನಸ್ಸಿನ ತುಡಿತ ಎನಗೆ ಹವಿಗನ್ನಡ್ದಲ್ಲಿ ಬರೂಲೆ ಪ್ರೇರಣೆ ನೀಡ್ತು.

ಈಗ ಹವಿಗನ್ನಡ್ದಲ್ಲಿ ಬರೂದ ಬಿಟ್ಟಿದ್ದೆ. ಮುಖ್ಯ ಕಾರಣ ಅಂದ್ರೆ ಪ್ರಕಟ ಮಾಡ್ದ್ರೆ ಖರೀದಿ ಮಾಡಿ ಓದಿ ಪ್ರೋತ್ಸಾಹ ಕೊಡ್ವೋರಿಲ್ಲೆ. ಪುಕ್ಕಟ್ ಕೊಟ್ರೆ ತೆಕಂಡೋಪೋರಿದ್ದೊ. ಎರಡ್ನೇದಾಗಿ ಈಗಿತ್ಲಾಗಿ ನನ್ನ ಆರೋಗ್ಯಾನೂ ಭಲೋ ಇಲ್ಲೆ. 4 ಕಿ.ಮೀ. ದೂರ್ದಲ್ಲಿದ್ದ ತೋಟ ನೋಡ್ಕಳೋ. ನಂತರ ಮನೆಲಿ ಗಂಡ–ಹೆಂಡತಿ ಇಬ್ರೆಯಾ. ಸಂಸಾರ ತಾಪತ್ರಯ ಇತ್ಯಾದಿಯಿಂದ ಬರವಣಿಗೆ ಸ್ಥಗಿತ ಆತು.

❷ ನಮ್ಮ ಬಿಮ್ಮು – ಬಿಗುಮಾನ ಬಿಟ್ಟು ಹವ್ಯಕರು ಪರಸ್ಪರ ಭೆಟ್ಟಿಯಾದಾಗ ಸಮಾಜದ ಮಧ್ಯೆ ನಮ್ಮ ಭಾಷೆಲೇ ಮಾತಾಡೋ. ನಮ್ಮ ಸಭೆ ಸಮ್ಮೇಲನದಲ್ಲಿ ನಮ್ಮ ಭಾಷೆ ಕಟ್ಟು ನಿಟ್ಟಾಗಿ ಬಳಕೆಯಾಗೊ. ಮನೆಗೆ ಹೆಸರಿಡಕಾದ್ರೆ ನಮ್ಮ ಭಾಷೆಲೆ ಇಡೊ. ಉದಾ : 'ನಾರಾಯಣ ಜೋಯಿಸರು' ಬದ್ಲಿಗೆ 'ನಾರಣ ಜೋಯ್ಸರು'. ನಮ್ಮ ಹವ್ಯಕ ಕಾರ್ಯಕ್ರಮದ ಕರಪತ್ರ, ಪ್ರಕಟಣೆ ನಮ್ಮ ಆಡುನುಡಿಲೆ ಇರೊ. ನಮ್ಮ ಭಾಷೆ ಪ್ರಚಾರಕ್ಕೆ ಸಮಾಜ, ಸಂಘ, ಸಂಸ್ಥೆ ಮಠ ಎಲ್ಲೋರೂ ಪ್ರಯತ್ನ ಮಾಡೊ. ಸಾಹಿತ್ಯ ಪ್ರಕಟನೆಗೂ ಮುಂದಾಗೊ.

✤ ✤ ✤

ಅಧ್ಯಾಯ - 3

''ಹವ್ಯಕ'' ಮಾಸಪತ್ರಿಕೆ ಜಾಗ್ರತ ಓದುಗರ ಅಭಿಪ್ರಾಯ

''ಹವ್ಯಕ'' ಪತ್ರಿಕೆ ಅಗಸ್ಟ 2006ರ ಸಂಚಿಕೆಲಿ ಅಭಿಪ್ರಾಯ ಸಂಗ್ರಹಕ್ಕೆ ಹೇಳಿ ಒಂದು ಪ್ರಶ್ನೆ ಕೇಳಾಗಿತ್ತು.
''ಹವಿಗನ್ನಡ ಉಳ್ಸಿ ಬೆಳೆಸ್ಲೆ ಹವ್ಯಕರು ಏನ್ಮಾಡೋ?''
ಇದಕ್ಕೆ ಬಂದ ಅಭಿಪ್ರಾಯ / ಉತ್ತರ ಈ ಕೆಳಗಿನಂಗೆ ಇದ್ದು.

ಕೆ. ನರಸಿಂಹ ಭಟ್ಟ (ನಭ ಏತಡ್ಕ)
ನರಹರಿ ನಿಲಯ ಅಂಚೆ ಏತಡ್ಕ, ಕಾಸರಗೋಡು –671 551

ಹವ್ಯಕರು ಪರಸ್ಪರ ಹವಿಗನ್ನಡಲ್ಲಿ ಮಾತಾಡೆಕ್ಕು. ಎಂಗಳ ಊರಲ್ಲಿ ಕೆಲವು ಜೆನ (ಹೆಚ್ಚಾಗಿ ಬೇರೆ ಬೇರೆ ಊರಲ್ಲಿಪ್ಪವು) ಮಲೆಯಾಳ ಭಾಷೆಲಿ ಮಾತಾಡುವುದು ಕಾಣುತ್ತು, ಬೇರೆ ಕೆಲವುದಿಕ್ಕೆ ಮನೆಲಿ ಅಬ್ಬೆ, ಅಪ್ಪ, ಮಕ್ಕಳ ಹತ್ತರೆ ಇಂಗ್ಲೀಷಿನಲ್ಲಿ ಮಾತಾಡುತ್ತವು. ಇದು ಸರಿ ಕಾಣುತ್ತಿಲ್ಲೆ. ಹವ್ಯಕರೇ ಇಪ್ಪ ಸಭೆ, ಸಮಾರಂಭ, ಜೆಂಬ್ರಂಗಳಲ್ಲಿ ಹವಿಗನ್ನಡಲ್ಲೇ ಮಾತಾಡೆಕ್ಕು. ಹವ್ಯಕ ಬಂಧು, ಮಿತ್ರರಿಂಗೆ ಕಾಗದ ಬರವಗ ಹವಿಗನ್ನಡಲ್ಲಿಯೇ ಬರೆಕು. ಹವ್ಯಕ ಸಾಹಿತಿಗೊ ಹವಿಗನ್ನಡಲ್ಲಿಯೂ ಗರಿಷ್ಠ ಸಾಹಿತ್ಯ ರಚನೆ ಮಾಡೆಕ್ಕು. ಆನು ಭಾಗವಹಿಸುವ ಬೇರೆ ಬೇರೆ ಕವಿ ಗೋಷ್ಠಿಲಿ ಹವಿಗನ್ನಡಲ್ಲಿ ಚುಟುಕು, ಕವನಂಗಳ ಓದುತ್ತಾ ಇದ್ದೆ. ಹಾಂಗೆ ಹವಿಗನ್ನಡಕ್ಕೆ ವ್ಯಾಪಕ ಪ್ರಚಾರ ಕೊಡ್ತಾ ಇದ್ದೆ. ಇಲ್ದಿದ್ರೆ ಹವಿಗನ್ನಡ ಶಬ್ದಂಗಳೇ ಮರದುಹೋಕು. ಹವ್ಯಕರೆಲ್ಲಾ ಒಗ್ಗಟ್ಟಿಂದ ಪ್ರಯತ್ನ ಮಾಡಿರೆ ಹವಿಗನ್ನಡ ಒಳುಶಿ ಬೆಳಶುಲೆ ಖಂಡಿತಾ ಸಾಧ್ಯ ಇದ್ದು.

✤ ✤ ✤

ಕಾಂಚನಾ ಕರ್ಕಿ
ನಂ. 166, 18ನೇ ಅಡ್ಡರಸ್ತೆ, ಎಂ.ಸಿ. ಲೇಔಟ್ ವಿಜಯನಗರ,
ಬೆಂಗಳೂರು–560 040

"ಹವಿಗನ್ನಡ ಚಿರಾಯುವಾಗಲಿ"

ಇಂದಿನ ಮಟ್ಟಿಗೆ ಹೇಳೊ ಅಂದ್ರೆ ಕುಂಬಾರನ ಮಡಿಕೆಯ ಸ್ಥಿತಿನೇ ನಂಗ್ಳ ಹವಿಗನ್ನಡಕ್ಕೆ ಬಂದ್‌ದು. ಈ ಭಾಷೆಯ ಜನ್ಮ ಅದ್ ಬೆಳೆದ ರೀತಿ, ಇದ್ಕೆಲ್ಲಾ ತಕಂಡ ಸಮಯ – ಇವೆಲ್ಲಾ ನಿಗೂಢ ಮತ್ತೆ ಆಶ್ಚರ್ಯ ವಿಷಯವೂ ಹೌದು. ಇದು, ನಂಗ್ಳ ಹಳಬ್ರು ನಂಗೊಕ್ಕೊಟ್ಟ ದೊಡ್ಡ ಆಸ್ತಿನೇ ಸರಿ. ನವನಾಗರಿಕತೆಯ ಪ್ರವಾಹದಲ್ಲಿ ಕೊಚ್ಕಂಡ್ ಹೋಗ್ತಾ ಇಪ್ಪ ಈ ಸವಿಯಾದ ಹವಿಗನ್ನಡ ಉಳಸ್ಕಂಬ ಜವಾಬ್ದಾರಿ ಪ್ರತಿಯೊಬ್ಬ ಹವ್ಯಕಂದೂವಾ. ನಂಗಳ್ ಭಾಷೆ, ಸಂಸ್ಕೃತಿಯನ್ನು ಉಳಸ್ಕಳಗಿದ್ರೆ, ಅದು ನಂಗ್ಳ ಕೊನೆನೇ ಅಲ್ದಾ?

ಈ ಹಾದಿಯಲ್ಲಿ ಪಾಲಕರಾದ ನಂಗ್ಳ ಪಾತ್ರ ಬಲು ಮುಖ್ಯ ಹೇಳನ್ಸ್ತ. ಪ್ರತ್ಯೇಕ ಲಿಪಿ ಇಲ್ಲಗಿದ್ದ ಈ (ಜನಪದ) ಭಾಷೆಯನ್ನ ಮುಂದಿನ ಜನಾಂಗಕ್ಕೆ ತಕ್ಕಂಡು ಮುಟ್ಟಿಸಲು ಪಾಲಕರು ಮತ್ತೆ ಮನೆಯ ಹಿರಿಯರಿಂದ್ಲೇ ಸಾಧ್ಯ ಅಪ್ಪದು. ಈ ಕಂಪ್ಯೂಟರ್ ಯುಗದಲ್ಲಿ ಪರಭಾಷೆಯ ದಾಸರಿಗೆ ಏನೂ ಕಮ್ಮಿ ಇಲ್ಲೆ. ಅದನ್ನು ನೋಡ್ಕಂಡು ಪ್ರೋತ್ಸಾಹಿಸುವ ("ನಂಗ್ಳ ಮಕ್ಳೊಗೆ ಹವಿಗನ್ನಡ ಬತ್ತೇ ಇಲ್ಲೆ. ಮುಂತಾಗಿ) ಪಾಲಕರೇನೂ ಕಡ್ಮೆ ಸಂಖೆಲಿಲ್ಲೆ. ನೂರ್ ಭಾಷೆ ಕಲು ಸಾಮರ್ಥ್ಯ ನಂಗ್ಳ ಮಕ್ಕಳಲ್ಲಿ ಇರಕಾದ್ರೆ ಹವಿಗನ್ನಡ ಕಲುದು ಅದ್ಯೆಂತಕೆ ಅಷ್ಟ ಕಷ್ಟ? 'ಹವಿಗನ್ನಡದಲ್ ಮಾತಾಡ್ರೆ ವ್ಯಾವಹಾರಿಕ ಭಾಷೆಗೆ ಹೊಂದ್ಕಂಬ್ಲಾಗ್ತಿಲ್ಲೆ' ಎಂಬ ತಪ್ ಕಲ್ಪನೆ ನಂಗೊಕ್ ಬೇಡ.

ಮನೆಯ ಗೋಡೆಗಳ ಮಧ್ಯ ಹವಿಗನ್ನಡ್ದಲ್ಲಿ (ಮಕ್ಕಳು / ಸದಸ್ಯರ ಹತ್ರ) ವ್ಯವಹರ್ಸ್ರೊ. ನಂಗೊ ಹೆರಂಗೆ (ಜನ ಮಧ್ಯದಲ್ಲಿ) ಬಂದ್ರೂಡ್ಲೆ ಪರಭಾಷೆ ಬಳಸ್ರೊ(ಬಹುತೇಕ). ಚುರುಕು ಗೃಹಣಾ ಶಕ್ತಿ ಇಪ್ಪ ನಂಗ್ಳ ಮಕ್ಕಲ್ಲಿ ನಂಗೊನೇ ಕೈಯಾರೆ ನೆಡುವ ಭಾಷಾ ಕೀಳರಿಮೆಯ ಬೀಜ ಇದು. ಸಹಜವಾಗೇ ನಂಗ್ಳ ಯುವ ಪೀಳಿಗೆಯಲ್ಲಿ ಹೆಮ್ಮರವಾಗಿ ಬೆಳೆತು ಮತ್ತು ಬೆಳೆತಾನೂ ಇದ್ದು. ಸಾವಿರ ಜನ ಮಧ್ಯವೂ ನಂಗ್ಳ ಮಾತು–ಕತೆ ಹವಿಗನ್ನಡದಲ್ಲೇ ಆದ್ರೆ ಅದ್ಯೆಷ್ಟು ಆತ್ಮೀಯ ಹಾಗೂ ಅಭಿಮಾನವರ್ಧಕ!

ಇನ್ನು ಈ ವೈಜ್ಞಾನಿಕ ಯುಗ್ದಲ್ಲಿ ಪರರ ಸೊತ್ತಾಗ್ತೆ ಇಪ್ಪ ನಂಗ್ಳ ಯುವ ಜನರಲ್ಲಿ ನಂಗ್ಳ ಪ್ರಜ್ಞಾವಂತ ಹವ್ಯಕ ಸಮಾಜ ಮೂಡ್ಸುವ ಭಾಷೆಯ ಅಭಿಮಾನ, ಸಂಸ್ಕೃತಿ ಬಗ್ಗೆ ಕಾಳಜಿ–ಇವೇ ಈ ಯುವ ಶಕ್ತಿಯನ್ನ ಹವ್ಯಕಶಕ್ತಿಯನ್ನಾಗಿ ಬೆಳೆಸುವ ಅಸ್ತ್ರ ಆಗ್ತು

✤ ✤ ✤

ಅರವಿಂದ ಗಣೇಶ ಕೊಡ್ಲಕೆರೆ
ಬಿಲ್ವ ಕಾಲನಿ ಮನೆ ನಂ. ಡಿ–32, ಸೋಲಾರಿಸ್ ಕೆಮ್‌ಟೆಕ್ ಲಿಮಿಟೆಡ್
ಬಿಣಗಾ, ಕಾರವಾರ ಉತ್ತರ ಕನ್ನಡ – 581 307

ಹವ್ಯಕರಾದ ನಂಗ್ಳು ಇಂಗ್ಲೀಷ ಭಾಷೆದಾಗ್ಲಿ ಕನ್ನಡ ವ್ಯವಹಾರಿಕ ಭಾಷೆದಾಗ್ಲಿ ವ್ಯಾಮೋಹ, ಆಡಂಬ್ರ ತೋರ್ಸ್ದೆ ಹವ್ಯಕರ ಸಂಗ್ಡ ಎಂಗವು ಮಾತಾಡ್ವಾಗ ಹವಿಗನ್ನಡದಲ್ಲೇ ಮಾತಾಡೋ. ನಮ್ಮಕ್ಳು ಹಳ್ಳೀಲಿರ್ಲಿ, ಪಟ್ಣದಲ್ಲಿರ್ಲಿ, ಮಕ್ಳ ಸಂಗ್ಡ ಎಂಗವು ಹವ್ಯಕ ಮಾತೇ ಆಡೋ, ಮತ್ತೆ ಮಕ್ಳಿಗೂ ಅವ್ರು ಸಣ್ಣೋವ್ರಿರುವಾಗಿಂದ್ಲೂ ಹವಿಗನ್ನಡ್ದಲ್ಲಿ ಮಾತಾಡೂದೇ ರೂಢಿ ಮಾಡ್ಸೋ. ಹವ್ಯಕ್ರು - ಹವ್ಯಕ್ರ ಸಂಗ್ಡ ಮಾತಾಡ್ವಾಗ ಆ ವೇಳೇಲಿ ಬೇರೆಯೋರಿದ್ರೂ, ಎಂಗೋ ಭಿಡ್ಯಾ, ದಾಕ್ಷಿಣ್ಯಾ ಮಾಡ್ಕಳ್ದೇ ನಂಭಾಷೇಲೇ ಮಾತಾಡೋ.

ಹವ್ಯಕ್ರ ಸಸ್ಯಾಹಾರಿ ಊಟ, ಅಡ್ಗೆ ಇವತ್ತು ಜಗತ್ಗೇ ಆದರ್ಶ ಆದ್ಹಾಂಗೆ ಎಂಗ್ಳ ಸುಮಧುರ, ಸುಶ್ರಾವ್ಯ ಮತ್ತೆ ತಿಳಿ ಹಾಸ್ಯ ತುಂಬಿರೋ ಮನೆ ಮಾತು ಹವಿಗನ್ನಡ. ಹವ್ಯಕ ಕಾರ್ಯಕ್ರಮ, ಕಾರ್ಯಕಟ್ಟೆ, ಸಮಾರಂಭ, ನಾಟಕ, ಚರ್ಚಾ ಸ್ಪರ್ಧೆ, ನಿಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ ಇಟ್ಕಂಡು, ಹವಿಗನ್ನಡ್ದಲ್ಲೇ ನಡ್ಸಿದ್ರೆ ಅದ್ನ ಉಳಿಸಿ ಬೆಳ್ಸೋಲೆ ಆಗ್ತು ಮತ್ತೆ ನಂಭಾಷೆ ಜನಾದರಣೀಯನೂ ಆಗ್ತು. ಎಂಗೋ ಹವ್ಯಕ್ರು ಪ್ರತಿಯೊಬ್ರೂ ಹೀಂಗೆ ಸಂಕಲ್ಪ ಮಾಡ್ಕಂಡ್ರೆ, ಮತ್ತೆ ಅದ್ನ ಪಾರಾಯಣ್ದ ಹಾಂಗೆ ನಡೆಸ್ಪ್ರೆ ನಮ್ಮ ಹವಿಗನ್ನಡ ಭಾಷೆನಾ ಉಳ್ಸಿ-ಬೆಳ್ಸೂಲೆ ಕಷ್ಟ ಆಗ್ತಿಲ್ಲೆ.

✤ ✤ ✤

ಎಸ್.ಜಿ. ರಾಮಚಂದ್ರ
ಸಂಪ , ಅರಳಗೋಡು, ಸಾಗರ, ಶಿವಮೊಗ್ಗ – 577421
ದೂರವಾಣಿ : 08186–243063

'ಗಾದೆ ವೇದಕ್ ಸಮ' ಅಂತ ನಮ್ಮಲ್ಲೊಂದ್ ಗಾದೆ ಹೇಳ್ತ, ವೇದದ ಸಾರ ಸಂಗ್ರಹವೇ ಗಾದೆ ತಿಳ್ರ್ಕು ಅಂತ ಜನ ನಂಬಿದ್ರಿಂದ ಗಾದೆ ವೇದಕ್ ಸಮಸ್ಥಾನ. ಅದೇ ಗಾದೆ ಇನ್ನೊಂದ್ ಹೇಳ್ತು ಕೇಳಿದ್ರಾ? 'ನೀರಾದ್ರೂ ಮಜ್ಗಿ–ಮಳ್ ಆದ್ರೂ–ತಾಯಿ' ಅಂತ. ಮಜ್ಗೆ ನೀರಾಗಿದ್ರೂ ಅದ್ರೊಳ್ಗಿನ್ ಸತ್ವ ಮಾತ್ರ ನೀರಲ್ಲ, ತಾಯ್ ಮಳ್ ಆದ್ರೂ, ಆ ತಾಯ್‌ತನ – ಅಂತಃಕರಣ, ಅನೈಚ್ಛಿಕ ಮಮಕಾರ, ಹೊಟ್ಟೆಕಳ್ಳು ಮಳ್ಳಲ್ಲಾ ಅಂತ. ನಮ್ ತಾಯಿ ಹ್ಯಂಗೇ ಇದ್ರೂ ಅವ್ಳೇ ನಮ್ ತಾಯಿ. ಹ್ಯಂಗೇ ಇರ್ಲಿ ಅವ್ಳಿಗೇ ಅಮ್ಮ ಹೇಳದ್ ಅಲ್ದಾ? ಅಮ್ಮಂಗ್ ಅಮ್ಮ ಹೇಳದ್ಕೆ ದಾಕ್ಷಿಣ್ಯಯಂತಕೇ ಅಂತ. ನಮ್ ಭಾಷೆ-ಮಾತಿಗೂ ಇದೇ ರಿವಾಜು ಅನ್ವಯಿಸ್ತಿಲ್ಯಾ? ವಿಚಾರ ಮಾಡಿದ್ರೆ ಗೊತ್ತಾಗ್ತು ಅದ್ರೊಳ್ಗಿನ್ ಅರ್ಥ ಅದ್ರೊಳ್ಗೇ ಇದ್ದು ಅಂತ. ನಾವ್–ನಾವ್ ಎಲ್ಲೇ ಶೇರ್ಲಿ–ಅಲ್ ಯಾರೇ ಇರ್ಲಿ ನಾವ್ ನಮ್ಮಂತ್ಲೇ ಇರಕು–ಮಾತಾಡಕು. ನಮ್ ಊರೊಳ್ಗಿನ ಇತ್ರೇರು–ಹೊರಗಿನ ಜನಸಹ ನಮ್ಮನೆ ಹುಡ್ಸ್ರು ಹತ್ರ ನಮ್ ಮಾತ್ನೇ ಆಡ್ತ ಹೇಳದ್ನೂ ನಾವ್ ಗಮನ್ಸಕು. ನಾಲ್ಗೆ ತಿರ್ಗ್ದೇ ಇದ್ದವ್ರೂ ನಮ್ ಮಾತಾಡ್ತ ಅಂತಂದಾಗ ನಮ್ಗ್ಯಾಕ್ ದಾಕ್ಷಿಣ್ಯ? ಈಗಿತ್ಲಾಗೆ ಪ್ಯಾಟೇ–ಪಟ್ಣ ತಿರ್ಗದ್ರಿಂದ–ಕಾಲೇಜ್, ಗೀಲೇಜ್ ಓದದ್ರಿಂದ, ಇದೇ ಈಗಣ್ ಫ್ಯಾಶನ್ ಆಗ್ತು ಅಂದ್ರೆ ನಾವ್ ಬರೀ ಗೊಡ್ ಜನ–ನಮ್ಗೆ ಈ ಹೊಸ್ತರಾ ಎಲ್ಲಾ ಗೊತ್ತಿಲ್ಲೆ ಅಂತ ಮನ್ಸ್ನಾಗೇ ಹೇಳ್ತ ಮನ್ಸಲ್ಲೇ ಕುಸ್ದ್ ಹೋಕ್ತಾ ಹೊಸಾನಾಗ್ರೀಕತೆ ದೃಷ್ಟೀಲಿ ಹಿಂದ್ಬಿದ್ದರೇ ಆಗಿರ್ತ, ಏಳ್ಗೇ ಆಗ್ತ್ವಿಲ್ಲೆ.

ಹಳ್ಳಿ ಮನೇಲೇ ಇದ್ದು ಹೇಳಿ, ಈಗೇನ್ ಹೊರ್ಗಿನ್ ಪ್ರಪಂಚ್ದ ಸಂಪರ್ಕ ಇಲ್ದೇ ಇರ್ತ ಅಂತಲ್ಲ, ಟಿವಿ– ಫೋನು–ಮೊಬೈಲ್ – ಸಿಡಿ ಪ್ಲೇಯರ್ರೂ ಅದೂ –ಇದೂ ಅಂತ ಹೆಚ್ ಪಕ್ಷ ಎಲ್ಲಾ ಕಡೀಗಿರ್ತು. ಹಿಂಗಿದ್ರೂ ನಮ್ ಮಾತಿನ್– ಭಾಷೇ ಬಗ್ಗೆ ಅದ್ರ ಅಭಿವೃದ್ಧಿ ಬಗ್ಗೆ ವಿಚಾರಾ ಮಾಡೋರೂಢೀ ಭಾಳ ಕಡ್ಮೆ

✣ ✣ ✣

ನಂ ಭಾಷೇ ಬಗ್ಗೆ - ಮಾತಿನ್ ಬಗ್ಗೆ ನಮ್ಗೇ ಒಂಥರಾ ಅಸಡ್ಡೆ - ತಪ್ಪು ಕಲ್ಪನಾಭಾವನೆ ಇಪ್ಪು. ಚಿಂತನೆ ಮಾಡ್ತಾ ಹೋದ್ರೆ ನಂ ಭಾಷೆ ವಳ್ಗೆ ಹಳೆಗನ್ನಡ ಸಂಸ್ಕೃತ – ಹಿಂದಿ – ತುಳು ಭಾಷೆಯ ಎಷ್ಟೆಷ್ಟೋ ವಿರಳ ಶಬ್ದ ಸೇರಿದ್ದು ಮತ್ತೆ ಉಳಿದ್ ಭಾಷೆಯಷ್ಟೇ ಪುರಾತನದ್ದು ಅಂತ್ ಹೇಳ್ಲಕ್ಕು. ಅಂಥಾ ಚಿಂತನೆ ಮಾಡ್ದೆ ನಂ ಮಾತ್ ಯಾರಾದ್ರೂ ಕೇಳಿದ್ರ್ಯ ನಗ್ತ್ವೇನ ಅಂತ ತಿಳ್ಕಂಡು ಈಗಣ್ ನಾಜ್ಯೂಕಿನ ಕನ್ನಡ್ ಭಾಷೆ ಶುರು ಮಾಡ್ತ. ಸಿಂಹದ್‌ಮರಿ ತಾನು ಬೆಕ್ಕಿನ್ಮರಿ ಅಂತ ತಿಳ್ಕಂಡ್ಹಂಗೆ. ತನ್ ಪ್ರಾಣ ತನ್ಗೇಗೋಚ್ರ ಇಲ್ದೆ ಇದ್ ಹನ್ಮಂತ್ನ ಹಂಗಾಯ್ದು. ಅದ್ನ ಮತ್ತೊಬ್ರ್ಯ ತಿಳ್ಸ್ ಹೇಳಿ ಏರ್ಬೆಂಡ್ ಹಾಕಕಾಯ್ದು.

ನಾವ್-ನಾವ್ ಎಲ್ಲೇ ಒಟ್ಟಾಗ್ಲಿ - ಗ್ರಾಮ್ದ ದೇವಸ್ತಾನದ ಮೀಟಿಂಗು, ನಮ್ಮೋರೇ ಇಪ್ಪಂಥ ಸಬೇಲಿ ವಿಚಾರ - ವಿಮರ್ಶೆ, ಪತ್ರ ವ್ಯವಹಾರ ಎಲ್ಲಾ ನಂ ಶೈಲೀಲೇ ಆಚರ್ಣೇಲಿ ಬಂದ್ರೆ, ಅಷ್ಟಷ್ಟೇ ಭಾಷೆ ಬೆಳ್ಸಲ್ ಆಗ್ತು. ನಮ್‌ದೇ ಆದ್ ಸಂಗಟ್ನೆಲಿ ಇದ್ದಂಥ ಶ್ರದ್ಧಾಕೇಂದ್ರದ ವಾರ್ಷಿಕೋತ್ಸವ - ವಾರ್ಷಿಕ ಸಭೆ ಇಂಥಾದ್ರಲ್ಲೆಲ್ಲಾ ವಾರ್ಷಿಕ ವರ್ದಿವಾಚನ, ಚರ್ಚೆ, ವಿಮರ್ಶೆ ಇವೆಲ್ಲಾ ನಂ ಹವಿಗನ್ನಡ್ದಲ್ಲೇ ಇಪ್ಪ ರೂಢಿಗ್ ಬಂದ್ರೆ, ಚಂದ.

ಆಡದ್ ಸುಲ್ಬಾದ್ರೂ ನಂ ಭಾಷೆ ಬರ್ಯದ್ ಸುಲ್ಬಲ್ಲ. ಬರ್ಯಲೆ – ಓದಲೆ ಬಂದ್ರೆ ಆಚರ್ಣೆ ಸುಲ್ಬ. ಬರ್ಯದಾಗ್ಲೀ, ಓದುವ್ದಾಗ್ಲೀ ಆಸಕ್ತಿ ಬೇಕಲ್ದಾ? ಅದಿದ್ದರೆಷ್ಟ್ ಜನ? ನಂ ಭಾಷೆ ಆಡದ್ಕೆ ರೂಢಿ ಇದ್ದವ್ಕೆ 'ಸುಲಿದ ಬಾಳೆಯ ಹಣ್ಣು' ಬರ್ಯದ್ಕಲ್ಲ ಅಲ್ದ? ಮಾತಿಗ್ ಹೇಳದಾದ್ರೆ - ಲಗ್ನ್‌ಪತ್ರಾನೂ ನಂ ಮಾತ್ನಲ್ಲೇ ಬರೀಲಕ್ಕು. ಆದ್ರೆ ಬರೀ ನಮ್ಮೋರಿಗೆ ಮಾತ್ರ ಕಳ್ಸದಲ್ಲ ಹೇಳಿ ಈ ಗಣ್ ಹೊಸ್ಕನ್ನಡ್ದ ಬಳ್ಕೆ, ಅಷ್ಟೆ. ನಮ್ಮೋರಿಗ್ ಬರ್ಯ ಪತ್ರ - ಗಿತ್ರ ಎಲ್ಲ ನಂ ಮಾತ್ನಲ್ಲೇ ಬರೀಕ್ಕು. ಆಗ ಅದೇ ರೂಢಿ ಆಗ್ತು.

ನಂ ಮಾತ್ ನಾವ್ ಆಡಿದ್ರೆ ನಾವ್ ಸಣ್ಣರಾಗ್ತ್ವಿಲ್ಲೆ ಅಂತ ಧೈರ್ಯ ತಂದ್ಕಂಡ್ರೆ ದಾಕ್ಷಿಣ್ಯ ಶಿಗ್ಗು ಯಾವ್ದೂ ಆಗ್ತಿಲ್ಲೆ.

ಮದ್ಲೆಲ್ಲಾ ಅಜ್ಜಿ ಅಮ್ಮಂಗೆ, ಅಮ್ಮ ಮಗ್ಳಿಗೆ ಬಾಯಿಂದ್ ಬಾಯಿಗೆ ಹಾಡುಹಸೆಯಲ್ಲಾ ಹೇಳಿ ಕಲ್‌ಸ್ತಿದ್ದ. ಯಾವ್ದ್ರಲ್ಲಿ ಕೇಳ್ತಾ? ನಂ ಭಾಷೇ ಮಾತ್ನಲ್ಲೇ!

ಗೋಪೂಜೆ ಹಾಡು, ಭೂಪೂಜೆ ಹಾಡು; ಅರಿಶ್ನೆಣ್ಣೆಹಾಡು; ಮಗ್ಳ್ ಕಳ್ಸ ಹಾಡು; ಬ್ರಹ್ಮೋಪ್ದೇಶ್ದ ಹಾಡು ಹಿಂಗೇ ಪ್ರತಿ ವಿಶೇಷದ್ದೂ ಹವೀಕ್ ಸಾಹಿತ್ಯ! ಏನ್ ಹೇಳ್ತಿ! ಎಲ್ಲಾ ಆಚರ್ಣೇದೂ ನಂಭಾಷೇ ಸಾಹಿತ್ಯದ ಹಾಡು! ಕೆಲವ್ರಂತೂ ಹಾಡಿಂದೇ ಕಣ್ಣ ಅಂದ್ರೂ ಹೆಚ್ಚಲ್ಲ. ಹಿಂಗೆ ಬಾಯಿಂದ್ ಬಾಯ್ಗೇ ಪ್ರಸಾರ ಅಪ್ಪಂತಾ ಸಾಹಿತ್ಯ – ಹವೀಕ್ ಸಾಹಿತ್ಯ ಆಗಿತ್ತು. ಅದೇ ಈಗ ನೋಡೀ; ಎಲ್ಲಾ ಪುಸ್ತಕ್ದಲ್ಲೇ – ಮಸ್ತಕ್ದಲ್ಲೇನಿಲ್ಲೆ; ಎನ್ ಹೇಳದ್ದೂ ಪುಸ್ತಕ್ವೇ ಬೇಕು ಅಂಬ ಅಲ್ದನ್ರ? ಪುಸ್ತಕ್ದಲ್ಲಿಪ್ದು ನಂ ಭಾಷೆ ಮಾತೇ ಅಲ್ಲ. ಅದು ನಂ ಮನಸ್ಸಿಗ್ಹ್ಯಾಂಗ್ ತಟ್ತು? ಅಲ್ದ? ನಮ್ ಮಾತ್ನಲ್ಲೇ ಹಾಡು – ಪದ್ಯ ಎಲ್ಲಾ ರಚ್ನೆ ಮಾಡರ್ ಮಾಡಿದ್ರೆ – ಓದಲ್ ಬಂದ್ರೆ – ಕಲ್ತ್ರೆ ಅದೇ ನಂ ಭಾಷೇ ಸಾಹಿತ್ಯವೇ ಉಳ್ಕಂಬದಿದ್ರೆ ಈ ಹೊಸ್ಗನ್ನಡ್ದ ಅವ್ಲಂಬ್ನೆ ಇರ್ತಿತ್ತಾಹೇಳಿ? ಬಾಯಿಂದ್ ಬಾಯಿಗ್‌ಹರ್ದ್ ಬಂದ್ ಸಾಹಿತ್ಯನೆಲ್ಲ ಅಕ್ಷರಕ್ಕಿಳ್ಸಿದ್ರೆ ಹವೀಕ್ ಸಾಹಿತ್ಯ ಭಾಳಷ್ಟಿದ್ದು. ಯಾವರ್ಮಾಡ್ತ?

ಪಂಚಾಂಗ್ವೇ ಹಾಡ್ನಲ್ಲಿರ್ತಿತ್ತು "ಕಾರ್ತೀಕಾ ಶುದ್‌ಪಾಡ್ಯಽಽ। ವಿಽಶಾಖಾ ನಕ್ಷತ್ರಾಽಽ" ಹೀಂಗೇ ಆಯಾ ಪರ್ವಕಾಲದ ಪೂರ್ಣ ಮಾಹಿತಿಯ ನಿಘಂಟೇ ಆ ಹವೀಕ್ ಸಾಹಿತ್ಯವಾಗಿತ್ತು. ನಂ ಹವೀಕ್ಸ್ ಕವಿಗ್ಳೆಲ್ಲಾ ಇದ್ರ್ ವಿಚಾರ – ಚಿಂತನೆ ಮಾಡಿದ್ರೆ – ಹವೀಕ್ ಸಾಹಿತ್ಯನೇ ಕೃತಿಗಿಳ್ಸಿದ್ರೆ, ವೈದೀಕ್ರು ಮಂತ್ರಾಕ್ಷತೆ ಕಾಲ್ದಲ್ಲಿ ನಂ ಮಾತ್ನಲ್ಲೇ ಆಶೀರ್ವಾದ ಮಾಡಿದ್ರೆ, ತಾಯಿ ಸ್ಪರ್ಶ ಆದ್ ಕೂಡ್ಲೆ ಮಗು ಅಳು ನಿಲ್‌ಸ್ತಲ್ಲಾ ಹಂಗೇ ನಮ್ಮಂತ್ರಂಗ ತಟ್ಟೋ ಅಂಥ, ಹಿತಾನುಭವ ನಮ್ಗ್ ಆಗ್ತು. ಎಷ್ಟ್ ಆದ್ರೂ ನಂ ಮಾತು ನಮ್ಗ್ ಹಿತ ಅಲ್ದನ್ರಾ? ಈ ಹೊಸ್ಗನ್ನಡ ಅಂದ್ರೆ ಡಬ್ಬಲ್ – ರಬ್ಬರ್ ಪಾಲಿಶ್ ಆದ ಅಕ್ಕಿ ಅನ್ನ ಇದ್ದ್ಹಾಂಗೆ, ನೋಟಕ್ಕಂದ.

ಇದೇ ಈಗ್ ಕೆಲವು ತಿಂಗ್ಳ್ ಹಿಂದೆ ಈ ಟಿವಿ ವಾಹಿನಿಲಿ ಉತ್ರ್ ಕನ್ನಡ್ದ ಹವೀಕ್ ಭಾಷೇಲೀ "ಸವಿರುಚಿ"ಕಾರ್ಯಕ್ರಮ ಪ್ರಸಾರಾಗ್ತಿತ್ತು. ಎಷ್ಟ್ ಹಿತ ಆಗ್ತಿತ್ತು ಮಾಡಿದ್ರಿ. ನಿಜ್ವಾಗ್ಲೂ ನಾವೇ ಅವ್ರ್ ಮನೇಲಿದ್ದ್ಹಾಂಗ್ ಅನ್‌ಸ್ತಿತ್ತು ಅಷ್ಟ್ ಹಿತ. ಇದೇ ಪ್ರಯತ್ನನ ಪ್ರಚಾರ ಮಾಧ್ಯಮ್ದಲ್ಲಿ ಅಳ್ವಡ್ಸಿದ್ರೆ ಬೆಳ್ವಣ್ಗೆ ಆಪ್ದ್‌ಕೆ ಸಾಧ್ಯ ಅಂತ ಅನ್ಸುತ್ತ.

ಹೀಂಗೆ ಸಮೂಹ ಸಂಗಟ್ನೆ, ವಿಚಾರಗೋಷ್ಠಿ, ಪತ್ರಲೇಖನ,

ವಾರ್ಷಿಕವರ್ದಿ, ಪುರೋಹಿತ್ರ ಆಶೀರ್ವಾದ ಭಾಷಣ,ಸಂಪ್ರದಾಯ್ದ ಹಾಡು, ಯಕ್ಷಗಾನ ತಾಳಮದ್ದೆ, ಅರ್ಥ ಹೇಳದು. ಹಾಡು–ಹಸೆರಚ್ಚೆ, ಹೆಚ್ಚಾರ್ಗೆ, ಇಳ್ಕೆ, ಹನ್ಮಂತ್ನ ಹ್ಹಂಗೇ ನವ್ ತ್ರಾಣ ನಾವ್ ತಿಳ್ಕಂಡು ಸರಳವಾಗಿಪ್ ದ್ದ ರೂಢಿಗ್ಬಂದ್ರೆ ''ಹವಿಗನ್ನಡ ಉಳ್ಸಿ ಬೆಳ್ಸೂಲೆ'' ಖಂಡಿತಾ ಸಾಧ್ಯ ಅಂತ ಅಂತ್ರಂಗ ಹೇಳ್ತು

ನಂ ಸ್ಗಾರಾ, ನಮ್ಮನೀಗ್ ಬನ್ನಿ

''ಹರೇ ರಾಂ''

(ಟಿಪ್ಪಣಿ : ಶ್ರೀಯುತರು ಅವ್ರ ಮರಗುಡಿ ಸೀಮೇಲಿ ಬಳ್ಕೆಲಿದ್ದ 1700 ಹವಿಗನ್ನಡ ಶಬ್ದಗಳ್ನ ಅರ್ಥಸಹಿತ ಬರ್ದು ಕಳ್ಸಿದ್ರು. – ಸಂಪಾದಕ)

✣ ✣ ✣

ಎ.ಬಿ. ಹೊಸಮನೆ

ಸಂಪಾದಕರು, ''ಕಲಾದರ್ಶನ'' ಮಾಸಪತ್ರಿಕೆ, ''ಗುರುನಿಲಯ'' ಕೊಂಚಾಡಿ ಮಂಗಳೂರು. ದೂರವಾಣಿ : 0824–2217348

78 ವರ್ಷ ಪತ್ರಿಕೋದ್ಯಮಿ. ಸಾಹಿತಿ. 'ಕಲಾದರ್ಶನ' ಮಾಸಿಕ ಪತ್ರಿಕೆಲಿ ನಿರಂತರವಾಗಿ ಹವಿಗನ್ನಡ ಅಂಕಣ ಪ್ರಕಟಿಸಿದ್ರು. ಹಲವಾರು ಹವ್ಯಕರ ಕೃತಿಗಳ್ನ ''ಹವ್ಯಕ ಸಾಹಿತ್ಯ ಮಾಲೆ'' ಅಡಿ ಪ್ರಕಟಣೆ ಮಾಡಿದ್ರು.

ಹವಿಗನ್ನಡ ಭಾಷೆ ಒಳಿಯೆಕ್ಕಾದರೆ ಅದು ಮನೆ ಭಾಷೆ ಆಯೆಕ್ಕು. ಸಮಾಜದ ಭಾಷೆ ಆಯೆಕ್ಕು. ಮನೆಯೋರು 'ಆಂಗ್ಲಕ್ಕ'ನ ಬೀದಿಂದ ಎಳಕ್ಕೊಂಡು ಬಂದು 'ಅಟ್ಟುಂಬೊಳಾಣ' ಒಲೆಕಟ್ಟೆಲಿ ಮಡಗಿ ಮುದ್ದಾಗಿ ಸಾಕಿಕೊಂಡಿಪ್ಪಷ್ಟು ಕಾಲ ಹವಿಗನ್ನಡ ನಿಲ್ಲಲೇ ನಿಲ್ಲ. 'ಹವಿಗನ್ನಡ'ಕ್ಕನ ಒಳಿಶಿಗೊಳ್ಳೆಕ್ಕಾದರೆ ಮೊದಲು 'ಆಂಗ್ಲಕ್ಕ'ನ ಹೇರಮಾಡೆಕ್ಕು. ಹವಿಗನ್ನಡ ಭಾಷೆಗೆ ಆಂಗ್ಲದ 'ಬಂದಣಿಕೆ'ನ ಹೇರಮಾಡೆಕ್ಕು. ಹವಿಗನ್ನಡ ಭಾಷೆಗೆ ಆಂಗ್ಲದ 'ಬಂದಣಿಕೆ' ಬೆಳವಲೇ ಬಿಡುತ್ತಿಲ್ಲೆ. ಎಂಗಳ ಮನೆಗೆ ಬಂದು ಒಬ್ಬ ಲೆಕ್ಕದ ಮಾಸ್ಟ್ರ ಕೇಳುತ್ತ– 'ಇದ ಈ ಹುಡುಂಗಗೆ ಕನ್ನಡ ಪಾಠ ಆಯೆಕ್ಕು. ಆದರೆ ಅವಂಗೆ ಕನ್ನಡವ ಇಂಗ್ಲೀಷಿಲೇ ಪಾಠ ಮಾಡೆಕ್ಕು.'' ಈ ರೀತಿ ಮರುಳುಗೊಕ್ಕೆ ಎಂತ ಹೇಳೂದು? ಆತು ಹೇಳಿ

ಒಪ್ಪಿಗೊಂಬದು, ಕನ್ನಡದ ಬದಲಿಂಗೆ ಇಂಗ್ಲೀಷನ್ನೇ ಪಾಠ ಮಾಡಿ ತೃಪ್ತಿ ಪಡ್ಸಿ 'ಫೀಸು' ತೆಕ್ಕೊಂಬೋರೂ ಇದ್ದವು. ಹವಿಗನ್ನಡವ ತಿಂದು ತೇಗುವ ಆಂಗ್ಲಕ್ಕನ ಚರಿತ್ರೆ ದೊಡ್ಡದಿದ್ದು – ನವಗದು ಬೇಡ. ನಮ್ಮ ಭಾಷೆಲಿ ನಮ್ಮ ಸಂಸ್ಕೃತಿ ಇದ್ದು ಹೇಳಿ ತಿಳ್ಕಂಡೋರು ಹಾಂಗೆ ಮಾಡವು. ಮೊದಲು ಹವಿಗನ್ನಡ ಮನೆ ಇದು ಹೇಳಿ ಗುರುತು ಹಿಡಿಯುವಷ್ಟಾದರೂ ಆಯೆಕ್ಕು. ಅದಕ್ಕೆ ಆ ರೀತಿ ಸಾಧನೆ ಮಾಡುವ ಪರಿವಾರ ಹೆಚ್ಚೆಕ್ಕು. ಹೇಂಗೆ ಹೆಚ್ಚಿಸುವೊದು?

ಮೊದಲನೆಯದು : ಆನೆನ್ನ ಮನೆ ಪರಿಸರದಲ್ಲಿ ಹವಿಗನ್ನಡಲ್ಲೆ ವ್ಯವಹಾರ ಮಾಡುತ್ತೆ ಹೇಳಿ ಪ್ರತಿಜ್ಞಾ ಬದ್ಧನಾಯೆಕ್ಕು.

ಎರಡನೆಯದು : ಹವ್ಯಕರದ್ದೇ ಸಭೆ, ಸಮಾರಂಭಂಗೊ ಹವಿಗನ್ನಡಲ್ಲೇ ಆಯೆಕ್ಕು.

ಮೂರನೆಯದು : ಪುರೋಹಿತ ವರ್ಗವಾಗಲಿ, ಸಮಾಜ ಮುಖಂಡರಾಗಲಿ ಕಾರ್ಯಕ್ರಮ ಹವಿಗನ್ನಡಲ್ಲೇ ನಡೆಶೆಕ್ಕು.

ನಾಲ್ಕನೆಯದು : ಹವ್ಯಕರು ಸಭೆ ಸಮಾರಂಭಂಗಳ ಏರ್ಪಾಡು ಮಾಡಿ ಜನ ಮೆಚ್ಚೆಕ್ಕು ಹೇಳಿ ಹೆರ ಭಾಷೆಗಳಲ್ಲಿ ವ್ಯವಹಾರ ಮಾಡುವೊದರ ಬಿಡೆಕ್ಕು. ಇದು ಸಾರ್ವಜನಿಕ ರಂಗಲ್ಲಿಪ್ಪೋರಿಂಗೆ ಕಷ್ಟಸಾಧ್ಯ. ಆದರೂ ಪ್ರಯತ್ನ ನಡೆಯಕ್ಕು.

ಐದನೆಯದು : ಹವ್ಯಕ ಮಹಾಸಭೆ ಈವರೆಗೆ ನಡೆಶಿದ್ದ ಹವ್ಯಕ ಸಮ್ಮೇಲನ, ಹವ್ಯಕ ಸಾಹಿತ್ಯ ಸಮ್ಮೇಲನಂಗಳಲ್ಲಿ ಹವಿಗನ್ನಡಕ್ಕೆ ಸ್ಥಾನನೇ ಕೊಟ್ಟಿದವಿಲ್ಲೆ. ಮುಂದಾದ್ರೂ ಇಂಥಾ ಸಮ್ಮೇಲನಂಗಳಲ್ಲಿ ಹವಿಗನ್ನಡ ಉಪಯೋಗ್ಸೆಕ್ಕು. ಕಾರ್ಯಕಲಾಪ ನಡೆಶೆಕ್ಕು. ಹವಿಗನ್ನಡ ಸಾಹಿತ್ಯದ ಚರ್ಚೆನೂ ಆಗೆಕ್ಕು.

ಆರನೆಯದು : ಮಂಗಳೂರಿನ 'ಹವ್ಯಕ ವಾರ್ತೆ' ಪತ್ರಿಕೆಲಿ ಖಾಯಂ ಎರಡು ಪುಟ ಮತ್ತೆ ಹವ್ಯಕ ಮಹಾಸಭೆ 'ಹವ್ಯಕ' ಪತ್ರಿಕೆಲಿ ಖಾಯಮ್ಮಾಗಿ ನಾಲ್ಕೈದು ಪುಟ ಹವಿಗನ್ನಡ (ಎಲ್ಲಾ ಪ್ರದೇಶದ್ದೂ ಇರಲಿ) ಲೇಖನ ಬರೆಕ್ಕು.

ಏಳನೆಯದು : ಮಠ ಮಂದಿರಂಗಳ ಚಟುವಟಿಕೆ, ಪೌರೋಹಿತ್ಯದ ಕೆಲಸಂಗಳಲ್ಲಿ, ಶುಭ ಕೋರುವಲ್ಲಿ, ಆಶೀರ್ವಾದ ಮಾಡುವಲ್ಲಿ ಹವಿಗನ್ನಡವನ್ನೇ ಉಪಯೋಗ ಮಾಡುವೊದು ಅಗತ್ಯ. ಅದು ಹವ್ಯಕರದ್ದೇ ಆಗಿರುತ್ತಲ್ಲದೊ?

ಎಂಟನೆಯದು : ನಮ್ಮ ಗುರುಗಳ ಆಶೀರ್ವಚನ, ಪ್ರವಚನಾದಿಗೊ ಹವಿಗನ್ನಡ ಉಪದೇಶ ಆಶೀರ್ವಾದಂಗೂ ಆಗಿದ್ದರೆ ಒಳ್ಳೆದು. ಗುರುಗಳ ಶ್ರೀ ಮುಖದ ನುಡಿಗೊ ಶಿಷ್ಯರಿಂಗೆ ಹೃದಯಕ್ಕೆ ತಟ್ಟುವೊದು ಸಹಜ. ಮದುವೆ, ಉಪನಯನಾದಿಗಳಲ್ಲಿ ಹವಿಗನ್ನಡವನ್ನೆ ಮಾತಾಡುವ ಹಾಂಗೆ ಮಾಡೆಕ್ಕು. ಇದು ಸ್ವಾಭಿಮಾನದ ಪ್ರಶ್ನೆ.

ಇವೆಲ್ಲಾ ಸ್ವನಿಯಂತ್ರಣ ವಿಚಾರಂಗೊ. ನಮ್ಮ ಸಮೀಪವೇ ಇಪ್ಪ ಉಡುಪಿ ಮಠಂಗಳ ಸ್ವಾಮಿಗೊ ಆಶೀರ್ವಾದ ಮಾಡುವಾಗ, ಧಾರ್ಮಿಕ (ಶಿವಳ್ಳಿ) ಸಂಸ್ಕಾರಂಗಳಲ್ಲಿ ಶಿವಳ್ಳಿ ತುಳುವನ್ನೆ ವ್ಯವಹಾರದಲ್ಲಿ ಒಳಿಶಿಗೊಂಡದರ ನೋಡುಲಕ್ಕು. ಅನ್ಯಮತೀಯರು ಕೂಡಾ ಈ ಪರಿಪಾಡಿನ ಮಡಿಕ್ಕೊಂಡಿದವು. ಕೊಂಕಣಿಗರು, ಮುಸಲ್ಮಾನರು, ಇತರ ತುಳು ಅಥವಾ ಬೇರೆ ಭಾಷೆ ವ್ಯವಹರಿಸುವವು ಅವರವರ ಸಮಾಜದ ಧಾರ್ಮಿಕ ಕೆಲಸಂಗಳಲ್ಲಿ ಅವರವರದ್ದೇ ಭಾಷೆ ವ್ಯವಹಾರಲ್ಲಿ ಮಡಿಕ್ಕೊಳ್ಳುತ್ತವು. ಮುಸಲ್ಮಾನರು ಮಸೀದಿಲಿ ವ್ಯವಹರಿಸುವ ಭಾಷೆ ಅರಬ್ಬೀ ಭಾಷಾ ಪದಂಗಳ ಬಿಟ್ಟು ಬೇರೆದ್ದಕ್ಕೆ ಬತ್ತವ್ವೇ ಇಲ್ಲೆ. ದೈವ ನೇಮಂಗಳಲ್ಲಿ ದೈವ ಪಾತ್ರಿಗೊ ಮಾತಾಡುವ ಭಾಷೆ ಪಂಬಂದಂಗಳದ್ದೇ ಆದ ತುಳು ಭಾಷೆ. ಮಲಯಾಳೀ ದೈವವಾದರೆ ಅದರ ಭಾಷೆ ಕೂಡ ಮಾಲೆಯಾಳವೇ ಆಗಿರುತ್ತು, ದೈವಂಗೊ ಪ್ರಾದೇಶಿಕ ಭಾಷೆಲಿವುದೆ ವ್ಯವಹರಿಸುತ್ತವು. ಅವಕ್ಕೆ ಜನಪ್ರಿಯತೆ ಬೇಕು. ಇಷ್ಟೆಲ್ಲಾ ವಿಚಾರಂಗೊ ಹೊರ ಜಗತ್ತಿಲಿ ಇಪ್ಪಂಗ ಹವಿಗನ್ನಡ ಏಕೆ ಕಣ್ಮರೆ ಅಪ್ಪೊದು?

ಹವಿಗನ್ನಡಲ್ಲಿ ಮೊದಲು ಎದ್ದು ಕಾಂಬ ಕೊರತೆ ಅಭಿಮಾನದ ಕೊರತೆ. ಸಂಸ್ಕೃತ – ಸಂಸ್ಕೃತಿಗಳ ಭೂಯಿಷ್ಟವಾದ – ಒಡಗೊಂಡಿಪ್ಪ – ಹವಿಗನ್ನಡ ಭಾಷಾ ಪಂಡಿತರು ಈ ವಿಚಾರಲ್ಲಿ ಹೆಚ್ಚು ಎಚ್ಚರ – ವಹಿಸಿ ಕಾರ್ಯರಂಗಕ್ಕಿಳಿಯದೆ ಹೋದರೆ, ಈಗಾಗಲೇ ಇದು ಇತಿಹಾಸದ ಪುಟಕ್ಕೆ ಸೇರುತ್ತಾ ಬಂದಂತೆ, ಇನ್ನೊಂದು ಕಾಲಕ್ಕೆ ಇದರ ಸಂಶೋಧನೆಗೆ ಹವಿಗನ್ನಡಿಗರು ಬೇರೆ ಕ್ಷೇತ್ರಕ್ಕೆ ಹೋಯೆಕ್ಕಾಗಿ ಬಕ್ಕು.

ಬ್ರಹ್ಮೀಭೂತರಾದ ಗುರುಗೊ ಶ್ರೀ ರಾಘವೇಂದ್ರ ಭಾರತೀ ಮಹಾಸ್ವಾಮಿಗೊ ಹವಿಗನ್ನಡದ ವಿದ್ವಾಂಸರಲ್ಲಿ ಆಗಾಗ ಖೇದಪಟ್ಟುಗೊಂಡು

ಹೇಳುತ್ತಿದ್ದವು – ‘ತಿಗಳಾರಿ ಲಿಪಿಯೇ ಹವಿಗನ್ನಡದ ಲಿಪಿ, ಅದರಲ್ಲಿ ಸಂಶೋಧನೆ ಮಾಡಿ. ಅದಕ್ಕೆ ಶ್ರೀ ಮಠಂದ ಪ್ರೋತ್ಸಾಹ ಕೊಡುತ್ತಾ ಕೆಲಸ ಆಯೆಕ್ಕು’ – ಹೇಳಿ. ಆರೋ ಒಬ್ಬಿಬ್ಬರು ತೊಡಗಿದ್ದವು. ಗಣ್ಯ ಸಂಶೋಧಕರಾದ ಕೆಳದಿ ಗುಂಡಾ ಜೋಯಿಸರು ಈ ಬಗ್ಗೆ ಪರಿಶ್ರಮ ಪಟ್ಟಿದವು. ಹಿಂದೆ, ಶಾಸನಂಗೊ ಎಲ್ಲ ತಿಗಳಾರಿ ಲಿಪಿಲಿ ಬರೆದಿದ್ದವು ಹೇಳಿ ಮಾದರಿಗೆ ಗ್ರಂಥವನ್ನೇ ತಯಾರಿಸಿದ್ದವು. ಅದರ ಕೇರಳಕ್ಕೆ ತೆಕ್ಕೊಂಡು ಹೋಗಿ ತುಳು ಬ್ರಾಹ್ಮಣರು ಅವರ ತುಳುವಿಂಗುದೆ ಹೊಂದಿಸಿದವು. ಮಲೆಯಾಳದ ಭಾಷಾಜನ ಅದರ ಮಂತ್ರಲಿಪಿ ಹೇಳಿದವು. ಅದರನ್ನೇ ಗುಪ್ತಲಿಪಿ ಹೇಳಿಗೊಂಡು ಹವೀಕ ಮಂತ್ರವಾದಿಗೊ ಹವಿಗನ್ನಡಲ್ಲಿವುದೆ ಬಳಸಿಗೊಂಡವು. ಈ ಗುಪ್ತಲಿಪಿ ಹವಿಗನ್ನಡದ್ದೇಕೆ ಆಗಿಪ್ಪಲಾಗ? ನಾವಿದರ ಮರದು ಕೂದರೆ ಹೇಂಗೆ? ವಿದ್ವಾಂಸರ ಗಮನ ಇದರ ಮೇಲೆ ಆಸಕ್ತಿವಹಿಸಲಿ. ಎಂದಾದರೊಂದು ಕಾಲಕ್ಕೆ ಸಂಸ್ಕೃತ ಭಾಷಾ ಸೋದರಿ, ವೈದಿಕ ಸಂಸ್ಕಾರದ ಈ ಹವಿಗನ್ನಡ ಉಚ್ಚ ಪೀಠಾಲಂಕೃತೆಯಾಗಿ ಬೆಳಗೆಕ್ಕು ಹೇಳುವೊದೇ ಅಭಿಪ್ರಾಯ. ಎಲ್ಲದಕ್ಕೂ ಮೊದಲು ಹವಿಗನ್ನಡ ಪಾಠಶಾಲೆ ಆಯೆಕ್ಕು. ಅದು ಮನೆಯೇ ಆಗಿರೆಕ್ಕು.

✤ ✤ ✤

ಡಾ|| ಎಂ.ಬಿ. ಮರಕಿಣಿ
272 /15 ಮಾನಸ, ಆದರ್ಶನಗರ, ಅರಿಶಿನ ಕುಂಟೆ
ನೆಲಮಂಗಲ, ಬೆಂಗಳೂರು – 562 123 ದೂರವಾಣಿ : 7725563
75 ವರ್ಷ. ಸಾಹಿತಿ, ಹವಿಗನ್ನಡ ಪರಿಚಾರಕ

ಹವಿಗನ್ನಡ – ಸವಿಗನ್ನಡ ಹವ್ಯಾಸೀ ಪುಸ್ತಕ ಪ್ರಕಾಶಕರು.. ಮುಂದೆಂತ?

ಸುಮಾರು 120 ವರ್ಷಕ್ಕೆ ಮದಲು ಸೂರಿ ಅಜ್ಜ (ಕೀರ್ತಿಶೇಷ ಕರ್ಕಿ ವೆಂಕಟರಮಣ ಶಾಸ್ತ್ರಿ) ‘ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ’ ಹೇಳುವ ನಾಟಕ ಬರದು, ‘ಹವೀಕ ಭಾಷೆಯ ಪುಸ್ತಕ ಪ್ರಪಂಚ’ಕ್ಕೆ ಸ್ವಸ್ತಿವಾಚನ ಮಾಡಿದವು. ಆ ಪುಸ್ತಕವ ತಾವೇ ಅಚ್ಚು ಹಾಕ್ಸಿ ಪ್ರಕಟಣಾ ಕಾರ್ಯಕ್ಕೆ ನಾಂದಿ ಮಾಡಿದ ಹಾಂಗಾತು. ಈಗ ‘ಹವಿಗನ್ನಡ’ ಹೇಳುವ ಚೆಂದದ ಹೆಸರು ಹಾಕಿ ನಾಮಕರಣವೂ ಆಯಿದು. ಕತೆ, ಕವಿತೆ, ಚುಟುಕು, ಹಾಡು, ವರದಿ, ವಿಮರ್ಶೆ, ಕಾದಂಬರಿ,

ಮಹಾಕಾವ್ಯ ಹೇಳಿ ಹಲವು ಪುಸ್ತಕಗಳ ನೋಡ್ಚಕ್ಕು. ಒಂದಿಷ್ಟು ನಾಟಕ 'ಸೀಡಿ'ಯೂ ತಯಾರಾಯಿದು; ಅಚ್ಚಾದ್ದೂ ಇದ್ದು; ಸ್ಟೇಜಿನ ಮೇಲೆ ಪ್ರದರ್ಶನ ಆಯ್ಕೊಂಡೂ ಇದ್ದು– ಇವೆಲ್ಲ ಸಂತೋಷದ ಸಂಗತಿಗಳೇ. (ತಾಳಮದ್ದಳೆ 'ಸ್ಟೈಲಿ' ಹೇಳ್ತರೆ ದಶ ದೆಶೆಗಳಲ್ಲೂ ಹೊಸ ಹೊಸತು ಪ್ರಕಾಶಕ್ಕೆ ಬರುತ್ತಿದೆ ಮತ್ತು ಇದು ನವ್ಯ – ದಿವ್ಯ –ಭವ್ಯ ಇತ್ಯಾದಿ) ಹೊಸ ಪೀಳಿಕೆಯ ಜವ್ವನಿಗರು ಕುಶಾಲಿಂಗೆ ಹೇಳಿ ಶುರುಮಾಡಿದರೂ ಸ್ವಚ್ಛ ಉದ್ದೇಶವ ಕಂಡುಗೊಂಡಿದವು. 'ತೊಟ್ಟು ತೂಗುವ ಪದ ಹಾಡು, ಶೋಭಾನೆ ಹೇಳುವ ಮಟ್ಟಿಂಗೆ ಇದ್ದ ಹಾಂಗಿದ್ದ 'ಸಪ್ಪುಟು ಹಿಡಿವ ಕೈ'ಗೊ ಕೂಡ ಪೆನ್ನ್ ಹಿಡಿತ್ತಾ ಇಪ್ಪದು ಇನ್ನಷ್ಟು ಸಂತೋಷದ – ಸಂಭ್ರಮದ ಶುದ್ದಿ. ತಾತ್ಪರ್ಯ ಇಷ್ಟು: ''ಹವಿಗನ್ನಡ ಸಾಹಿತ್ಯ ಸೃಷ್ಟಿ ತಕ್ಕಮಟ್ಟಿಂಗೆ ನಡೆತ್ತಾ ಇದ್ದು. ಕೇಳುವ, ಓದುವ, ನೋಡುವ ಆಸಕ್ತಿ ಹೆಚ್ಚಾವುತ್ತಾ ಇದ್ದು – 'ಏವೆ' ಹರಕ್ಕೊಂಡು ಹೋಪಹಾಂಗೆ 'ಪ್ರಿಂಟ್' ಕೂಡಾ ಆಯ್ಕೊಂಡಿದ್ದು ಹೇಳುವ ಮಾತು ನಿಜ.

ಇದರ ಇನ್ನೊಂದು ಹೊಡೆ ಹೇಂಗಿದ್ದು? ನೋಡುವೊ : ಹವಿಗನ್ನಡಲ್ಲಿ ಬರದ 'ಹಸ್ತಪ್ರತಿ'ಗೊ ಅವರವರ ಮನೆಟ್ರಂಕಿಲೇ ಒಳುದು ಒರಳೆತಿಂತಾ ಇದ್ದು – ಪ್ರಿಂಟಿಂಗೆ ಅವಕಾಶ ಇಲ್ಲದ್ದೆ. ಕೈಂದ ಪೈಸಹಾಕಿ ಅಚ್ಚು ಮಾಡ್ಸಿದರೂ, ನೆಂಟ್ರುಷ್ಟ್ರಿಂಗೆ, ಬಂಧು ಬಳಗದೋರಿಂಗೆ, 'ಫ್ರೆಂಡ್ಸ್‌ಗೊಕ್ಕೆ – ಅವಕ್ಕೆ ಇವಕ್ಕೆ – ಹೇಳಿ 'ಕಾಂಪ್ಲಿಮೆಂಟ್ರಿಕಾಪಿ' ಕೊಟ್ಟು ಒಳ್ದ ಅವರವರ ಮನೆ ಕಪಾಟುಗಳಲ್ಲೇ ಕೊಳಕ್ಕೊಂಡು ಇದ್ದು! ಪುಸ್ತಕ ಅಂಗ್ಡಿಗೆ ಹೋದರೆ 'ಇದು ಖರ್ಚಾಗುವ ಬಾಬ್ತಿಂದಲ್ಲ' ಹೇಳಿ ಕೈ ಮೊಗಚ್ಚುತ್ತವು. ಸಣ್ಣ ದೊಡ್ಡ ಪಬ್ಲಿಷರ್ಸ್ – ಪ್ರಕಟಣಾಲಯ–ಗ್ರಂಥಮಾಲೆಗಳ 'ಕಾಂಟೇಕ್ಟ್' ಮಾಡಿದರೆ ಇಂಥ ಪುಸ್ತಕಗಳನ್ನು ನಾವು ಪ್ರಕಟಿಸುವುದಿಲ್ಲ! ಹೇಳಿ ಮುಸುಡು ತಿರುಗುಸುತ್ತವು. ಅಪ್ಪಿತಪ್ಪಿ ಒಳಕ್ಕೆಯ ಪ್ರಕಾಶಕರು (ಲೈಬ್ರರಿಗೊಕ್ಕೆ ಸಗಟು ಸಪ್ಲೈಮಾಡುವ 'ಕಂಟ್ರಾಟು' ಮಾಡುವೋರು) ಪ್ರಕಟಿಸಿದರೂ '8–10 ಗೌರವ ಪ್ರತಿ' ಕೊಟ್ಟು ಕೈತೊಳಕ್ಕೊಳ್ತವು. ಪುಸ್ತಕ, ಪತ್ರಿಕೆಗಳ 'ವಿಮರ್ಶೆ' ವಿಭಾಗಲ್ಲಿ ಬಿಡಿ–ಸಾದರ ಸ್ವೀಕಾರದಲ್ಲಿ ಕೂಡ ಕಾಣ್ಸೆಗೊಳ್ತಿಲ್ಲೆ. ಬುಕ್‌ಸ್ಟಾಲ್‌ಗಳಲ್ಲಿ ಸೇಲ್ಸ್‌ಂಗೆ ಡಿಸ್‌ಪ್ಲೇ ಆವುತ್ತಿಲ್ಲೆ!... ಹೀಂಗೆ ಹವಿಗನ್ನಡ ಪುಸ್ತಕ ಬರವೋರು ಒಂದುದಿಕ್ಕೆ. ಓದೆಕ್ಕೂ

ಹೇಳಿ ಆಶೆ ಇಪ್ಪೋರು ಬಂದುದಿಕ್ಕೆ (ಸಿನೆಮಾಲ್ಲಿ ಹಾಡ್ತವಲ್ಲದೋ ''ನಾನೊಂದು ತೀರ, ನೀನೊಂದು ತೀರ' ಹೇಳಿ, ಹಾಂಗಾಯಿದು. ನಿಜ; ಭರದ್ವಾಜ ಪ್ರಕಾಶನದೋರು ಈ ಎಲ್ಲ ಅಡೆತಡೆಗಳದಾಂಟ್ಟಿದ್ದವು–ಆದರೆ ಹಾಂಗಿಪ್ಪ ವ್ಯವಸ್ಥೆ ಎಷ್ಟಿದ್ದು?''

ಈಗ ಎದುರಿಂಗೆ ಇಪ್ಪ ಪ್ರಶ್ನೆ ಬರವೋರು – ಓದುವೋರು ಇವರ ನುಡುಗಾಣ 'ಗ್ಯಾಪ್'ನ ಹೇಂಗೆ ತುಂಬ್ಸುವದು? ಪ್ರಿಂಟರ್ಸ್ (ಪಬ್ಲಿಷರ್ಸ್) ಬುಕ್ ಸೆಲ್ಲರ್ಸ್ – ರೀಡರ್ಸ್ ನಡುಗೆ ಸಮ್ಮಂದ ಏರ್ಪಟಪ್ಪದು ಹೇಂಗೆ? 'ಬಂಧುತ್ವ ಬೆಳವ ಬಗೆ ಹೇಂಗೆ? ... 'ಇದೆಲ್ಲ ನವಗೆಂತಗೆ ಈ 'ತಲೆಚೂಡು' (ತಲೆ ಬೆಳಿ) ನಾವೆಂತಗೆ ಇದಲ್ಲಿ ಕೈ ಹಾಕಿ ಮೈಮೇಲೆ ಎಳಕ್ಕೊಳೆಕ್ಕು – ಆದಾಂಗಾವುತ್ತು' ಹೇಳಿ ಸುಮ್ಮನೇ ಕೂಪದೋ ಎಂತ?

ಕನ್ನಡ ಭಾಷೆಯೇ ಮಾಯಕ ಆಯ್ಕೊಂಡು ಬತ್ತಾ ಇದ್ದು. ಇದರೆಡೆಲಿ ಲಾಚಾರಿ ಸ್ಥಿತಿಲಿಪ್ಪ ಉಪಭಾಷೆ ಹವಿಗನ್ನಡದ ಸ್ಥಿತಿ ಹೇಂಗಕ್ಕು? 22ನೇ ಶತಮಾನಕ್ಕಪ್ಪಗ, ಮುಂದಾಗಿ ನಮ್ಮ ನಾಲ್ಕನೇ ತಲೆಮಾರಿನ ಪೀಳಿಗೆಗೆ ನಾವು ಕೊಡುವ ಪಾರಂಪರ್ಯದ ಬಳುವಳಿ ಎಂತ? (ಒಳಿದರೆ ಅಲ್ಲದೊ ಕೊಡುವದು!)

ಅನುದೆ, ಎನ್ನಹಾಂಗಿಪ್ಪ ಹವ್ಯಾಸಿ ಪ್ರಕಾಶಕರೂ 'ಎಡೆಬಿಡಂಗಿ'ಗಳ ಹಾಂಗೆ ಎಷ್ಟು ಕಾಲ ಇರೆಕ್ಕು? 'ಹವ್ಯಾಸೀ – ನೀನೆಲ್ಲಿ ವಾಸಿ?' ಹೇಳಿ ಕೇಳುವ ಕಾಲ ಎಷ್ಟು ದೂರ ಇದ್ದು ಹೇಳಿ! 'ಹವ್ಯಾಸಿ – ನಾನಿಲ್ಲಿಯ ನಿವಾಸಿ' ಹೇಳಿ ಆಗಲಿ ಹೇಳಿ ಆಶೆ ಮಾಡೆ.

ಒಂದು ಪ್ರತ್ಯೇಕ ಟಿಪ್ಪಣಿ : (ದಾಖಲೆಯ ದೃಷ್ಟಿಂದ ಇದರ ಬರದ್ದು)

ಹವ್ಯಕ ಸಾಹಿತ್ಯದ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ 'ಹವ್ಯಕ ಹಾಡು'ಗಳ ತೊಟ್ಟಿಲು ತೂಗುವ ಅಬ್ಬೆಕ್ಕೊ, ಅತ್ತೆಕ್ಕೊ, ಬೆನ್ನು ತಟ್ಟಿ ಒರಸ್ಸುವಾಗ ಅಜ್ಜಿಯಕ್ಕೊ ಹಾಡಿಗೊಂಡಿತ್ತಿದ್ದ ಬಿಡಿ ಮುಕ್ತಂಗಳ ಒಂದಷ್ಟು 1950–60ರ ಸುಮಾರಿಂಗೆ ಪುತ್ತೂರು ವಿಟ್ಲ, ಕೋಳ್ಯೂರು, ಕುಂಬ್ಳೆ ಸೀಮೆಗೆ ಹೋಗಿಪ್ಪಗ ಕೇಳಿ ಬರ್ಕೊಂಡು ಸಂಗ್ರಹಿಸಿಕೊಂಡಿತ್ತಿದ್ದೆ. 1960ನೇ ಇಸವಿಲಿ 'ದಕ್ಷಿಣ ಕನ್ನಡದ ಜನಪದ ಗೀತೆಗಳು' ಹೇಳಿ ಹವ್ಯಕ ಮುಕ್ತಗಳ ಒಂದು ಕಿರು ಪುಸ್ತಕವನ್ನು ಪ್ರಕಟಿಸಿದ್ದೆ

(ಪುತ್ತೂರಿನ ಜನಪ್ರಿಯ ಸಾಹಿತ್ಯ, 36 ಪುಟ, ತ್ರಿವರ್ಣ ಮುಖಚಿತ್ರ : ಕ್ರಯ ನಾಲ್ಕಾಣೆ) 2005ನೇ ಇಸವಿಲಿ ಡಾ|| ಸಬಿತಾಮರಕಿಣಿ ಬರದ ಹವಿಗನ್ನಡ ಕಾದಂಬರಿ 'ಮುಗಿಲು ಬಿರಿಯಿತು' ಮತ್ತು ಪುಸ್ತಕವನ್ನು 'ಗ್ರಾಮೋದಯ' ಮೂಲಕ ಬೆಂಗ್ಳೂರಲ್ಲಿ ಪ್ರಕಟಿಸಿದೆ. 80 ಪುಟ, 4ವರ್ಣದ ಮುಖ ಚಿತ್ರ; ಬೆಲೆ ರೂ. 30/–) ಈ ನಡುವೆ ಈ ಜನಪದ ಗೀತೆಗಳನ್ನೊಳಗೊಂಡ ಶಬ್ದಚಿತ್ರ, ನುಡಿ ಚಿತ್ರಗಳನ್ನು 1952–53ರಲ್ಲಿ 'ಮೈಸೂರು ಆಕಾಶವಾಣಿ'ಯಿಂದ ಮೊದಲಬಾರಿಗೆ ಪ್ರಸಾರಮಾಡಿದ್ದೂ ಆಯಿತು. ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಟನಗಳ ಸಭೆ ಸಮಾರಂಭಗಳಲ್ಲಿ ಅಷ್ಟೇ ಇಲ್ಲದೆ ಮೈಸೂರು 'ದಸರಾ' ಕಾಯದಕ್ರಮದಲ್ಲಿ ಕೂಡ ಹಾಡಿಸಿದ್ದು ಮೊದಲ ದಾಖಲೆಗಳು. (ಪತ್ರಿಕೆಗಳಲ್ಲಿ ಕೂಡ ಅನೇಕ ಲೇಖನಗಳನ್ನು, ಹಾಡುಗಳನ್ನು ಪ್ರಕಟಿಸಲಾಗಿದೆ) ವಿಶೇಷವೆಂದರೆ ಈ ಹವಿಗನ್ನಡ (ಹವ್ಯಕ ಕನ್ನಡ)ದ ಹಾಡುಗಳನ್ನು, ಪಾರಂಪರಿಕ ಚೌಕಟ್ಟನ್ನೇ ಮೀರದಂತೆ ಸುಶ್ರಾವ್ಯವಾಗಿ ಹಾಡಿದ ನಮ್ಮ ಮೈಸೂರು ದಕ್ಷಿಣ ಕನ್ನಡ ವಿದ್ಯಾರ್ಥಿಗಳ ಗುಂಪಿನಲ್ಲಿದ್ದವರು ತುಳು, ಮಲೆಯಾಳ, ಕೊಂಕಣಿ ಮತ್ತು ತೆಲುಗು ಮನೆಮಾತಿನವರು!

✤ ✤ ✤

ಡಾ|| ಜಿ.ಎಸ್. ಹೆಗಡೆ, ಪಿ.ಎಚ್‌ಡಿ, ಉಪನ್ಯಾಸಕರು
ಹಡಿನಬಾಳ, ಹೊನ್ನಾವರ, ಉತ್ತರ ಕನ್ನಡ–581 361
ದೂರವಾಣಿ : 08387–279597

ಹವಿಗನ್ನಡ ಸವಿ ಉಳಿಸ್ವೊ

ಭಾಷೆ ಸಂಸ್ಕೃತಿಯ ವಾಹಕ. ಕತೆ, ಹಾಡು, ಗಾದೆ, ಒಗಟು ಇಂಥ ಸಾಹಿತ್ಯಕ ರೂಪ. ಆಯಾ ಜನರು ಆಡುವ ವಿಶಿಷ್ಟ ಪದ, ನುಡಿಗಟ್ಟಿಂಥ ಭಾಷಿಕ ರೂಪ, ನಂಬಿಕೆಯಂಥ ಅಭೌತಿಕ ರೂಪ ಇವೆಲ್ಲ 'ಭಾಷೆ' ಇಲ್ದೆ ಬದುಕ್ತ್ವಿಲ್ಲೆ. ಮೌಖಿಕವೇ ಇರ್ಲಿ, ಲಿಖಿತವೇ ಇರ್ಲಿ ಎರಡಕ್ಕೂ ಭಾಷೆ ಬೇಕು.

ಗಂಧದ ಕೊರಡೂ ಇದ್ದು, ಕಲ್ಲೂ ಇದ್ದು ತೇಯುವವ್ರೇ ಇಲ್ದೆ ಹೋದ್ರೆ... ಹೇಂಗೆ ಪರಿಮಳ ಬೀರ್ತಿಲ್ಯೋ ಹಾಂಗೇಯ ಭಾಷೆ ಹೇಳೂ ಗಂಧದ ತುಂಡೂ

ತೇದಷ್ಟೂ ಹೆಚ್ಚೆಚ್ಚು ಪರಿಮಳ ಕೊಡ್ತು. ಅಮೇರಿಕಾದ ಒಂದು ಸಾವ್ರ ಭಾಷೆಗ್ಳಲ್ಲಿ 650ರಷ್ಟು ಬಾಷೆಗ್ಳು ಮಾತ್ನಾಡ್ತೋರಿಲ್ದೆ ಸತ್ತೋಯ್ತು. ಆ ಭಾಷೆಗಳನ್ನವಲಂಬಿಸಿದ್ದ ಸಂಸ್ಕೃತಿಗಳೂ ತಮ್ಮತನ ಕಳಕಂಡು ಬೇರೆ ಸಂಸ್ಕೃತಿಯಲ್ಲಿ ವಿಲೀನವಾಗಿ ಹೋಯ್ತು.

ಹವ್ಯಕರ ಪ್ರಾಚೀನತೇನ ಆಧಾರ ಸಮೇತ ತಿಳಿಸಿಕೊಡುವ ಕನ್ನಡದಲ್ಲೇ ವಿಶಿಷ್ಟ ಆಗಿಪ್ಪ 'ಹವಿಗನ್ನಡ'ನೂ ಬಳಕೆ ಕಡ್ಮೆ ಆದ್ರೆ ಕ್ರಮೇಣ 'ಇತಿಹಾಸ' ಆಗೋಪ ಅಪಾಯ ಇದ್ದು. ಹೀಂಗಾಗಿ ಜಾಗತೀಕರಣದ ಅಲೆಲಿ ಹವಿಗನ್ನಡ ಕೊಚ್ಗ ಹೋಗ್ದಗಿದ್ದಾಂಗೆ ತಡೆದ್ರೆ ಮಾತ್ರ ನಂಗ್ಳ ಭಾಷೆ, ನಂಗ್ಳ ಸಂಸ್ಕೃತಿ ಜೀವಂತ ಇಪ್ಲ್ ಸಾಧ್ಯ.

ಹವಿಗನ್ನಡ ಉಳಿಸ್ಕಂಬ್ಲ್ರಲ್ಲಿ ನಂಗೊ ಎಲ್ಲ ಅಗತ್ಯವಾಗಿ ಮಾಡ್ಲೇಬೇಕಾದ ಕೆಲವು ಕರ್ತವ್ಯ ಅಂದ್ರೆ:

ಮುಖ್ಯವಾಗಿ ಎಲ್ಲ ಹವ್ಯಕ್ರನ್ನೂ ಒಂದ್‌ಗೂಡ್ಸೂ ಶಕ್ತಿ ಇಪ್ದು ಮಠಕ್ಕೆ. ಈ ಮಠ ಇಲ್ಲೀವರೆಗೆ ಧಾರ್ಮಿಕವಾಗೇ ಹೆಚ್ಚು ಗಮನ ನೀಡಿದ್ದು. ಈವಾಗ್ಲೇ ಸೀಮಾ ಮಟ್ದಲ್ಲಿ ವಿವಿಧ ಪ್ರತಿಭೆಗಳನ್ನ ಗುರುತಿಸೋ ಕೆಲ್ಸ ಮಾಡ್ದಾಂಗೇಯ ಹವಿಗನ್ನಡವನ್ನೂ ಉಳಿಸಿ ಬೆಳೆಸು ಬಗ್ಗೆ ಹವಿಕರಲ್ಲಿ ಜಾಗೃತಿ ಮೂಡ್ಸೂ ಕೆಲ್ಸನ ಹವ್ಯಕ ಮಠಗಳು ಮಾಡ್ಬೊ.

'ಉಗುಳಿ ಉಗುಳಿ ರೋಗ, ಬೊಗಳಿ ಬೊಗಳಿ ರಾಗ' ಎಂಬಾಂಗೆ ಮಾತು ಆಡಿ ಆಡೀನೇ ಬೆಳೂದು. ಹವಿಗನ್ನಡದಲ್ಲೇ ಸಂಭಾಷಣೆ, ನಿರೂಪಣೆ, ಲೇಖನ ರಚನೆ, ಅಲ್ಲಲ್ಲಿಯ ಹವ್ಯಕ ಸಂಘ–ಸಂಸ್ಥೆಯೋರು ಆಯಾ ಭಾಗದ ಹವಿಗನ್ನಡ ಭಾಷಾ ಸೊಗಸನ್ನ ಬೇರೆ ಬೇರೆ ಕಾರ್ಯಕ್ರಮ, ಸ್ಪರ್ಧೆ ನಡೆಸುದ್ರ ಮೂಲಕ ಉಳಿಸ್ಕಳ್ಬೊ.

ಹವ್ಯಕ ಸಮ್ಮೇಳನ ನಡ್ದಾಗಲೆಲ್ಲ ಕಡ್ಡಾಯವಾಗಿ ಎಲ್ರೂ (ವೇದಿಕೆಲಿಪ್ಪೋರೂ) ಹವಿಗನ್ನಡದಲ್ಲೇ ಮಾತಾಡ್ಬೊ.

'ಹವ್ಯಕ' ಪತ್ರಿಕೆ ಇಂದು ಮೊದ್ಲಿಗಿಂತ ಆಕರ್ಷಕ ಆಯ್ತು. ಇದ್ರಲ್ಲಿ ಆದಷ್ಟು ಹೆಚ್ಚು ಪುಟ (ಕನಿಷ್ಠ 4 ಪುಟ) ಎಲ್ಲಾ ಸೀಮೆಯ ಹವಿಗನ್ನಡ ಕತೆ, ಕವನ, ಲೇಖನಕ್ಕೇ ಮೀಸ್ಲಿಡ್ಬೊ.

'ಹವ್ಯಕ ಮಹಾಸಭಾ'ದಲ್ಲಂತೂ ಎಲ್ಲ ಭಾಗದ ಹವ್ಯಕರ ಸಂಗಮ ಆಗ್ತು. ಹವಿಗನ್ನಡದ ವೈವಿಧ್ಯ ಇಲ್ಲಿ ಸಿಕ್ತು. ಪ್ರಯೋಗದಲ್ಲಿ ಬೇರೆಬೇರೆ ಆದ್ರೂ ಅದು ಎಲ್ಲರಿಗೂ ಅರ್ಥ ಅಪ್ಪಾಂಗಿದ್ದು. ಹೀಂಗಾಗಿ ಹವಿಗನ್ನಡದ ಬಳಕೆ ಮಹಾಸಭಾದಲ್ಲಿ ಕಡ್ಡಾಯವಾಗಿ ಆಗೊ.

'ಮುರಗನ ಚರ್ಗೆ ಮುಕಳಿ ಸುಟ್ಟಗ್ತು, ತುಪ್ಪದ ಚರ್ಗೆ ಹೊಗಳಸ್ಕತ್ತು' ಎಂದಾಂಗೆ ನಂಗಳ ಸಂಸ್ಕೃತಿ ಎಲ್ಲಾ ಕಡೆ ಮೆಚ್ಚುಗೆ ಪಡದ್ದು. ಆ ಸಂಸ್ಕೃತಿನ ಹಿಡ್ದಿಟ್ಗಂಡ್ ಭಾಷೆನ ನಂಗೋನೇ ಮರೆತ್ರೆ ನ್ಯಾಯ ಅಲ್ಲ. ಹೀಂಗಾಗೇ ಎಲ್ರೂ ಸೇರಿ ಹವಿಗನ್ನಡ ಉಳಿಸಿ ಬೆಳೆಸೋ ಸಂಕಲ್ಪ ಮಾಡ್ವೊ.

✤ ✤ ✤

ಕೆ.ಪಿ. ರಾಜಗೋಪಾಲ ಕನ್ಯಾನ
754, 15ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು –70
ದೂರವಾಣಿ ಸಂಖ್ಯೆ : 26714258 (ಮ) 22866399 (ಕ)
ಕವಿ, ಸಾಹಿತಿ, ಯಕ್ಷಗಾನ ಪಾತ್ರಧಾರಿ

1. ನಾವು ಪ್ರತಿಯೊಬ್ಬನುದೆ ನಮ್ಮ ಮನೆಲಿ ಹವಿಗನ್ನಡದಲ್ಲಿಯೇ ಮಾತಾಡೆಕ್ಕು. ನಾವು ಮಕ್ಳೊಗೆ ಖಡ್ಡಾಯವಾಗಿ ಹವಿಗನ್ನಡವ ಕಲಿಸೆಕ್ಕು ಅಲ್ಲದೆ, ಮಾತಾಡ್ಲೆ ಪ್ರೋತ್ಸಾಹ ಕೊಡೆಕ್ಕು.
2. ಹವ್ಯಕರೇ ಇಪ್ಪ ಸಭೆ – ಸಮಾರಂಭಗಳಲ್ಲಿ ಹವಿಗನ್ನಡಲ್ಲಿಯೇ ಮಾತಾಡೆಕ್ಕು. ಸಭೆಗಳ ನಿರ್ವಹಣೆ ಮಾಡೆಕ್ಕು.
3. ಹವ್ಯಕ ಬರೆಹಗಾರರು ಸಾಧ್ಯವಿದ್ದಷ್ಟು 'ಸ್ವಾಂತ ಸುಖಾಯ' ಹೇಳಿ ಹೇಳುವ ಹಾಂಗೆ, ಹವಿಗನ್ನಡಲ್ಲಿಯೂ ಕವಿತೆ, ಕಥೆ, ನಾಟಕ, ಕಾದಂಬರಿ, ಯಕ್ಷಗಾನಂಗಳ ರಚಿಸೆಕ್ಕು.
4. ಹವ್ಯಕ ಯಜಮಾನಂಗಾಗಿಪ್ಪ ಪತ್ರಿಕೆಲಿ ಖಡ್ಡಾಯವಾಗಿ ಒಂದು ಹವಿಗನ್ನಡ ಅಂಕಣವ ಪ್ರಾರಂಭಿಸೆಕ್ಕು.
5. ಹವ್ಯಕ ಸಂಘ – ಸಂಸ್ಥೆಗೊ ಆಯಾಯ ಪ್ರದೇಶದ ಬರೆಹಗಾರರಿಂಗೆ ಹವ್ಯಕ ಸಾಹಿತ್ಯವ ರಚಿಸುಲೆ ಪ್ರೋತ್ಸಾಹ ಕೊಡೆಕ್ಕು. ಆವಾಗಾವಾಗ ಹವಿಗನ್ನಡ ಸ್ಪರ್ಧೆ ಏರ್ಪಡಿಸೆಕ್ಕು. ಆಕರ್ಷಕ ಬಹುಮಾನ ಕೊಡೆಕ್ಕು.

6. ಕ್ಯಾಸೆಟ್, ಸಿ.ಡಿ.ಗಳ ಹವಿಗನ್ನಡಲ್ಲೂ ತಯಾರ್ಸೆಕ್ಕು ಅಲ್ಲದೆ ಅಂಥೋರಿಂಗೆ ಪ್ರೋತ್ಸಾಹ ಕೊಡೆಕ್ಕು.
7. ಹವಿಗನ್ನಡ 'ವೆಬ್‌ಸೈಟ್' ಸುರುವಾಡೆಕ್ಕು.
8. ನಮ್ಮ ಭಾಷೆಗೆ ಸಂಬಂಧಿಸಿದ ವ್ಯಾಕರಣ, ಛಂದಸ್ಸು, ನಿಘಂಟುಗಳೇ ಮೊದಲಾದ ಶಾಸ್ತ್ರೀಯ ಕೃತಿಗಳ ರಚನೆ ಆಯೆಕ್ಕು – ಹಾಂಗೆಯೇ ಪ್ರಕಟಿಸೆಕ್ಕು.
9. ಹವ್ಯಕರ ಸಭೆ – ಸಮಾರಂಭಗಳಲ್ಲಿ ಹವಿಗನ್ನಡದ ಹಾಡು, ಕವಿತೆ, ಚೂರ್ಣಿಕೆ, ಶೋಭಾನೆಗಳ ಹಾಡಿಸೆಕ್ಕು. ನೃತ್ಯ, ನಾಟಕ, ಪ್ರಹಸನಂಗಳ ಮಾಡಿಸೆಕ್ಕು.
10. 'ಹವ್ಯಕ', 'ಹವ್ಯಕ ವಾರ್ತೆ'ಗಳಂಥ ಹವ್ಯಕರ ಪ್ರಾತಿನಿಧಿಕ ಪತ್ರಿಕೆಗೊ ಕನಿಷ್ಠ ನಾಲ್ಕೈದು ಪುಟ ಹವಿಗನ್ನಡಕ್ಕೆ ಮೀಸಲಿಡೆಕ್ಕು.
11. ಹವಿಗನ್ನಡದ್ದೇ ಆದ ಪತ್ರಿಕೆ ಒಂದರ ಪ್ರಾರಂಭಿಸೆಕ್ಕು.
12. ಹವಿಗನ್ನಡ ಅಪ್ರಕಟಿತ ಕೃತಿಗಳ ಪ್ರಕಟಮಾಡ್ಳೆ ಒಂದು ಪ್ರಕಾಶನ ಸಂಸ್ಥೆಯ ಸುರುಮಾಡೆಕ್ಕು. ಅಲ್ಲದೆ, ಪ್ರಕಟ ಮಾಡ್ಳೆ ಸಹಾಯ ಕೊಡೆಕ್ಕು ಹಾಂಗೂ ಮಾರಾಟಕ್ಕೆ ಒಂದು 'ನೆಟವರ್ಕ್'ನ ವ್ಯವಸ್ಥೆ ಆಯೆಕ್ಕು.
13. ಹವಿಗನ್ನಡದ ಬಗ್ಗೆ ಪಿಹೆಚ್‌ಡಿ, ಸಂಶೋಧನೆ, ತುಲನಾತ್ಮಕ ಅಧ್ಯಯನ ಮಾಡ್ಳೆ ಪ್ರೋತ್ಸಾಹ ಕೊಡೆಕ್ಕು, ಸಹಾಯ ಮಾಡೆಕ್ಕು.
14. ಕನಿಷ್ಠ 2 ವರ್ಷಕ್ಕೊಂದರಿಯಾದರೂ 'ಹವಿಗನ್ನಡ ಸಾಹಿತ್ಯ ಸಮ್ಮೇಳನ'ವ ಅರ್ಥಪೂರ್ಣವಾಗಿ ಏರ್ಪಡುಸೆಕ್ಕು. ಹವಿಗನ್ನಡ 'ಬರೆಹಗಾರರ ಒಕ್ಕೂಟ'ವ ಅಸ್ತಿತ್ವಕ್ಕೆ ತರೆಕ್ಕು.
15. ಹವ್ಯಕೇತರರಲ್ಲಿ ಇಷ್ಟಪಡುವೋರಿಂಗೆ ಹವಿಗನ್ನಡವ ಕಲಿಸಿ, ಬೆಳೆಶುವ ವ್ಯವಸ್ಥೆ ಆಯೆಕ್ಕು.
16. ಶಾಲಾ– ಕಾಲೇಜು, ವೃತ್ತಿ ಜಾಗೆಗಳಲ್ಲಿ ''ಹವಿಗನ್ನಡ ಕ್ಲಬ್''ಗಳ ಪ್ರಾರಂಭಿಸೆಕ್ಕು.
17. ಹವ್ಯಕೇತರ ಊರಿಲಿ, ಪರರಾಜ್ಯ ದೇಶಂಗಳಲ್ಲಿ ಆರ್ತರಿಂಗೆ ಹವಿಗನ್ನಡದ ಬಗ್ಗೆ ಕಲಿಸುವ, ಒಲವು ಮೂಡಿಸುವ ಕಾರ್ಯ ಆಯೆಕ್ಕು.
18. ಟಿ.ವಿ., ಆಕಾಶವಾಣಿಗಳಲ್ಲಿ ಹವಿಗನ್ನಡದ ಕಾರ್ಯಕ್ರಮಗಳ ಕೊಡೆಕ್ಕು.

✤ ✤ ✤

ಅನುಬಂಧ 1
ಕೀರ್ತಿಶೇಷ ಹವಿಗನ್ನಡ ಗ್ರಂಥಕರ್ತರು

1) ಸೂರಿ ವೆಂಕಟರಮಣ ಶಾಸ್ತ್ರಿ ಕರ್ಕಿ ಹೊನ್ನಾವರ ಉತ್ತರ ಕನ್ನಡ (1852–1982) : ಕನ್ನಡ ಸಂಸ್ಕೃತ ಪಂಡಿತ. ಪ್ರಕಟಿತ ಸ್ವತಂತ್ರ ಕೃತಿ : 4 ಸಂಪಾದಿತ : 24

ಹಿರಿಮೆ : ಹವ್ಯಕರಲ್ಲಿ ಪ್ರಪ್ರಥಮ ನಾಟಕಕಾರ, ಪತ್ರಿಕೋದ್ಯಮಿ (1885) ಕನ್ನಡ ಸಾಹಿತ್ಯದಲ್ಲಿ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ನಾಟಕಕಾರ, ಪ್ರವಾಸಿ ಸಾಹಿತ್ಯಕಾರ (1885).

ಹವಿಗನ್ನಡ ಕೃತಿ : ಇಗ್ಗಪ್ಪಹೆಗಡೇ ವಿವಾಹ ಪ್ರಹಸನ (1887), ಪು. 48, ಆಗ 'ಹವ್ಯಕ ಹಿತೇಚ್ಛು' ಎಂಬ ಗುಪ್ತನಾಮದಿಂದ ಪ್ರಕಟ ಆಜು. 1952ರಲ್ಲಿ ಎಲ್.ಟಿ. ಶರ್ಮಾರಿಂದ ಪುನರ್ಮುದ್ರಣ ಆಜು. ಆಗ ಮೂಲ ಲೇಖಕನ ಹೆಸರು ಬೆಳಕಿಗೆ ಬಂತು. ಡಾ|| ನಾರಾಯಣ ವಿ. ಹೆಗಡೆ ದೊಡ್ಮನೆ, ಪ್ರಾಧ್ಯಾಪಕರು, ನ್ಯೂಯಾರ್ಕ್ ಸ್ಟೇಟ್ ವಿಶ್ವವಿದ್ಯಾಲಯ, ಅಮೆರಿಕಾ ಇವರಿಂದ ಅಂಗ್ರೇಜಿಗೆ ಅನುವಾದ ಆಜು. (ಅಪ್ರಕಟಿತ)

2) ಭಾರತೀಸುತ (ಎಸ್.ಆರ್. ನಾರಾಯಣರಾವ್) ಮಡಿಕೇರಿ, ಕೊಡಗು (1915–1976) ಶಿಕ್ಷಕ, ಸಾಹಿತಿ.

ಪ್ರಕಟಿತ ಕೃತಿ : 62

ಹವಿಗನ್ನಡ ಕೃತಿ : ವಕ್ರರೇಖೆ : ಕಾದಂಬರಿ: 1971 ಪು. 400 ಭಾಗಶಃ ಸಂಭಾಷಣೆ, ಹವಿಗನ್ನಡದಲ್ಲಿದ್ದು.



3) ಪ್ರೊ|| ಎಂ. ಮರಿಯುಪ್ಪ ಭಟ್ಟ ಮುಂಗ್ಲಿಮನೆ, ಪುತ್ತೂರು ದಕ್ಷಿಣ ಕನ್ನಡ, (1906–1980): ಮದ್ರಾಸ ವಿಶ್ವವಿದ್ಯಾ ನಿಲಯದಲ್ಲಿ ಕನ್ನಡ ಪ್ರಾಧ್ಯಾಪಕ ವಿಭಾಗದ ಮುಖ್ಯಸ್ಥ. ಸಾಹಿತಿ. ಪ್ರಕಟಿತ ಕೃತಿ : 25 ಸ್ವತಂತ್ರ ಕೃತಿ : 4 ಇತರ:21

ಹವಿಗನ್ನಡ ಕೃತಿ : ಹವ್ಯಕ ಇಂಗ್ಲಿಷ್ ಡಿಕ್ಷನರಿ 1983 ಪು. 324
(ಕೃತಿಕಾರರ ಮರಣಾನಂತರ ಮಗಳು ಡಾ॥ ಶಾರದಾ ಜಯಗೋವಿಂದ ರವರಿಂದ ಪ್ರಕಟಿತ)

4) ನರ್ಕಳ ಮಾರಪ್ಪ ಶೆಟ್ಟಿ ಕೊಳನಾಡು, ಬಂಟವಾಳ, ದಕ್ಷಿಣ ಕನ್ನಡ (1894–1987), ಶಿಕ್ಷಕ, ಸಾಹಿತಿ

ಹವಿಗನ್ನಡ ಕೃತಿ : ಕೂಸಕ್ಕನ ಮದುವೆ : ನಾಟಕ : ರಚನೆ 1930, ಪ್ರಕಟಣೆ : ಜೂನ್ 2004ರ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ.

(ಸಂಪಾದಕ : ಕೆ.ಪಿ. ರಾಜಗೋಪಾಲ ಕನ್ಯಾನ)

5) ಶಂಪಾ ದೈತೋಟ ಪಾಣಾಜೆ ಪೂತ್ತೂರು, ದಕ್ಷಿಣ ಕನ್ನಡ (1932–2002) : ಸಾಹಿತಿ : ಪರಿಸರವಾದಿ. ಪ್ರಕಟಿತ ಕೃತಿ : 10

ಹವಿಗನ್ನಡ ಕೃತಿ : ಒಂದಿಷ್ಟು ಕಟುಕುಟು : ಕವನ ಸಂಕಲನ : 2001 : ಪು. 64

6) ಪ್ರೊ॥ ಟಿ. ಕೇಶವಭಟ್ಟ ಬಾಯಾರು, ತಾಳ್ತಜೆ, ಕಾಸರಗೋಡು (1920–2005), ಪ್ರಾಧ್ಯಾಪಕ, ಸಾಹಿತಿ, ಭಾಷಾ ಪಂಡಿತ. ಪ್ರಕಟಿತ ಕೃತಿ:50

ಹವಿಗನ್ನಡ ಕೃತಿ : ಹವ್ಯಕ ಪದ ಸಂಚಯ – ಕಾವ್ಯ 1972/ 1982 : ಪು. 100 : ಕಂದಪದ್ಯಗಳಲ್ಲಿ ಹವಿಗನ್ನಡ ಶಬ್ದಗಳ ಅರ್ಥಕೋಶ

✣ ✣ ✣

7) ಗಣಪತಿ ದಿವಾಣ ಬಂಟ್ವಾಳ, ದ.ಕ. (1923-1999)
ಪ್ರಕಾಶಿತ ಕೃತಿಗಳು - 13
ಹವಿಗನ್ನಡ ಕೃತಿ - ''ಕನ್ನಾಟಿ'' ಕವನ ಸಂಕಲನ (1995)

✤ ✤ ✤

ಅನುಬಂಧ 2

ಹವಿಗನ್ನಡ ಕುರಿತು ನಡೆದ ಅಧ್ಯಯನ-ಸಂಶೋಧನೆಗಳು

ಅ) ಪ್ರಕಟಿತ ಕೃತಿಗಳು

1.	ಹವ್ಯಕ ಪದ ಸಂಚಯ	ಪ್ರೊ. ಟಿ. ಕೇಶವಭಟ್ಟ – 1980
2.	ನುಡಿ ಸಂಸ್ಕೃತಿ (ಹವ್ಯಕ ಪಡೆನುಡಿ ಕೋಶ)	ಡಾ|| ಕೃಷ್ಣಭಟ್ಟ ಅರ್ತಿಕಜೆ ಮತ್ತು ಡಾ|| ಹರಿಕೃಷ್ಣ ಭರಣ್ಯ – 2005
3.	Havyaka – English Dictionary	Prof. M. Mariyappa Bhat 1983
4.	Havyaka Dialect of North Kanara	Dr. K.G. Shastri - 1971 Ph.D. Thesis
5.	An Outline Grammer of Havyaka	Dr. D.N. Shankar Bhat 1971
6.	Structure of Northern Havyaka Kannada – A Tagmatic Analysis	Dr. Helen Ulrich Ph.D. Thesis 1980

ಆ) ಅಪ್ರಕಟಿತ ಕೃತಿಗಳು

1.	A Descriptive Analysis of Havyaka Dialect	Dr. B. Chandrashekara Bhat Mysore
2.	A Socio Linguistic Analysis of Havyaka Dialect of North Kanara	Dr. Shalini Raghunath Bhat Dharwad
3.	ಉತ್ತರ ಕನ್ನಡ ಜಿಲ್ಲೆಯ ಹವ್ಯಕ ಜನಪದ ಸಂಸ್ಕೃತಿಯ ಅಧ್ಯಯನ	ಡಾ|| ಜಿ.ಎಸ್. ಹೆಗಡೆ ಹಡಿನಬಾಳ ಹೊನ್ನಾವರ

4. ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಕರ ಸಂಸ್ಕೃತಿ – ಒಂದು ಅಧ್ಯಯನ } ಡಾ|| ಬಿ.ಎನ್. ಮಹಾಲಿಂಗ ಭಟ್ಟ ಪುತ್ತೂರು

ಮೇಲಿನ ನಾಲ್ಕು ಜನರಿಗೆ ಆಯಾ ವಿಷಯದ ಅಧ್ಯಯನದ ಬಗ್ಗೆ ಪಿ.ಎಚ್‌ಡಿ ಪದವಿ ಸಿಕ್ಕಿದ್ದು.

ಇದಲ್ಲದೇ ಅಲ್ಲಲ್ಲಿ ಕೆಲವು ಸಂಶೋಧನಾತ್ಮಕ ಪ್ರಬಂಧ ಲೇಖನ ಇತ್ಯಾದಿ ಪ್ರಕಟ ಆಜು. ವಿವರಕ್ಕಾಗಿ ಡಾ|| ಹರಿಕೃಷ್ಣ ಭರಣ್ಯರ ''ಈ ನೆಲದ ಕಂಪು'' ಕೃತಿ ನೋಡಿ. ಪ್ರ : ಹವ್ಯಕ ಅಧ್ಯಯನ ಕೇಂದ್ರ, ಬೆಂಗಳೂರು 2006

ಅನುಬಂಧ 3

ಹವಿಗನ್ನಡ ಪೋಷಕರು

1. 'ಕನ್ನಡ ಜನ ಅಂತರಂಗ' ದಿನಪತ್ರಿಕೆ, ಮಂಗಳೂರು
   ಸಂಪಾದಕರು : ಬಿ.ವಿ. ಸೀತಾರಾಮು
2. 'ಕಲಾದರ್ಶನ' ಮಾಸಪತ್ರಿಕೆ, ಮಂಗಳೂರು
   ಸಂಪಾದಕ : ವಿ.ಬಿ. ಹೊಸಮನೆ
3. 'ಹವ್ಯಕ ವಾರ್ತೆ' ಮಾಸಪತ್ರಿಕೆ
   ಪ್ರ: ದಕ್ಷಿಣ ಕನ್ನಡ ಮತ್ತು ಕಾಸರಗೋಡು ಹವ್ಯಕ ಸಭಾ, ಮಂಗಳೂರು
4. 'ಹವ್ಯಕ' ಮಾಸಪತ್ರಿಕೆ
   ಪ್ರ: ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು
5. 'ಕೊಡಗಿನ ಗೌರಮ್ಮ ದತ್ತಿನಿಧಿ' ಮಡಿಕೇರಿ
6. 'ಗಂಗೊಳ್ಳಿ ದತ್ತಿನಿಧಿ', ಮೈಸೂರು
7. ಹವ್ಯಕ ಅಧ್ಯಯನ ಕೇಂದ್ರ
8. ಹವಿಗನ್ನಡ ಪ್ರತಿಷ್ಠಾನ

} ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು

ಶ್ರೀ ಅಖಿಲ ಹವ್ಯಕ ಮಹಾಸಭೆ

ಮನುಷ್ಯ ಸಮಾಜ ಜೀವಿ. ಸಂಘಟನೆ ಸಾಮಾಜಿಕ ಬದುಕಿನ ಅನಿವಾರ್ಯತೆ. ''ಸಂಘೇ ಶಕ್ತಿಃ ಕಲೌಯುಗೇ'' ಎಂಬುದನ್ನು ಮನಗಂಡ ಹವ್ಯಕ ಗಣ್ಯರು 1943ರಲ್ಲಿ ಬೆಂಗಳೂರಲ್ಲಿ ಸ್ಥಾಪಿಸಿದ ಹವ್ಯಕ ಸಂಘಟನೆ ಇಂದು ಶ್ರೀ ಅಖಿಲ ಹವ್ಯಕ ಮಹಾಸಭೆಯಾಗಿ ರೂಪುಗೊಂಡಿದೆ. ಮಹಾಸಭೆಯ ಸಾಧನೆ ನಗಣ್ಯವೇನಲ್ಲ. ಆದರೂ ಇತರ ಸಮಾಜದವರು ಸಂಘಟನೆಯ ಮೂಲಕ ಸಾಧಿಸಿದ ಸಾಧನೆ, ಏರಿದ ಎತ್ತರಗಳನ್ನು ಗಮನಿಸಿದಾಗ ನಾವು ಅವರ ಮುಂದೆ ಕುಬ್ಜರಾಗುತ್ತೇವೆ. ಆದ್ದರಿಂದ ನಮ್ಮ ಸಂಘಟನೆಯನ್ನು ಬಲಪಡಿಸಿ ಸಮಗ್ರ ಹವ್ಯಕ ಸಮಾಜದ ಸರ್ವಾಂಗೀಣ ಪ್ರಗತಿಯತ್ತ ಕಾರ್ಯಪ್ರವೃತ್ತರಾಗಬೇಕಾದುದು ಇಂದಿನ ಅವಶ್ಯಕತೆ.

ಮಹಾಸಭೆಯ ಸದಸ್ಯರಿಗೆ ದೊರೆಯುವ ಸೌಕರ್ಯಗಳು

1. ''ಹವ್ಯಕ ಮಹಾಸಭೆ''ಯೆಂಬ ವಿಶ್ವಕುಟುಂಬದ ಹೆಮ್ಮೆಯ ಸದಸ್ಯತ್ವ.
2. ಹವ್ಯಕ ಸಮಾಜದ ಮುಖವಾಣಿಯಾದ 'ಹವ್ಯಕ' ಮಾಸಪತ್ರಿಕೆ ಉಚಿತವಾಗಿ ಮನೆ ಬಾಗಿಲಿಗೆ.
3. ಸಭೆ–ಸಮಾರಂಭಗಳಿಗೆ ರಿಯಾಯಿತಿ ದರದಲ್ಲಿ 'ಹವ್ಯಕ ಸಭಾಭವನ'.
4. ಹವ್ಯಕ ಭವನದ ಅತಿಥಿ ಕೋಣೆಗಳಲ್ಲಿ ಲಭ್ಯತೆಯ ಆಧಾರದ ಮೇಲೆ ಸ್ಥಳಾವಕಾಶ.
5. 'ಹವ್ಯಕ ವಿದ್ಯಾರ್ಥಿ ನಿಲಯ' ಮತ್ತು 'ಹವ್ಯಕ ಮಹಿಳಾ ವಸತಿ ಗೃಹ'ಗಳಲ್ಲಿ ಸದಸ್ಯರ ಮಕ್ಕಳಿಗೆ ಲಭ್ಯತೆಯ ಆಧಾರದ ಮೇಲೆ ಸ್ಥಳಾವಕಾಶ.
6. 40ಕ್ಕೂ ಮಿಕ್ಕ ಸ್ಥಳೀಯ ಹವ್ಯಕ ಸಂಘಗಳ ಸದಸ್ಯರೊಂದಿಗೆ ಸಂಪರ್ಕದ ಅವಕಾಶ.
7. 'ಹವ್ಯಕ' ಪತ್ರಿಕೆಯಲ್ಲಿ ವೈವಾಹಿಕ ಜಾಹಿರಾತು, ಪ್ರತಿಭಾನ್ವಿತರ ಪರಿಚಯ, ಸಾಂಘಿಕ ಕಾರ್ಯಕ್ರಮಗಳ ಪ್ರಚಾರಕ್ಕೆ ಸ್ಥಳಾವಕಾಶ.
8. ಹವ್ಯಕ ವೈವಾಹಿಕ ಮಾಹಿತಿ ಕೇಂದ್ರ ಮತ್ತು ಉದ್ಯೋಗ ಮಾಹಿತಿ ಕೇಂದ್ರಗಳಲ್ಲಿ ನೋಂದಣಿ ಮತ್ತು ಮಾಹಿತಿ ಪರಿಶೀಲನೆಗೆ ಅವಕಾಶ.

9. 'ಪ್ರತಿಬಿಂಬ', 'ಸ್ಪರ್ಧಾಸೌರಭ' ಇತ್ಯಾದಿ ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸದಸ್ಯರ ಕುಟುಂಬದವರಿಗೆಲ್ಲಾ ಮುಕ್ತ ಅವಕಾಶ.

10. ವಾರ್ಷಿಕ 'ಪ್ರತಿಭಾ ಪುರಸ್ಕಾರ' ಮತ್ತು 'ಸನ್ಮಾನ' ಸಮಾರಂಭಗಳಲ್ಲಿ ಸದಸ್ಯರ ಕುಟುಂಬದವರಿಗೆ ಪ್ರಾಶಸ್ತ್ಯ.

11. 'ಹವ್ಯಕ ಗ್ರಂಥಾಲಯ'ದಲ್ಲಿ ಪುಸ್ತಕಗಳ ಪರಾಮರ್ಶನಕ್ಕೆ ಅವಕಾಶ.

12. 'ಹವ್ಯಕ ಸಮಾಜ ಅಧ್ಯಯನ ಕೇಂದ್ರ'ದ ಚಟುವಟಿಕೆಗಳಲ್ಲಿ ಮುಕ್ತ ಉವಕಾಶ.

ಬಂಧುಗಳೇ, ''ಪರಸ್ಪರಂ ಭಾವಯಂತಃ ಶ್ರೇಯಃ ಪರಮುಮವಾಪ್ಸ್ಯಥ'' ನಮ್ಮ ಒಕ್ಕೊರಲಿನ ಧ್ವನಿಯಾಗಲಿ. ಸ್ನೇಹ–ಸೌಹಾರ್ದ–ಸಹಕಾರ–ಸಂಘಟನೆ–ಸ್ವಾವಲಂಬನೆ– ಸಮೃದ್ಧಿಗಳೆಲ್ಲಕ್ಕೂ ಸಾಕಾರ ರೂಪ ಕೊಡುವಲ್ಲಿ ಸಮಯೋಚಿತ ಸಮನ್ವಯ ಸಾಧಿಸೋಣ. ಮುಖ್ಯವಾಹಿನಿಯಲ್ಲಿ ಸಾಗೋಣ. ''ಓಂ ಸಹನಾವವತು ಸಹನೌ ಭುನಕ್ತು ಸಹವೀರ್ಯಂ ಕರವಾವಹೈ ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ'' ಎಂಬ ಶಾಂತಿ ಮಂತ್ರದ ಕಾರ್ಯಾನುಷ್ಠಾನ ಮಾಡೋಣ.

ಬನ್ನಿ. ಸಂಘಟನೆಯನ್ನು ಬಲಪಡಿಸೋಣ. ನಾವೆಲ್ಲಾ ಶ್ರೀ ಅಖಿಲ ಹವ್ಯಕ ಮಹಾಸಭೆಯ ಸದಸ್ಯರು ಎಂದು ಗುರುತಿಸಿಕೊಳ್ಳುವುದರಲ್ಲಿ ಹೆಮ್ಮೆ ಪಟ್ಟುಕೊಳ್ಳೋಣ.

ನಾರಾಯಣ ಶಾನಭಾಗ

"He who looks deepest into the past looks farthest into the future"

– ಫ್ರೆಂಚ್ ಗಾದೆ

"Think globally and act locally"

ಕರ್ನಾಟಕ ವಿದ್ಯುನ್ನಿಗಮದ ಕಾರ್ಯಪಾಲಕ ಅಭಿಯಂತರ ಹುದ್ದೆಯಿಂದ ಜನವರಿ 2001ರಲ್ಲಿ ನಿವೃತ್ತರಾದ ನಾರಾಯಣ ಶಾನಭಾಗರು ಸದ್ಯ ಸಾಮಾಜಿಕ ಕಾರ್ಯವನ್ನು ತಮ್ಮ ಪ್ರವೃತ್ತಿಯನ್ನಾಗಿಸಿಕೊಂಡಿದ್ದಾರೆ. ಶ್ರೀ ಅಖಿಲ ಹವ್ಯಕ ಮಹಾಸಭೆಯ ಹವ್ಯಕ ಅಧ್ಯಯನ ಕೇಂದ್ರದ ಸ್ಥಾಪಕ ಪ್ರಧಾನ ನಿರ್ದೇಶಕರಾಗಿದ್ದಾರೆ.

....ಮುನ್ನುಡಿಯಿಂದ

ಭಾಷೆಗೂ ಸಂಸ್ಕೃತಿಗೂ ಬಾಳ ಹತ್ರಿನ ನಂಟು. ಒಂದು ಸಂಸ್ಕೃತಿ ನಾಶ ಮಾಡವ್ವು ಹೇಳೀರೆ, ಮೊದ್ಲು ಅವ್ರ ಭಾಷೆ ಆಡದು ಅವ್ರಿಂದ ತಪ್ಸವ್ವು ಅಂತ ಹೇಳ್ತ.

ಹವಿಗನ್ನಡ ಉಳ್ಸಿ ಬೆಳ್ಸದ್ರಲ್ಲಿ ನಮ್ಮ ಶ್ರೀಮಠದ ಪಾತ್ರವೂ ಮುಖ್ಯ.

ಹವ್ಯಕ ಮಹಾಸಭೆಯಲ್ಲಿ ಹವಿಗನ್ನಡದ ಎಲ್ಲ ಪ್ರಾದೇಶಿಕ ಸ್ವರೂಪಗಳ ಪ್ರಾತಿನಿಧ್ಯ ಇದ್ದು, ನುಡಿಯ ಮಹಾಸೂತ್ರದ ಮೂಲಕ ಎಲ್ಲ ಹವ್ಯಕರನ್ನೂ ಒಗ್ಗೂಡಿಸಲ್ಲೆ ಸಾಧ್ಯ ಇದ್ದು. ಮಠ ಬಿಟ್ರೆ ನಮ್ಗೆ ನಮ್ಮದನ್ನ ಹೇಳ್ಕ್ಯಂಬ್ಲೆ ಮಹಾಮನೆಯಾಗಿ ಇಪ್ಪ ಅಂದ್ರೆ ಮಹಾಸಭೆನೇಯ. ಸಮಸ್ತ ಹವ್ಯಕರ ಏಳ್ಗೆ-ಹಿತ ಬಯಸುವ ಮಹಾಸಭೆ ನುಡಿ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸವ್ವು.

ಹವೀಕರಿಗೆ ಮೊದ್ಲು ಹವಿಗನ್ನಡ, ಆಮೇಲೆ ಉಳಿದ ಭಾಷೆ. ಹವಿಗನ್ನಡ ಉಳ್ಸಿ ಬೆಳ್ಸದು ಅಂದ್ರೆ ಹವ್ಯಕ ಸಂಸ್ಕೃತಿ ಮತ್ತು ಅನನ್ಯತೆಯನ್ನು ಉಳ್ಸಿಕೊಂಬುದೇ ಆಗಿರ್ತು.

ಹವಿಗನ್ನಡ ಕುರಿತು ಅಧ್ಯಯನ ಮಾಡವ್ವು ಹೇಳವ್ಕೆ ಒಂದು ಉತ್ಕೃಷ್ಟ ಆಕರವಾಗಿ ಈ ಕೃತಿ ಹೊರಹೊಮ್ಮಿದ್ದು.

ಡಾ|| ಶಾಲಿನಿ ರಘುನಾಥ